## ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ರಾಜ್ಯದಲ್ಲಿ ಸೆ.29ರವರೆಗೆ ವರುಣಾರ್ಭಟ

• ಉದಯವಾಹಿನಿ, ಬೆಂಗಳೂರು

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ರಾಜ್ಯದಲ್ಲಿ ಸೆ.29ರವರೆಗೆ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಂಗಾಳ ಉಪಸಾಗರದ ಉತ್ತರ ಒಡಿಶಾ, ಆಂಧ್ರದ ಕರಾವಳಿ ಭಾಗದಲ್ಲಿ ವಾಯುಭಾರ ಕುಸಿತದಿಂದಾಗಿ ಕರ್ನಾಟಕದಲ್ಲಿ ಭಾರೀ ಮಳೆಯಾಗಲಿದೆ. ಹೀಗಾಗಿ ರಾಜ್ಯದ ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಸೆ.23ರಿಂದ ಸೆ.29ರವರೆಗೆ ಹಲವಡೆ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಉತ್ತರ ಒಳನಾಡು, ಕರಾವಳಿ ಭಾಗ ಹಾಗೂ ಬೆಂಗಳೂರಿನಲ್ಲಿ ಮಳೆಯಾಗಲಿದೆ ಎಂದು ಎಚ್ಚರಿಕೆ ನೀಡಿದೆ.

## ಮಾಜಿ ಸಚಿವ, ಬಿಜೆಪಿ ಶಾಸಕ ಸುರೇಶ್ ಕುಮಾರ್‌ಗೆ ಮಾತೃವಿಯೋಗ

• ಉದಯವಾಹಿನಿ, ಬೆಂಗಳೂರು

ಮಾಜಿ ಸಚಿವ, ರಾಜಾಜಿನಗರದ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರ ತಾಯಿ ಸುಶೀಲಮ್ಮ(92) ವಯೋಸಹಜ ಕಾಯಿಲೆಯಿಂದ ವಿಧಿವಶರಾಗಿದ್ದಾರೆ. ಈ ಕುರಿತು ಸ್ವತಃ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಸುರೇಶ್ ಕುಮಾರ್, ನನ್ನನ್ನು ಹೊತ್ತು, ಹೆತ್ತು ಸಾಕಿ, ತಿದ್ದಿ ತೀಡಿ ಬೆಳೆಸಿದ ನನ್ನಮ್ಮ, ಎಲ್ಲರ ಸುಶೀಲಮ್ಮ ಟೀಚರ್ ಇನ್ನಿಲ್ಲ. ಇಂದು ಬೆಳಗಿನ ಜಾವ ನನ್ನನ್ನು ಬಿಟ್ಟು ಹೊರಟು ಬಿಟ್ಟರು ಎಂದು ಬರೆದಿದ್ದಾರೆ. ಶಿಕ್ಷಕಿಯಾಗಿದ್ದ ಸುಶೀಲಮ್ಮ ಅವರು ನಿವೃತ್ತಿ ಬಳಿಕ ಬೆಂಗಳೂರಿನ ಲಕ್ಷ್ಮಿ ನಾರಾಯಣ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಒಟ್ಟು 8 ಬಾರಿ ನಿರ್ದೇಶಕರಾಗಿ ಆಯ್ಕೆಯಾಗಿದ್ದರು.

## ಟಾರ್ಗೆಟ್ 20 ಲಕ್ಷ, ನಡೆದಿದ್ದು 10 ಸಾವಿರ ಮಂದಿ ಗಣತಿ: ಮೊದಲ ದಿನವೇ ನೀರಸ ಆರಂಭ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರು ಹೊರತುಪಡಿಸಿ ರಾಜ್ಯಾದ್ಯಂತ ಆರಂಭಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನೀರಸ ಆರಂಭ ಕಂಡಿದ್ದು ಮೊದಲ ದಿನ ಕೇವಲ 10 ಸಾವಿರ ಮಂದಿಯ ಸಮೀಕ್ಷೆ ನಡೆಸಲಾಗಿದೆ. ಪ್ರತಿ ದಿನ 20 ಲಕ್ಷ ಜನರ ಸಮೀಕ್ಷೆ ಮಾಡಬೇಕೆಂದು ಗುರಿಯನ್ನು ಹಾಕಲಾಗಿದೆ. ಆದರೆ ಮೊದಲ ದಿನವಾದ 2,765 ಕುಟುಂಬಗಳ 10,642 ಮಂದಿಯ ಸಮೀಕ್ಷೆಯನ್ನ ಮಾತ್ರ ಮಾಡಲಾಗಿದೆ. ಗಣತಿದಾರರಿಗೆ ಆ್ಯಪ್ ಬಗ್ಗೆ ಅಪೂರ್ಣ ಮಾಹಿತಿ, ಇಂಟರ್‌ನೆಟ್ ಇಲ್ಲದ ಕಡೆ ಸಮೀಕ್ಷೆಗೆ ಬಳಸುವ ಆ್ಯಪ್ ಕೆಲಸ ಮಾಡದೇ ಇರುವುದು, ಕೆಲವು ಕಡೆ ಕಿಟ್‌ಗಳು ಸಂಜೆ ವೇಳೆ ಸಿಬ್ಬಂದಿಯ ಕೈ ಸೇರಿದ್ದು, ಇನ್ನು ಕೆಲವರಿಗೆ ಕಿಟ್ ಸಿಕ್ಕಿದರೂ ಮೊಬೈಲ್ ನೆಟ್ವರ್ಕ್ ಕೈಕೊಟ್ಟಿದ್ದರಿಂದ ಮೊದಲ ದಿನ ಕಡಿಮೆ ಸಂಖ್ಯೆಯ ಜನರನ್ನು ಮಾತ್ರ ಗಣತಿ ಮಾಡಲಾಗಿದೆ. ಇಂಟರ್ನೆಟ್ ಇಲ್ಲದೆಡೆ ಆ್ಯಪ್ ಕೆಲಸ ನಿರ್ವಹಿಸದ ಕಾರಣ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆ ಮತ್ತು ಅಂಗನವಾಡಿಗಳಲ್ಲಿ ವಿಶೇಷ ಶಿಬಿರ ಆಯೋಜಿಸಿ ಗಣತಿ ನಡೆಸಲು ಆಯೋಗ ಸಿದ್ಧತೆ ನಡೆಸಿದೆ.

## ಜಾತಿ ವರ್ಗೀಕರಣದ ಬಗ್ಗೆ ಲಿಂಗಾಯತ, ಪಂಚಮಸಾಲಿಗಳಲ್ಲಿ ಗೊಂದಲ!

• ಉದಯವಾಹಿನಿ, ಬೆಂಗಳೂರು

ಸೆಪ್ಟೆಂಬರ್ 22 ರಿಂದ ಜಾತಿ ಗಣತಿ ಆರಂಭವಾಗಿದೆ. ಇದು ಸಾಮಾನ್ಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲ. ಧರ್ಮ ಮತ್ತು ಜಾತಿಯ ಅಚ್ಚುಕಟ್ಟಾದ ಕಾಲಂ ಮುಂದೆ ಹಾಕುವ ಟಿಕ್ ಮಾರ್ಕ್ ಶಕ್ತಿ ಮತ್ತು ಉಳಿವಿನ ಹೋರಾಟವಾಗಿದೆ. ಈ ನಡುವೆ ನಾಡಿನ ದೊಡ್ಡ ಸಮುದಾಯಗಳಲ್ಲಿ ಒಂದಾದ ಲಿಂಗಾಯತರು ಏನೆಂದು ನಮೂದಿಸಬೇಕು? ಧರ್ಮವೋ? ಜಾತಿಯೋ? ಎಂಬ ಪ್ರಶ್ನೆ ಮೂಡಿದೆ. ಕೆಲವೇ ದಿನಗಳ ಹಿಂದೆ, ಪಂಚಮಸಾಲಿ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮಿಗಳು ತಮ್ಮ ಅನುಯಾಯಿಗಳನ್ನು ಧರ್ಮದ ಕಾಲಂ ಅಡಿಯಲ್ಲಿ ಹಿಂದೂ ಮತ್ತು ಜಾತಿಯ ಅಡಿಯಲ್ಲಿ ಪಂಚಮಸಾಲಿ ಎಂದು ಗುರುತಿಸುವಂತೆ ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದರು. ಲಿಂಗಾಯತ ಜನಸಂಖ್ಯೆಯ ಅಂದಾಜು ಶೇ. 30 ರಷ್ಟಿರುವ ಪಂಚಮಸಾಲಿಗಳು ದ್ರೋಹ ಬಗೆದಿದ್ದು ಒಳಸಂಚುಗಳಿಂದ ಸಮಸ್ಯೆ ಅನುಭವಿಸಿದರು. ಹೀಗಾಗಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ತ್ವರಿತವಾಗಿ ಕಾರ್ಯಪ್ರವೃತ್ತವಾಯಿತು, ಆಧ್ಯಾತ್ಮಿಕ ನ್ಯಾಯಸಮ್ಮತತೆಯ ಪೂರ್ವಜರ ನೆಲೆಯಾದ ಕೂಡಲಸಂಗಮ ಪೀಠದಲ್ಲಿ ತಡರಾತ್ರಿ ತುರ್ತು ಅಧಿವೇಶನವನ್ನು ಕರೆದಿತ್ತು. ನಮ್ಮ ಪೀಠವು ಬಸವಣ್ಣನವರ ತತ್ವಶಾಸ್ತ್ರದ ಮೇಲೆ ನಿಂತಿದೆ. ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಸ್ಪಷ್ಟವಾದ ಮಾನ್ಯತೆ ಪಡೆಯುವುದು ನಮ್ಮ ಧ್ಯೇಯವಾಗಿದೆ. ವೀರಶೈವವು 112 ಉಪಪಂಗಡಗಳಲ್ಲಿ ಒಂದಾಗಿದೆ. ನಮ್ಮನ್ನು ಹಿಂದೂ ಎಂದು ಕರೆದುಕೊಳ್ಳುವುದು ನಮ್ಮ ಭವಿಷ್ಯವನ್ನು ಬಿಟ್ಟುಕೊಡುವುದು ಎರಡು ಒಂದೇ ಎಂದು ಟ್ರಸ್ಟ್ ಅಧ್ಯಕ್ಷ ವಿಜಯ್ ಆನಂದ್ ಕಾಶಪ್ಪನವರ್ ಸ್ಪಷ್ಟವಾಗಿ ಹೇಳಿದರು.

## ರೇರಾ ಸುತ್ತೋಲೆಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್!



• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ 2020ರ ಸೆ. 3 ರಂದು ಹೊರಡಿಸಿದ ಸುತ್ತೋಲೆಯನ್ನು ರದ್ದುಗೊಳಿಸುವ ಮೂಲಕ ಕರ್ನಾಟಕ ಹೈಕೋರ್ಟ್ ರಿಯಲ್ ಎಸ್ಟೇಟ್ ಡೆವಲಪರ್‌ಗಳು ಪ್ರಮೋಟರ್ಸ್‌ಗಳಿಗೆ ಬಿಗ್ ರಿಲೀಫ್ ನೀಡಿದೆ. ಈ ಸುತ್ತೋಲೆಯು ಡೆವಲಪರ್‌ಗಳು ತ್ರೈಮಾಸಿಕ ಯೋಜನಾ ನವೀಕರಣಗಳು ಅಥವಾ ವಾರ್ಷಿಕ ಆಡಿಟ್ ವರದಿಗಳನ್ನು ತಡವಾಗಿ ಯೋಜನೆಯು ಎಷ್ಟೇ ದೊಡ್ಡದಾಗಿದ್ದರೂ ಅಥವಾ ಚಿಕ್ಕದಾಗಿದ್ದರೂ, ಅದು ಯಾವ ಹಂತದಲ್ಲಿತ್ತು ಅಥವಾ ಯಾವುದೇ ವಿಶೇಷ ಸಂದರ್ಭಗಳನ್ನು ಒಳಗೊಂಡಿದ್ದರೂ ಸಲ್ಲಿಸಿದರೆ ವಿಳಂಬ ಶುಲ್ಕ' ಪಾವತಿಸುವುದನ್ನು ಕಡ್ಡಾಯಗೊಳಿಸಿತ್ತು. ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ಪೀಠವು, ಆಕ್ಷೇಪಾರ್ಹ ಸುತ್ತೋಲೆಯನ್ನು ಪ್ರಶ್ನಿಸಿ ಬಿಲ್ಡರ್‌ಗಳು, ಡೆವಲಪರ್‌ಗಳು ಮತ್ತು ಪ್ರಮೋಟರ್ಸ್‌ಗಳು ಸಲ್ಲಿಸಿದ 75 ಅರ್ಜಿಗಳನ್ನು ಮಾನ್ಯ ಮಾಡಿ ಆದೇಶ ಹೊರಡಿಸಿದರು. RERA ಯಾವುದೇ ನಾಗರಿಕನ ಮೇಲೆ, ಅದು ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ, ಆರ್ಥಿಕ ಹೊರೆಯನ್ನು ಹೇರಲು ಬಯಸಿದರೆ, ಅದನ್ನು ಕಾನೂನು ಮೂಲಕವೇ ಅಧಿಕೃತಗೊಳಿಸಬೇಕು ಎಂದು ನ್ಯಾಯಾಲಯ ಹೇಳಿದೆ. RERA ನಂತಹ ಪ್ರಾಧಿಕಾರ ದಂಡ ಅಥವಾ ಶುಲ್ಕ ವಿಧಿಸಲು ಮುಂದಾದರೆ ಅದು ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿರಬೇಕು ಮತ್ತು ಶಾಸಕಾಂಗ ಪ್ರಕ್ರಿಯೆಯನ್ನು ಅನುಸರಿಸಿರಬೇಕು. ಈ ಸುತ್ತೋಲೆಗೆ ಸರಿಯಾದ ಕಾನೂನು ಬೆಂಬಲವಿಲ್ಲ, RERA ಕಾನೂನಿನ ಅಡಿಯಲ್ಲಿ ಅಗತ್ಯ ಅಧಿಕಾರವಿಲ್ಲದೆ ಸುತ್ತೋಲೆಯನ್ನು ಬಿಡುಗಡೆ ಮಾಡಿದೆ ಎಂದು ನ್ಯಾಯಾಲಯ ತಿಳಿಸಿದೆ. 2016ರ ರಿಯಲ್ ಎಸ್ಟೇಟ್ ನಿಯಂತ್ರಣ, ಅಭಿವೃದ್ಧಿ ಕಾಯ್ದೆಯ ಸೆಕ್ಷನ್ 11, 34, 37 ರ ಮೇಲಿನ RERA ನ ಅವಲಂಬನೆಯು ಸಂಪೂರ್ಣವಾಗಿ ತಪ್ಪಾಗಿದೆ. ಆದ್ದರಿಂದ, ಈ ಯಾವುದೇ ನಿಬಂಧನೆಗಳಿಂದ, ವಿಳಂಬ ಶುಲ್ಕ ವಿಧಿಸಲು ಸಾಧ್ಯವಿಲ್ಲ. ಅದನ್ನು ವಿಧಿಸುವ ಸುತ್ತೋಲೆಯು ಅನಿಯಂತ್ರಿತ, ಕಾನೂನುಬಾಹಿರ ಮತ್ತು ಅನೂರ್ಜಿತವಾಗಿದೆ ಎಂದಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಅರ್ಜಿದಾರರು ಸುತ್ತೋಲೆಯನ್ನು ರದ್ದುಗೊಳಿಸುವುದರಿಂದ ಉಂಟಾಗುವ ಯಾವುದೇ ಪ್ರಯೋಜನಗಳಿಗೆ ಅರ್ಹರಾಗಿದ್ದಾರೆ. ಈ ನಿರ್ದಿಷ್ಟ ಸುತ್ತೋಲೆಯನ್ನು ರದ್ದುಗೊಳಿಸಲಾಗಿದ್ದರೂ, ಸರ್ಕಾರ ಅಥವಾ RERA ಅಂತಹ ಶುಲ್ಕವನ್ನು ವಿಧಿಸಲು ಹೊಸ ಕಾನೂನು ಅಥವಾ ನಿಯಮವನ್ನು ರಚಿಸುವುದನ್ನು ಇದು ತಡೆಯುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

# ಬೆಂಗಳೂರಿನಲ್ಲಿ ರಸ್ತೆಗುಂಡಿಗಳ ಸಮಸ್ಯೆ


### ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸಲು ಬಿಜೆಪಿ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಸ್ತೆ ಗುಂಡಿ ಸಮಸ್ಯೆಗೆ ಮುಕ್ತಿನೀಡಲು ಸರ್ಕಾರ ಈಗಾಗಲೇ ಗ್ರೇಟರ್ ಬೆಂಗಳೂರು(ಜೆಬಿಎ) ಅಧಿಕಾರಿಗಳಿಗೆ ಗಡುವು ನೀಡಿದೆ. ಆದರೆ ಈ ಮಧ್ಯೆಯೂ ಬುಧವಾರ (ಸೆ.24) ರಸ್ತೆ ತಡೆ ಮೂಲಕ ಪ್ರತಿಭಟನೆ ಮಾಡಲು ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ರಸ್ತೆ ಗುಂಡಿ ಬಗ್ಗೆ ಶಾಲಾ ಮಕ್ಕಳು ವಿಡಿಯೋ ಹಂಚಿಕೊಂಡಿದ್ದರು. ತಮಗೆ ಶಾಲೆಗೆ ಹೋಗಲು, ಆಟವಾಡಲು, ಓದಲು ಸಮಯ ಸಾಕಾಗುತ್ತಿಲ್ಲ. ಎಲ್ಲವೂ ಟ್ರಾಫಿಕ್‌ನಲ್ಲೇ ಸಮಯ ಕಳೆದುಹೋಗುತ್ತಿದೆ ಎಂದು ಹೇಳಿದ್ದರು. ಆನಂತರ ಬ್ಲಾಕ್ ಬಕ್ ಸಿಇಒ ಟ್ವೀಟ್ ಮಾಡಿ, ಕಚೇರಿಯನ್ನು ಸ್ಥಳಾಂತರಿಸುವ ಬಗ್ಗೆ ಮಾತನಾಡಿದ್ದರು. ಈ ಬೆಳವಣಿಗೆಯ ನಂತರ ಸಿಎಂ ಸಿದ್ದರಾಮಯ್ಯನವರು ಸಭೆ ನಡೆಸಿ, ರಸ್ತೆಗುಂಡಿ ಮುಚ್ಚಲು ಗಡುವು ಕೊಟ್ಟಿದ್ದರು. ಹೀಗಿದ್ದರೂ ರಸ್ತೆ ತಡೆದು ಪ್ರತಿಭಟನೆ ನಡೆಸಲು ಬಿಜೆಪಿ ಮುಂದಾಗಿದೆ.

ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣ ಕುಂಠಿತವಾಗಿದೆ. ರಸ್ತೆಗಳು ಗುಂಡಿ ಬಿದ್ದಿವೆ, ರಾಜ್ಯವ್ಯಾಪಿ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ರಸ್ತೆ ಗುಂಡಿಗಳನ್ನೂ ಮುಚ್ಚಲು ಅಸಮರ್ಥವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಸೆ.24 ರಂದು ರಾಜ್ಯದಾದ್ಯಂತ ರಸ್ತೆ ತಡೆದು ಪ್ರತಿಭಟನೆ ನಡೆಸಿ ಸರ್ಕಾರವನ್ನು ಎಚ್ಚರಿಸುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ರವರು ಹೇಳಿದ್ದಾರೆ. ಬಿವೈ ವಿಜಯೇಂದ್ರ ಅವರ ಟ್ವೀಟ್‌ಗೆ ನೆಟ್ಟಿಗನೊಬ್ಬ ಕಾಮೆಂಟ್ ಮಾಡಿದ್ದು, ನಿಮ್ಮ ಕಾಲದಲ್ಲಿ ರಸ್ತೆಗಳು ರಾಣಿ ಕ್ಲಿಯೋಪಾತ್ರರ ಮುಖದಂತೆ ನಯವಾಗಿ ಕಂಗೊಳಿಸುತ್ತಿದ್ದವೇ, ಎಲ್ಲಾ ರಾಜಕೀಯ ಪಕ್ಷಗಳು ಭ್ರಷ್ಟಾಚಾರದಲ್ಲಿ ತೊಡಗಿವೆ. ದೇಶಕ್ಕೆ ಈಗ ಬೇಕಿರುವುದು ಭ್ರಷ್ಟಾಚಾರ ವಿರೋಧಿಸುವ ಜೆನ್ ಜಿ ಎಂದು ಹೇಳಿದ್ದಾರೆ.



**ರಸ್ತೆ ದುಸ್ಥಿತಿ ಸರಕಾರದ ಗಮನಕ್ಕೆ ತರುವೆ:** ಪುರಸಭೆ ವ್ಯಾಪ್ತಿಯ ರಸ್ತೆಗಳು, ತಾಲ್ಲೂಕಿನ ರಾಜ್ಯ ಹೆದ್ದಾರಿಗಳಲ್ಲಿ ಮಳೆಗಾಲದ ಸಂದರ್ಭ ರಸ್ತೆಗಳು ಹಾಳಾಗಿ ಹೋಗುವುದು ಸರ್ವೇ ಸಾಮಾನ್ಯ. ಕೆಲವು ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದು, ಕಿತ್ತು ಹೋಗಿರುವುದು ನಮ್ಮ ಗಮನಕ್ಕೆ ಬಂದಿದೆ. ರಾಜ್ಯ ಸರಕಾರದಿಂದ ದುರಸ್ತಿಗೆ ಈ ವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಶಾಸಕನಾಗಿ ಈ ಕುರಿತು ಸರಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವಾಗಿದ್ದು, ರಸ್ತೆಗಳನ್ನು ಸರಿಪಡಿಸುವ ಕುರಿತು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಿಕಾರಿಪುರ ಕ್ಷೇತ್ರದ ಶಾಸಕರು ಬಿ.ವೈ. ವಿಜಯೇಂದ್ರ ಹೇಳಿದರು.

**ಜನರು ಸರ್ಕಾರದ ವಿರುದ್ಧ ಆಕ್ರೋಶ**

**ರಸ್ತೆ ತಡೆ ಹೋರಾಟ**

**ಕರ್ನಾಟಕದಲ್ಲಿ ಜನರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಬೆಂಗಳೂರು ಮಾತ್ರವಲ್ಲ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲು ರಸ್ತೆಗುಂಡಿ ಸಮಸ್ಯೆ ಇದೆ. ಹೀಗಾಗಿ ಸರ್ಕಾರದ ವಿರುದ್ದ, ಭ್ರಷ್ಟಾಚಾರದ ವಿರುದ್ಧ ಒಂದು ಗಂಟೆ ಕಾಲ ರಸ್ತೆ ತಡೆ ಮೂಲಕ ಪ್ರತಿಭಟನೆ ಮಾಡಲಾಗುತ್ತದೆ. ರಾಜ್ಯದ ಎಲ್ಲಾ ವಿಧಾನಸಭೆಯಲ್ಲಿ ಈ ಹೋರಾಟ ಗಂಭೀರವಾಗಿ ತೆಗೆದುಕೊಳ್ಳಬೇಕು. ಭ್ರಷ್ಟಾಚಾರದಲ್ಲಿ ನಿರತವಾಗಿರುವ ಸರ್ಕಾರ ಮತ್ತು ಅಭಿವೃದ್ಧಿ ಮರೆತ, ರಸ್ತೆ ಗುಂಡಿ ಮುಚ್ಚದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಬೇಕು ಎಂದು ಬಿವೈ ವಿಜಯೇಂದ್ರ ಹೇಳಿದರು.**

## ಆರ್ ಆರ್ ನಗರ ರಾಯರ ಮಠದಲ್ಲಿ ನವರಾತ್ರೋತ್ಸವ

• ಉದಯವಾಹಿನಿ, ಬೆಂಗಳೂರು

ರಾಜರಾಜೇಶ್ವರಿನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಸೆಪ್ಟೆಂಬರ್ 24 ರಿಂದ ಅಕ್ಟೋಬರ್ 2ರ ವರೆಗೆ



ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ : ಶ್ರೀನಿವಾಸ ಕಲ್ಯಾಣದ ಬಗ್ಗೆ ಪ್ರವಚನ ನೀಡುವ ವಿದ್ವಾಂಸರು (ಕ್ರಮವಾಗಿ) : ಶ್ರೀ ಕಲ್ಲಾಪುರ ಪವಮಾನಾಚಾರ್, ಶ್ರೀ ಕರಣಂ ವಾದಿರಾಜಾಚಾರ್, ಶ್ರೀ ಅಂಬರೀಶಾಚಾರ್, ಶ್ರೀ ಸತ್ಯಪ್ರಮೋದಾಚಾರ್ಯ ಕಟ್ಟಿ, ಶ್ರೀ ಭೀಮಸೇನಾಚಾರ್ ಆತನೂರ, ಶ್ರೀ ಆನಂದತೀರ್ಥಾಚಾರ್ ಮಹಿಷಿ, ಶ್ರೀ ಅನಿರುದ್ಧಾಚಾರ್ ಪಾಂಡುರಂಗಿ, ಶ್ರೀ ಅಖಿಲಾಚಾರ್ ಅತ್ರೆ, ಶ್ರೀ ವಿದ್ಯಾಧೀಶಾಚಾರ್ಯ ಗುತ್ತಲ್. ಈ ಪಂಡಿತೋತ್ತಮರು ಶ್ರೀ ಶ್ರೀನಿವಾಸ ಕಲ್ಯಾಣಕ್ಕೆ ಸಂಬಂಧಿಸಿದಂತೆ ವಿವಿಧ ವಿಚಾರಗಳ ಬಗ್ಗೆ ಉಪನ್ಯಾಸ ನೀಡುವರು. (ಸಮಯ : ಪ್ರತಿದಿನ ಸಂಜೆ 6-00 ರಿಂದ 7-00) ಶ್ರೀಗಳವರಿಂದ ಅಮೃತೋಪದೇಶ : ಪ್ರತಿದಿನ ಸಂಜೆ 7-00 ರಿಂದ 8-00 ಶೋಭಾಯಾತ್ರೆ : ಸೆಪ್ಟೆಂಬರ್ 28 ರಂದು ಸಂಜೆ 4-00ಕ್ಕೆ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಶೋಭಾಯಾತ್ರೆ ಹಮ್ಮಿಕೊಂಡಿದೆ.

**ಪೂಜಾ ಕೈಂಕರ್ಯಗಳು :** ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 2ರ ವರೆಗೆ ಪ್ರತಿದಿನ ಬೆಳಗ್ಗೆ : ಪಾದಪೂಜೆ, ತಪ್ತಮುದ್ರಾಧಾರಣೆ, ಸಂಸ್ಥಾನ ಪೂಜೆ ನಡೆಯಲಿದೆ ಎಂದು ಶ್ರೀಮಠದ ಪದಾಧಿಕಾರಿಗಳು ತಿಳಿಸಿದ್ದಾರೆ.

## ರಾಜ್ಯದಲ್ಲಿರೋದು ಗುಂಡಿಗಳನ್ನ ನಡೆಸೋ ಸರ್ಕಾರ: ಸಿ.ಸಿ.ಪಾಟೀಲ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಡೆಯುತ್ತಿರೋದು ಗುಂಡಿಗಳನ್ನ ನಡೆಸೋ ಸರ್ಕಾರ. ಇಂತಹ ಸರ್ಕಾರ ನಾನು ನೋಡೇ ಇಲ್ಲ ಎಂದು ಮಾಜಿ ಸಚಿವ ಸಿ.ಸಿ. ಪಾಟೀಲ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬೆಂಗಳೂರು ಗುಂಡಿಗಳ ಬಗ್ಗೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಇಂತಹ ಗುಂಡಿಗಳನ್ನ ನಡೆಸೋ ಸರ್ಕಾರ ನಾನು ನೋಡೇ ಇರಲಿಲ್ಲ. 6 ಸಾವಿರ, 3 ಸಾವಿರ ಗುಂಡಿಗಳು ಎನ್ನುತ್ತಿದ್ದಾರೆ. ಅಧಿಕಾರಿಗಳನ್ನ ಗುಂಡಿ ಮುಚ್ಚೋಕೆ ನೇಮಿಸಿರುವ



ಉದಯವಾಹಿನಿ ಚಿತ್ರ

ಏಕೈಕ ಸರ್ಕಾರ ಅಂದರೆ ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲಿ ಕರ್ನಾಟಕದಲ್ಲಿ ಇದೇ ಮೊದಲ ಸರ್ಕಾರ ಎಂದು ಕಿಡಿಕಾರಿದರು.

ಸೋಮವಾರ ರಾತ್ರಿ, ನಾನು ವಿಮಾನದಲ್ಲಿ ಬೆಂಗಳೂರಿಗೆ ಬಂದೆ. ಬಿಡಿಎ ಮುಂದೆ ಫ್ಲೈಓವರ್ ಮೇಲೆ ಮಳೆ ಬರುತ್ತಿದ್ದರೂ ಗುಂಡಿ ಮುಚ್ಚುತ್ತಿದ್ದಾರೆ.

ಮಳೆ ಬರೋವಾಗ ಗುಂಡಿ ಮುಚ್ಚಿದ್ರೆ ಇರುತ್ತದೆಯಾ? ಜಿಬಿಎ ಅಧಿಕಾರಿಗಳಿಗೆ ಅಷ್ಟು ಪರಿಜ್ಞಾನ ಇಲ್ಲವಾ? ಮಳೆ ಬರೋವಾಗ ಗುಂಡಿ ಮುಚ್ಚಿದ್ರೆ ಆಗುತ್ತಾ? ಏನು ಮಾಡ್ತಿದೆ ಸರ್ಕಾರ ಎಂದು ವಾಗ್ದಾಳಿ ನಡೆಸಿದರು.

ಪ್ರಧಾನಿ ಮನೆ ಮುಂದೆ ಗುಂಡಿ ಇದೆ ಎಂಬ ಡಿಕೆ ಶಿವಕುಮಾರ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಪ್ರಧಾನಿ ಮನೆ ಮುಂದೆ ಗುಂಡಿ ಇದ್ದರೆ ಡಿಕೆಶಿ ಮನೆ ಮುಂದೆ ಹೊಂಡಾ ಮಾಡಿ ಕೊಳ್ಳೋಕೆ ಹೇಳಿ.

ಇವರ ಮನೆ ಮುಂದೆ ಒಂದು ಲೇಕ್ ಮಾಡಿಕೊಳ್ಳಲಿ. ಏನು ಕೇಳಿದ್ರು, ಮೋದಿ ಮಾಡಿಲ್ಲ, ನೀವು ಇದ್ದಾಗ ಮಾಡಿಲ್ಲ ಎನ್ನುತ್ತಾರೆ. ನಾವು ಇದ್ದಾಗ ಮಾಡಿಲ್ಲ ಅನ್ನೋದಕ್ಕೆ ನೀವು ಅಧಿಕಾರಕ್ಕೆ ಬಂದಿದ್ದೀರಾ. ಮತ್ತೆ ನೀವು ಹೋಗೋಕೆ ತಯಾರಾಗಿ, ನಾವು ಬರುತ್ತೇವೆ ಎಂದು ಹರಿಹಾಯ್ದರು

## ಜನಸಂದಣಿ ನಿಯಂತ್ರಣ ಮಸೂದೆ ಪರಿಶೀಲನೆಗೆ 11 ಸದಸ್ಯರ ಸಮಿತಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಿಧಾನಸಭೆ ಸ್ಪೀಕರ್ ಯು ಟಿ ಖಾದರ್ 'ಕರ್ನಾಟಕ ಜನಸಂದಣಿ ನಿಯಂತ್ರಣ ಕಾರ್ಯಕ್ರಮಗಳು ಸಭೆ ನಡೆಯುವ ಸ್ಥಳಗಳಲ್ಲಿ ಜನಸಂದಣಿಯನ್ನು ನಿರ್ವಹಿಸುವುದು ಮಸೂದೆ, 2025 ನ್ನು ಪರಿಶೀಲಿಸಲು ಗೃಹ ಸಚಿವ ಜಿ ಪರಮೇಶ್ವರ ನೇತೃತ್ವದಲ್ಲಿ ಸದನದ 11 ಸದಸ್ಯರ ಪರಿಶೀಲನಾ ಸಮಿತಿಯನ್ನು ರಚಿಸಿದ್ದಾರೆ. ಕಳೆದ ತಿಂಗಳು ನಡೆದ ವಿಧಾನಮಂಡಲ ಅಧಿವೇಶನದಲ್ಲಿ, ಪ್ರಸ್ತಾವಿತ ಶಾಸನ ಪ್ರತಿಭಟನೆಗಳನ್ನು ಕಡಿಮೆ ಮಾಡಬಹುದು,ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳ ಮೇಲೆ



ಪರಿಣಾಮ ಬೀರಬಹುದು ಎಂಬ ಕಳವಳ ವ್ಯಕ್ತವಾಗತೊಡಗಿತ್ತು. ವಿರೋಧ ಪಕ್ಷಗಳು ಕರ್ನಾಟಕದ ಕಾಂಗ್ರೆಸ್ ಸರ್ಕಾರವನ್ನು ಮಸೂದೆಯನ್ನು ವಿವರವಾದ ಚರ್ಚೆ ಮತ್ತು ಪರಿಶೀಲನೆಗಾಗಿ ಸದನ ಸಮಿತಿಗೆ ಉಲ್ಲೇಖಿಸುವಂತೆ ಒತ್ತಾಯಿಸಿದ್ದವು. ಜೂ. 4 ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ನಡೆದ ಕಾಲ್ತುಳಿತದಲ್ಲಿ 11 ಜನರು ಸಾವನ್ನಪ್ಪಿದ ನಂತರ ಸರ್ಕಾರ ಈ ಮಸೂದೆಯನ್ನು ಪರಿಚಯಿಸಿದೆ. ದಂಡ ವಿಧಿಸುವ ನಿಬಂಧನೆಗಳನ್ನು ಹೊಂದಿರುವ ಮಸೂದೆಯು ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಕಾರ್ಯಕ್ರಮಗಳು ಸಮಾರಂಭಗಳಲ್ಲಿ ಸಾಮೂಹಿಕ ಸಭೆಗಳನ್ನು ನಿರ್ವಹಿಸುವುದು ಕಾನೂನುಬಾಹಿರ ಸಭೆಗಳನ್ನು ತಡೆಯುವ ಗುರಿಯನ್ನು ಹೊಂದಿದೆ. ಸದನದ ನಿರ್ಣಯದ ಪ್ರಕಾರ, ಸ್ಪೀಕರ್ ಅವರು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ವ್ಯವಹಾರ ನಡವಳಿಕೆ ನಿಯಮಗಳ ನಿಯಮ 247 ರ ಅಡಿಯಲ್ಲಿ ಮಸೂದೆಯನ್ನು ಪರಿಶೀಲಿಸಿ ವರದಿ ಸಲ್ಲಿಸಲು ವಿಧಾನಸಭೆಯ ಸದಸ್ಯರನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸಿದ್ದಾರೆ ಎಂದು ಸೆ. 19 ರಂದು ಮಾಧ್ಯಮಗಳಿಗೆ ಬಿಡುಗಡೆಯಾದ ವಿಧಾನಸಭೆ ಸಚಿವಾಲಯದ ಟಿಪ್ಪಣಿ ತಿಳಿಸಿದೆ.

## ಆಟೋ ಮೊಬೈಲ್ಸ್ ತಯಾರಕರಿಗೆ ರಾಜ್ಯ ಸರ್ಕಾರ ಸೂಚನೆ!

• ಉದಯವಾಹಿನಿ, ಬೆಂಗಳೂರು

ಆಟೋಮೊಬೈಲ್ ತಯಾರಕರು ಮತ್ತು ಡೀಲರ್‌ಗಳು ಅವಧಿ ಮುಗಿದಿರುವ ವಾಹನಗಳು, ಕಾರುಗಳು, ದ್ವಿಚಕ್ರ ವಾಹನಗಳು ಮತ್ತು ತ್ರಿಚಕ್ರ ವಾಹನಗಳನ್ನು ಸ್ಕ್ರ್ಯಾಪಿಂಗ್ ಮತ್ತು ಮರುಬಳಕೆಗಾಗಿ ವಾಪಸ್ ಪಡೆದುಕೊಳ್ಳುವಂತೆ ಕರ್ನಾಟಕ ರಾಜ್ಯ ಪರಿಸರ ಇಲಾಖೆಯು ನಿರ್ದೇಶಿಸಿದೆ.

ಸ್ಕ್ರ್ಯಾಪ್ ಮಾಡಿದ ವಾಹನಗಳಿಂದ ಹೊರತೆಗೆಯಲಾದ ಲೋಹಗಳು ಮತ್ತು ಇತರ ವಸ್ತುಗಳನ್ನು ಮರುಬಳಕೆ ಮಾಡಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದೇ ಸಮಯದಲ್ಲಿ, ಬಳಕೆಯಾಗದ ಘಟಕಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಅಥವಾ ದಹನಕ್ಕಾಗಿ ಸಿಮೆಂಟ್ ಕೈಗಾರಿಕೆಗಳಿಗೆ ಕಳುಹಿಸಬೇಕು. ಈ ಸಂಬಂಧ ಕಂಪನಿಗಳು ಪ್ರಕ್ರಿಯೆಯ ಆಡಿಟ್ ವರದಿಗಳನ್ನು ಸಹ ನಿರ್ವಹಿಸಬೇಕಾಗುತ್ತದೆ.

ಪರಿಸರ ಇಲಾಖೆಯು ಸರ್ಕಾರದ ಅನುಮೋದನೆಗಾಗಿ ವಾಹನ ಖರೀದಿ-ಹಿಂತಿರುಗಿಸುವಿಕೆ ಮತ್ತು ಮರುಬಳಕೆಯ ಕುರಿತು ಕರಡು ನೀತಿಯನ್ನು ಸಿದ್ಧಪಡಿಸುತ್ತಿದೆ. ಶೀಘ್ರದಲ್ಲೇ ಸರ್ಕಾರದೊಂದಿಗೆ ಚರ್ಚಿಸಿ ನೀತಿ ನಿಯಮ ರೂಪಿಸಲಾಗುವುದು ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತ್ಯಾಜ್ಯವನ್ನು ಕಡಿಮೆ ಮಾಡಲು, ಬಹು ರೀತಿಯ ವಾಹನ ಮಾಲಿನ್ಯವನ್ನು ಪರಿಹರಿಸಲು ಹಳೆಯ ವಾಹನಗಳಿಂದ ಬಳಸಬಹುದಾದ ಲೋಹಗಳನ್ನು ಹೊರತೆಗೆಯಲು ತಯಾರಕರನ್ನು ಸೂಚಿಸಲಾಗಿದೆ.

ವಾಹನ ಹೊರಸೂಸುವಿಕೆಯಿಂದ ಮಾಲಿನ್ಯವಾಗುತ್ತದೆ



ಉದಯವಾಹಿನಿ ಚಿತ್ರ

ಎಂಬುದು ತಪ್ಪು ಕಲ್ಪನೆ. ಸ್ಕ್ರ್ಯಾಪ್ ರಾಶಿಗಳು, ಕೊಳೆಯುತ್ತಿರುವ ಲೋಹಗಳು ಮತ್ತು ಸೋರಿಕೆಯಾಗುವ ರಾಸಾಯನಿಕಗಳು ಸಮಾನವಾಗಿ ಹಾನಿ ಉಂಟು ಮಾಡುತ್ತವೆ. ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಜೊತೆಗೆ ವಿಶೇಷವಾಗಿ ವಿದ್ಯುತ್ ವಾಹನಗಳು, ಬ್ಯಾಟರಿ ಮತ್ತು ಸೀಸದ ವಿಲೇವಾರಿ ತುರ್ತು ಸಮಸ್ಯೆಗಳಾಗಿವೆ ಎಂದು ಅಧಿಕಾರಿ ಹೇಳಿದರು.

ವಾಹನಗಳನ್ನು ಹಿಂದಕ್ಕೆ ತೆಗೆದುಕೊಂಡು ಮರುಬಳಕೆ ಮಾಡುವ ಕಂಪನಿಗಳಿಗೆ ಪ್ರೋತ್ಸಾಹ ನೀಡುವ ಬಗ್ಗೆಯೂ ಮಾತುಕತೆಗಳು ನಡೆಯುತ್ತಿವೆ. ಉತ್ಪಾದನಾ ಘಟಕ ವಿಸ್ತರಿಸುವಾಗ ಅಥವಾ ಹೊಸ ಯೋಜನೆಗಳಿಗೆ ಅನುಮೋದನೆಗಳನ್ನು ಪಡೆಯುವಾಗ ಇದರಿಂದ ಪ್ರಯೋಜನವಾಗಲಿದೆ. ಈ ಯೋಜನೆಗಳಿಂದ ಅವರಿಗೆ ಹೆಚ್ಚಿನ ಉಪಯೋಗವಾಗಲಿದೆ, ಹಣಕಾಸು ಲೆಕ್ಕಪರಿಶೋಧನೆ ವ್ಯವಹಾರ ಕಾರ್ಯಾಚರಣೆಗಳನ್ನು ಹೆಚ್ಚಿಸಬಹುದು.

**ಪರಿಸರ ವಿಜ್ಞಾನದ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸಲು ಮಾತನಾಡಿ. ಅರಣ್ಯೀಕರಣ ಅಭಿಯಾನ ಅಥವಾ ಮ್ಯಾರಥಾನ್‌ಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿ ಪರಿಸರಕ್ಕೆ ಕೊಡುಗೆ ನೀಡುತ್ತದೆ ಎಂದು ಹೇಳಿದರು. ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಮತ್ತು ಪರಿಸರ ಜವಾಬ್ದಾರಿ ಮರ ನೆಡುವುದನ್ನು ಮೀರಿ ಹೋಗಬೇಕು. ವಾಹನಗಳನ್ನು ಹಿಂದಕ್ಕೆ ತೆಗೆದುಕೊಂಡು ಜವಾಬ್ದಾರಿಯುತವಾಗಿ ಸ್ಕ್ರ್ಯಾಪ್ ಮಾಡುವುದರಿಂದ ಪರಿಸರಕ್ಕೆ ಸ್ಪಷ್ಟ ಪ್ರಯೋಜನಗಳನ್ನು ತರಬಹುದು ಎಂದು ಅವರು ಹೇಳಿದರು.**

ಇದಲ್ಲದೆ, ವಾಹನಗಳನ್ನು ವಾಪಸ್ ಖರೀದಿಸುವಾಗ ಸ್ಕ್ರ್ಯಾಪ್ ಮಾಡುವಾಗ ಸಂಸ್ಥೆಗಳು ಗ್ರಾಹಕರಿಗೆ ರಿಯಾಯಿತಿಗಳನ್ನು ನೀಡುವ ನಿರೀಕ್ಷೆಯಿದೆ. ಸಿಎಸ್‌ಆರ್, ಸಿಇಆರ್ ಚೌಕಟ್ಟಿನ ಅಡಿಯಲ್ಲಿ, ಕಂಪನಿಗಳು ಒಳಚರಂಡಿ ಮತ್ತು ತೃತೀಯ ಹಂತದ ಸಂಸ್ಕರಣಾ ಘಟಕಗಳನ್ನು ಸಮುದಾಯ ಸಂಸ್ಕರಣಾ ಸೌಲಭ್ಯಗಳಾಗಿ ವಿಸ್ತರಿಸಲು ಒತ್ತಾಯಿಸಲಾಗುತ್ತಿದೆ ಮತ್ತು ಇದರಿಂದಾಗಿ ಸುತ್ತಮುತ್ತಲಿನ ಹಳ್ಳಿಗಳು ಪ್ರಯೋಜನ ಪಡೆಯಲು ಮತ್ತು ಪರಿಸರ ಮಾಲಿನ್ಯವನ್ನು ತಡೆಯಲು ಸಹಾಯ ಮಾಡುತ್ತದೆ.

## ವಿಪ್ರೋ ಕ್ಯಾಂಪಸ್ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡಿ

• ಉದಯವಾಹಿನಿ, ಬೆಂಗಳೂರು

ಹೊರ ವರ್ತುಲ ರಸ್ತೆ ಕಾರಿಡಾರ್‌ನಲ್ಲಿ, ವಿಶೇಷವಾಗಿ ಇಬ್ಲೂರು ಜಂಕ್ಷನ್ ಬಳಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ನಿಮ್ಮ ಕ್ಯಾಂಪಸ್ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಪ್ರೋ ಸಂಸ್ಥಾಪಕ-ಅಧ್ಯಕ್ಷ ಅಜೀಂ ಪ್ರೇಮ್‌ಜಿ ಅವರಿಗೆ ಪತ್ರ ಬರೆದು ಕೇಳಿಕೊಂಡಿದ್ದಾರೆ.

ಮುಖ್ಯಮಂತ್ರಿಗಳು ಸೆ.19 ರಂದು ಬರೆದ ಪತ್ರದಲ್ಲಿ, ಬೆಂಗಳೂರು ಪ್ರಸ್ತುತ ಎದುರಿಸುತ್ತಿರುವ ಪ್ರಮುಖ ಸವಾಲುಗಳಲ್ಲಿ ಪೀಕ್ ಅವರ್ ಸಂಚಾರ ದಟ್ಟಣೆಯು ಒಂದಾಗಿದ್ದು, ಇದು ಚಲನಶೀಲತೆ, ಉತ್ಪಾದಕತೆ ಮತ್ತು ನಗರ ಜೀವನದ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಹೇಳಿದ್ದಾರೆ. ನಾನು ನಿಮಗೆ ನನ್ನ ಆತ್ಮೀಯ ಶುಭಾಶಯಗಳನ್ನು ಸಲ್ಲಿಸುತ್ತೇನೆ ಮತ್ತು



ಉದಯವಾಹಿನಿ ಚಿತ್ರ

ಕರ್ನಾಟಕದ ಐಟಿ ಪರಿಸರ ವ್ಯವಸ್ಥೆಯ ಪ್ರಗತಿಗೆ, ಒಟ್ಟಾರೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ವಿಪ್ರೋದ ನಿರಂತರ ಕೊಡುಗೆಯನ್ನು ಪ್ರಾಮಾಣಿಕವಾಗಿ ಪ್ರಶಂಸಿಸುತ್ತೇನೆ. ಪ್ರಸ್ತುತ ಬೆಂಗಳೂರು ಎದುರಿಸುತ್ತಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿರುವ ವಿಶೇಷವಾಗಿ ಇಬ್ಲೂರು ಜಂಕ್ಷನ್‌ನಲ್ಲಿರುವ ಹೊರ ವರ್ತುಲ ರಸ್ತೆ ಕಾರಿಡಾರ್‌ನಲ್ಲಿ, ಪೀಕ್ ಸಮಯದಲ್ಲಿ ತೀವ್ರ ಸಂಚಾರ ದಟ್ಟಣೆಯಾಗುತ್ತಿದೆ. ಇದು ಚಲನಶೀಲತೆ, ಉತ್ಪಾದಕತೆ ಮತ್ತು ನಗರ ಜೀವನದ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಪರಸ್ಪರ ಒಪ್ಪಿದ ನಿಯಮಗಳು ಮತ್ತು ಅಗತ್ಯ ಭದ್ರತಾ ಪರಿಗಣನೆಗಳಿಗೆ ಒಳಪಟ್ಟು ವಿಪ್ರೋ ಕ್ಯಾಂಪಸ್ ಮೂಲಕ ಸೀಮಿತ ವಾಹನ ಸಂಚಾರಕ್ಕೆ ಅವಕಾಶ ನೀಡುವ ಸಾಧ್ಯತೆಯನ್ನು ನಾನು ಅನ್ವೇಷಿಸಲು ಬಯಸುತ್ತೇನೆ. ಸಂಚಾರ ಮತ್ತು ನಗರ ಚಲನಶೀಲತೆ ತಜ್ಞರ ಪ್ರಾಥಮಿಕ ಮೌಲ್ಯಮಾಪನಗಳ ನಂತರ ಪಕ್ಕದ ಪ್ರದೇಶಗಳಲ್ಲಿ, ವಿಶೇಷವಾಗಿ ಪೀಕ್ ಕಚೇರಿ ಸಮಯದಲ್ಲಿ ವಿಪ್ರೋ ಕ್ಯಾಂಪಸ್ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡಿದರೆ ಸುಮಾರು ಶೇ.30 ರಷ್ಟು ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಎಂದು ಸೂಚಿಸುತ್ತದೆ ಎಂದು ಸಿಎಂ ವಿವರಿಸಿದ್ದಾರೆ.

## ಬಿಬಿಎಂಪಿ ಯುಗಾಂತ್ಯ ಬೆನ್ನಲ್ಲೇ ಬೀದಿ ನಾಯಿಗಳಿಗೆ ಬಿರಿಯಾನಿ ಭಾಗ್ಯ ಯೋಜನೆ ಸ್ಥಗಿತ?

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಿಬಿಎಂಪಿ ಐದು ಪಾಲಿಕೆಗಳಾಗಿ ವಿಭಜನೆಯಗೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಿಬಿಎ ಆಗಿ ಪರಿವರ್ತನೆಗೊಂಡಿದ್ದು, ಬೆನ್ನಲ್ಲೇ ಬಿಬಿಎಂಪಿ ಕೈಗೆತ್ತಿಕೊಂಡಿದ್ದ ನಾಯಿಗಳಿಗೆ ಆಹಾರ ನೀಡುವ



ಉದಯವಾಹಿನಿ ಚಿತ್ರ

ಯೋಜನೆ ಕೂಡ ಸ್ಥಗಿತಗೊಂಡಂತಾಗಿದೆ. ಬೀದಿ ನಾಯಿಗಳಿಗೆ ಪ್ರತಿ ದಿನ ಪೌಷ್ಟಿಕ ಆಹಾರ ನೀಡಲು ರೂ.2.88 ಕೋಟಿ ವೆಚ್ಚದ ಯೋಜನೆಯೊಂದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪಿಸಿತ್ತು.

ನಾಯಿಗಳಿಗೆ ಆಹಾರ ನೀಡುವ ಕಡತವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರಿಗೆ ಸಲ್ಲಿಸಲಾಗಿದ್ದು, ಯೋಜನೆ ಬಗ್ಗೆ ಐದು ನಿಗಮಗಳು ನಿರ್ಧಾರ ಕೈಗೊಳ್ಳಬೇಕಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಪ್ರಧಾನಿ ನಿವಾಸದ ಮುಂದಿರುವ ರಸ್ತೆಯಲ್ಲೂ ಗುಂಡಿಗಳಿವೆ

### ರಸ್ತೆಗುಂಡಿ ಮುಚ್ಚುವ ಕಾರ್ಯಾಚರಣೆ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಮಾತನಾಡಿದರು

• ಉದಯವಾಹಿನಿ, ಬೆಂಗಳೂರು

ರಸ್ತೆಗುಂಡಿ ಸಮಸ್ಯೆ ಕರ್ನಾಟಕದಲ್ಲಿ ಮಾತ್ರ ಇಲ್ಲ. ಎಲ್ಲಾ ರಾಜ್ಯದಲ್ಲೂ ಇರುತ್ತೆ. ಆದರೆ, ಬೆಂಗಳೂರನ್ನು ಮಾತ್ರ ತೋರಿಸಲಾಗುತ್ತಿದೆ. ನಾನು ದೆಹಲಿಗೆ ಹೋದಾಗ ನೋಡಿದ್ದೇನೆ. ಪ್ರಧಾನಿ ನಿವಾಸದ ಮುಂದಿರುವ ರಸ್ತೆಯಲ್ಲೂ ಗುಂಡಿಗಳಿವೆ. ನೀವು ಬೇಕಾದರೆ ಹೋಗಿ ನೋಡಿ ಎಂದು ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ರಸ್ತೆಗುಂಡಿ ಮುಚ್ಚುವ ಕಾರ್ಯಾಚರಣೆ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಮಾತನಾಡಿದರು.

ಬೆಂಗಳೂರು ರಸ್ತೆ ಗುಂಡಿ ಮತ್ತು ಟ್ರಾಫಿಕ್ ಸಮಸ್ಯೆಗೆ ರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಪಡೆಯುತ್ತಿದೆ. ಕಳೆದ ಕೆಲವು ದಿನಗಳ ಹಿಂದೆ ಬ್ಲಾಕ್ ಬಕ್ ಸಂಸ್ಥೆಯ ಸಿಇಒ ತಮ್ಮ ಕಚೇರಿ ಸುತ್ತಮುತ್ತಲಿನ ರಸ್ತೆಗಳಲ್ಲಿ ಗುಂಡಿ ಮತ್ತು ಸಂಚಾರ ದಟ್ಟಣೆಯಿಂದಾಗಿ ಹೆಚ್ಚು ಕಾಲ ರಸ್ತೆಯಲ್ಲೇ ಕಳೆಯಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ನಾವು ಬೆಂಗಳೂರು ತೊರೆಯುತ್ತೇವೆ ಎಂದು ಟ್ವೀಟ್ ಹಂಚಿಕೊಂಡಿದ್ದರು. ಆ ನಂತರ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಗ್ರೇಟರ್ ಬೆಂಗಳೂರು ಅಧಿಕಾರಿಗಳ ಜೊತೆ ಸಭೆ ನಡೆಸಿ, ಗುಂಡಿ ಮುಚ್ಚಲು ಗಡುವು ನೀಡಿದ್ದರು.

**ಹೆಚ್ಚು ಕಾಲ ರಸ್ತೆಯಲ್ಲೇ ಕಳೆಯಬೇಕಾದ ಪರಿಸ್ಥಿತಿ**

**ಸಾವಿರ ಗುಂಡಿ ಮುಚ್ಚುವ ಕಾರ್ಯ:** ಬೆಂಗಳೂರಿನಲ್ಲಿ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್, ಒಂದು ಕಾರ್ಪೊರೇಷನ್ ವ್ಯಾಪ್ತಿಯಂತೆ ದಿನಕ್ಕೆ ಸಾವಿರ ಗುಂಡಿಗಳನ್ನು ಮುಚ್ಚುವ ಕೆಲಸವಾಗುತ್ತಿದೆ. ಮಳೆ ಇದ್ರು ಗ್ರೇಟರ್ ಬೆಂಗಳೂರು ಕಡೆಯಿಂದ ಗುಂಡಿ ಮುಚ್ಚುವ ಕಾರ್ಯಾಚರಣೆ ತ್ವರಿತಗೊಂಡಿದೆ. ಶೀಘ್ರವೇ ರಸ್ತೆಗುಂಡಿಗಳಿಗೆ ಮುಕ್ತಿ ಸಿಗಲಿದೆ. ಇದನ್ನು ಐಟಿ ಕಂಪನಿಗಳು ತಿಳಿದುಕೊಳ್ಳಲಿ ಎಂದು ಹೇಳಿದರು.

**ಪಿಎಂ ಮನೆ ಮುಂದೆನೂ ಗುಂಡಿ ಇದೆ:** ಮುಂದುವರೆದು, ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಒಂದು ರೌಂಡ್ ಹಾಕಿದೆ. ಪ್ರಧಾನ ಮಂತ್ರಿ ನಿವಾಸ ರಸ್ತೆಯಲ್ಲಿಯೇ ಎಷ್ಟೊಂದು ಗುಂಡಿ ಇದೆ. ಎಲ್ಲಾ ಕಡೆಯೂ ರಸ್ತೆ ಗುಂಡಿ ಸಮಸ್ಯೆ ಇರುತ್ತದೆ. ಆದರೆ, ಬೆಂಗಳೂರಲ್ಲಿ ಮಾತ್ರ ಎಂದು ಬಿಂಬಿಸಲಾಗುತ್ತಿದೆ. ನಮ್ಮ ಕೆಲಸ ನಾವು ಮಾಡುತ್ತೇವೆ. ಇದನ್ನೇ ದೊಡ್ಡದಾಗಿ ವಿಚಾರ ಮಾಡೋದು ಬೇಡ. ಈ ಮುಂಚೆ ರಸ್ತೆ ಗುಂಡಿ ಯಾರಿಗೂ ಕಾಣುತ್ತಿರಲಿಲ್ಲ. ಈಗ ಚುನಾವಣೆ ಹತ್ರ ಬರುತ್ತಿದೆ. ಹೀಗಾಗಿ ದೊಡ್ಡದಾಗಿ ಸಮಸ್ಯೆ ಕಾಣಿಸುತ್ತಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಕಿಡಿಕಾರಿದರು.



**ಸಿಎಂ ಖಡಕ್ ವಾರ್ನಿಂಗ್**

**ರಸ್ತೆ ಗುಂಡಿಗಳಿಂದ ವಾಹನ ಸವಾರರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ, ಈ ಬಗ್ಗೆ ಆಕ್ರೋಶ ಕೇಳಿಬರುತ್ತಿದ್ದರೂ ಈ ವರೆಗೆ ಗುಂಡಿ ಮುಚ್ಚದೆ ಇರುವುದು ಅಕ್ಷಮ್ಯ. ಪ್ರತಿ ವಾರ್ಡ್‌ನ ಇಂಜಿನಿಯರ್‌ಗಳು, ಮುಖ್ಯ ಇಂಜಿನಿಯರ್‌ಗಳು ಈಗಾಗಲೇ ಕ್ರಮ ವಹಿಸಬೇಕಿತ್ತು.**

**ಕಾಮಗಾರಿ ಪ್ರಗತಿಯಲ್ಲಿದೆ:** ಬೆಂಗಳೂರಿನ ರಸ್ತೆ ಗುಂಡಿಗಳಿಗೆ ಕಡಿವಾಣಹಾಕಲು ನಮ್ಮ ಸರ್ಕಾರ ಮುಂದಾಗಿದೆ. ಈಗಾಗಲೇ ಬೆಂಗಳೂರು ಉತ್ತರ, ದಕ್ಷಿಣ, ಕೇಂದ್ರ, ಪೂರ್ವ, ಪಶ್ಚಿಮ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಡಾಂಬರೀಕರಣ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಗುಂಡಿ ಮುಚ್ಚುವ ಕಾರ್ಯ ಭರದಿಂದ ಸಾಗುತ್ತಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್‌ರವರು ತಮ್ಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಇನ್ನು ಒಂದು ತಿಂಗಳ ಕಾಲಾವಕಾಶ ನೀಡುತ್ತೇವೆ. ರಸ್ತೆ ಗುಂಡಿಗಳನ್ನು ಮುಚ್ಚಲು ಕಟ್ಟುನಿಟ್ಟಿನ ಕ್ರಮ ವಹಿಸಲೇಬೇಕು ರಸ್ತೆಗಳನ್ನು ಸಂಚಾರ ಯೋಗ್ಯ ಮಾಡಲೇಬೇಕು. ರಸ್ತೆ ನಿರ್ವಹಣೆಗೆ ಸೂಕ್ತ ಕ್ರಮ ವಹಿಸದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಗುತ್ತಿಗೆದಾರರೊಂದಿಗೆ ಶಾಮೀಲಾಗದೆ ಒದಗಿಸಿರುವ ಅನುದಾನಕ್ಕೆ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು, ವೈಜ್ಞಾನಿಕವಾದ ಕಾಮಗಾರಿಗಳನ್ನು ಪೂರೈಸಲು ಕ್ರಮ ವಹಿಸಬೇಕು? ಎಂದು ಸಿಎಂ ಸಿದ್ದರಾಮಯ್ಯ ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದರು.

# ಅಂತರಾಳದಿಂದ... EDITORIAL

## ಎಚ್–1ಬಿ ವೀಸಾ: ದುಬಾರಿ ಶುಲ್ಕ: ಭಾರತದ ಹಿತಾಸಕ್ತಿಗೆ ಪೆಟ್ಟು

ಎಚ್‌–1ಬಿ ವೀಸಾ ಪಡೆದು ಅಮೆರಿಕ ಪ್ರವೇಶಿಸುವ ಪ್ರತಿ ಉದ್ಯೋಗಿಯ ಪರವಾಗಿ ಆತನ ಕಂಪನಿಯು 1 ಲಕ್ಷ ಅಮೆರಿಕನ್ ಡಾಲರ್ (ಅಂದಾಜು ರೂ. 88 ಲಕ್ಷ) ಪಾವತಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿರುವ ಆದೇಶ, ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳುವ ಭಾರತೀಯ ಯುವಜನರ ಕನಸನ್ನು ಗಾಸಿಗೊಳಿಸುವಂತಹದ್ದು. ಈಗಾಗಲೇ ಈ ವೀಸಾ ಹೊಂದಿರುವವರಿಗೆ ಇಷ್ಟು ದೊಡ್ಡ ಮೊತ್ತ ಪಾವತಿಯ ಹೊರೆ ಇರುವುದಿಲ್ಲ. ಹೊಸದಾಗಿ ಎಚ್‌–1ಬಿ ವೀಸಾ ಬಯಸುವವರು ಒಂದು ಬಾರಿ ಮಾತ್ರ ಈ ಮೊತ್ತ ಪಾವತಿಸಬೇಕು.

ಹೀಗಿದ್ದರೂ, ಅಮೆರಿಕದ ಅಧ್ಯಕ್ಷರ ಈ ನಡೆಯು ಅಮೆರಿಕ ಪ್ರವೇಶಿಸಲು ಬಯಸುವ ಭಾರತದ ಉದ್ಯೋಗಿಗಳನ್ನು ಹಿಂದಕ್ಕೆ ಕಳುಹಿಸುವ ಉದ್ದೇಶವನ್ನು ಹೇಳುತ್ತಿದೆ. ಹೊಸದಾಗಿ ಅಮೆರಿಕ ಪ್ರವೇಶಿಸಲು ಬಯಸುವವರಿಗೆ ಅಡೆತಡೆಗಳನ್ನು ಹೆಚ್ಚಿಸುವ ಇನ್ನಷ್ಟು ಕ್ರಮಗಳು ಜಾರಿಗೆ ಬರಬಹುದು, ವಲಸಿಗರು ಅಮೆರಿಕ ತೊರೆಯುವಂತಹ ಸನ್ನಿವೇಶ ಸೃಷ್ಟಿಯಾಗಬಹುದು ಎಂಬುದನ್ನು ಈ ಕ್ರಮವು ಮುಂದಾಗಿ ಹೇಳುತ್ತಿದೆ. ಈ ಕ್ರಮದಿಂದಾಗಿ, ಅಮೆರಿಕದ ಹಾಗೂ ಭಾರತದ ಮುಂಚೂಣಿ ತಂತ್ರಜ್ಞಾನ ಕಂಪನಿಗಳಿಗೆ ಪ್ರತಿಭಾವಂತರು ಲಭ್ಯವಾಗುವುದು ಕಡಿಮೆ ಆಗಬಹುದು.



**ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳಲು ಬಯಸುವ ಭಾರತದ ಯುವಜನರ ಸುಂದರ ಸ್ವಪ್ನಗಳ ಮೇಲೆ ಟ್ರಂಪ್‌ದಾಳಿ ನಡೆಸಿದ್ದಾರೆ. ಸ್ನೇಹದ ಹೆಸರಿನಲ್ಲಿ ಭಾರತದ ಮೇಲೆ ಅಮೆರಿಕ ನಿರ್ಬಂಧಗಳನ್ನು ಹೇರುತ್ತಿದೆ.**

ಅಮೆರಿಕವು ಕೈಗೊಳ್ಳುತ್ತಿರುವ ರಕ್ಷಣಾತ್ಮಕ ಕ್ರಮಗಳು ಅಲ್ಲಿನ ಅನ್ವೇಷಣೆಯ ಪರಿಸರವನ್ನು ಹಾಳುಗೆಡವಬಹುದು. ತಂತ್ರಜ್ಞಾನ ಕ್ಷೇತ್ರದಲ್ಲಿನ ಪಾಲುದಾರಿಕೆಗಾಗಿ ಭಾರತವು ಚೀನಾ ಕಡೆ ಹೆಚ್ಚು ವಾಲಬಹುದು. ಟ್ರಂಪ್ ಅವರ ಈ ಕ್ರಮವನ್ನು ಅಮೆರಿಕದ ನ್ಯಾಯಾಲಯಗಳು ಅಸಿಂಧುಗೊಳಿಸಬಹುದು ಎಂದು ಕೆಲವರು ಹೇಳುತ್ತಿದ್ದಾರೆ. ಆ ರೀತಿ ಆದರೂ, ಟ್ರಂಪ್ ಅವರು ಭಾರತದ ಕಂಪನಿಗಳು ಹಾಗೂ ನೌಕರರನ್ನು ಅತಿಯಾಗಿ ಗುರಿಯಾಗಿಸಿಕೊಂಡು, ವರಮಾನ ಸಂಗ್ರಹಿಸುವ ತಮ್ಮ ಉದ್ದೇಶದ ಈಡೇರಿಕೆಗಾಗಿ ಇತರ ಮಾರ್ಗ ಅನುಸರಿಸಬಹುದು. ಆ ಮೂಲಕ ಅವರು ವಲಸೆಯನ್ನು ನಿರುತ್ಸಾಹಗೊಳಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬಹುದು. ಯಾವ ನಿಯಂತ್ರಣವೂ ಇಲ್ಲದೆ ವರ್ತಿಸುವುದು. ಊಹೆಗಳಿಗೆ ನಿಲುಕದಂತೆ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅಮೆರಿಕವು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವ ಕೆಲವು ಕ್ರಮಗಳಲ್ಲಿ ಸೇರಿದೆ.

ಈ ರೀತಿ ಮಾಡುವುದರಿಂದ ಏನಾಗುತ್ತಿದೆ ಎಂಬುದನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳುವ ಮೊದಲೇ ಅಮೆರಿಕದ ಗುರಿಗಳು ಈಡೇರಿರುತ್ತವೆ. ಈಗಿನ ಸಂದರ್ಭದಲ್ಲಿ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಸ್ನೇಹಿತ' ಎಂದು ಸಂಬೋಧಿಸುತ್ತಿದ್ದಾರೆ. ಆದರೆ ಟ್ರಂಪ್ ಅವರ ನಿಕಟವರ್ತಿಗಳು, 'ಅಮೆರಿಕವು ತನ್ನ ಸ್ನೇಹಿತರಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತದೆ' ಎನ್ನುತ್ತಾರೆ. ಇದರ ಅರ್ಥ, ಅಮೆರಿಕವು ತನ್ನ ಸ್ನೇಹಿತರ ಮೇಲೆ ಬಹಳ ಒತ್ತಡವನ್ನು ತರುತ್ತಿದೆ. ಈ ನಡುವೆ ಟ್ರಂಪ್ ಅವರ ನೀತಿಗಳ ಜೊತೆ ಗುರುತಿಸಿಕೊಂಡಿರುವ ಅಮೆರಿಕದ ಕೆಲವು ಮಾಧ್ಯಮಗಳು ಅಲ್ಲಿ ವಲಸಿಗ ವಿರೋಧಿ ಭಾವನೆಗಳನ್ನು ಬೆಳೆಸುತ್ತಿವೆ. ಅವರ ಬಗ್ಗೆ ಸಾರ್ವಜನಿಕರಲ್ಲಿ ದ್ವೇಷ ಮೂಡುವಂತೆ ಮಾಡುತ್ತಿವೆ. ಭಾರತದ ಕೆಲವು ಸಮುದಾಯಗಳು ತಮ್ಮ ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಸ್ಮಿತೆಯನ್ನು ಅಮೆರಿಕದಲ್ಲಿ ಬಹಿರಂಗವಾಗಿ ತೋರಿಸಿಕೊಳ್ಳುವುದು ಅಲ್ಲಿನ ಸಮಾಜದಲ್ಲಿ ಸಮಂಜಸವಾಗಿ ಕಾಣುತ್ತಿಲ್ಲ. ವಲಸಿಗರು ತಾವು ಇರುವ ನಾಡಿನ ಸಮುದಾಯದ ಜೊತೆ ಬೆರೆಯುವುದು ಹಾಗೂ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದರ ನಡುವೆ ಸಮತೋಲನವನ್ನು ಸಾಧಿಸಬೇಕಾಗಿದೆ.


ಟ್ರಂಪ್ ನೇತೃತ್ವದ ಆಡಳಿತವು ಭಾರತದ ಹಿತಾಸಕ್ತಿಗಳಿಗೆ ಧಕ್ಕೆ ಬರುವಂತೆ ಮತ್ತೆ ಮತ್ತೆ ನಡೆದುಕೊಳ್ಳುತ್ತಿರುವುದಕ್ಕೆ ಭಾರತ ಪ್ರತಿರೋಧ ತೋರಬೇಕಿದೆ. ಭಾರತದ ಜೊತೆ ಸಂಬಂಧ ಚೆನ್ನಾಗಿದೆ ಎಂದು ಹೇಳುತ್ತಲೇ ಅಮೆರಿಕವು, ಭಾರತದ ಹಿತಾಸಕ್ತಿಗಳಿಗೆ ಪೆಟ್ಟು ಕೊಡುವ ಕೆಲಸವನ್ನೂ ಮಾಡಿದೆ. ಭಾರತದಿಂದ ಆಮದಾಗುವ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದೆ. ಅಕ್ರಮ ಮಾದಕವಸ್ತು ಉತ್ಪಾದಿಸುವ ದೇಶಗಳ ಪಟ್ಟಿಯಲ್ಲಿ ಭಾರತದ ಹೆಸರು ಉಲ್ಲೇಖಿಸಲಾಗಿದೆ.

ಇರಾನ್‌ನಲ್ಲಿನ ಚಾಬಹಾರ್ ಬಂದರಿನ ಮೇಲಿನ ನಿರ್ಬಂಧಗಳನ್ನು ಮತ್ತೆ ಜಾರಿಗೆ ತರಲಾಗಿದೆ. ಈಗ ಎಚ್‌–1ಬಿ ವೀಸಾ ಪಡೆಯಲು 1 ಲಕ್ಷ ಅಮೆರಿಕನ್ ಡಾಲರ್ ಶುಲ್ಕ ವಿಧಿಸಲಾಗಿದೆ.

ವಿಶ್ವಸಂಸ್ಥೆಯ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಭಾರತವು 'ಭಯೋತ್ಪಾದನೆಯ ಬಗ್ಗೆ ಕಠಿಣ ನಿಲುವು ತಳೆಯುವ' ಮಾಮೂಲಿ ಕೆಲಸದ ಆಚೆಗೂ ಕಣ್ಣುಹಾಯಿಸಬೇಕು. ಭಾರತದ ಹಿತಾಸಕ್ತಿ ಹಾಗೂ ಅಮೆರಿಕದಲ್ಲಿ ನೆಲಸಿರುವ ಭಾರತೀಯ ಸಮುದಾಯದವರ ಹಿತಾಸಕ್ತಿಗಳಿಗೆ ಧಕ್ಕೆ ತರುವ ಅಮೆರಿಕದ ನೀತಿಗಳ ಬಗ್ಗೆ ಪ್ರಧಾನಿ ಮೋದಿ ಅವರು ತಾಳಿರುವ ಮೌನವನ್ನು ಕೊನೆಗೊಳಿಸಬೇಕು. ಅಮೆರಿಕದ ಜೊತೆ ಮಾತುಕತೆ ನಡೆಸಲು ಆ ದೇಶದ ಮೇಲೆ ಅತಿಯಾದ ಪ್ರೀತಿ ಹೊಂದಿಲ್ಲದ ಮಧ್ಯಸ್ಥಿಕೆದಾರರ ಅಗತ್ಯ ಇದೆ. ಇಲ್ಲದಿದ್ದರೆ ಮಾತುಕತೆಗಳಿಂದ ಏನೂ ಸಾಧಿಸಲಾಗುವುದಿಲ್ಲ.

---

# ರಾಮಾಯಣ



## ಶ್ರೀ ರಾಮನಿಂದ ರಾಕ್ಷಸಸೇನೆಯ ಸಂಹಾರ

• ಹಿಂದಿನ ಸಂಚಿಕೆಯಿಂದ — 119 ನೆಯ ಅಧ್ಯಾಯ

ಶ್ರೀರಾಮನು ಸಮರಭೂಮಿಯಲ್ಲಿ ಪ್ರಳಯಕಾಲದ ರುದ್ರನಂತೆ ಒಪ್ಪುತ್ತಿದ್ದನು. ಬಿಲ್ಲುಗಳನ್ನು ತಿರುಗಿಸುತ್ತ ನಗದಾಯತ್ರ ಕೂಗುತ್ತ ಭೇರಿಗಳನ್ನು ಮೊಳಗಿಸುತ್ತ ಘೋರವಾದ ಆಯುಧಗಳನ್ನು ಮೇಲಕ್ಕೆ ನೆಗಹಿಕೊಂಡು ಬರುತ್ತಿದ್ದ ರಾಕ್ಷಸರ ಸೇನೆಯ ಕೋಲಾಹಲ ಧ್ವನಿಯು ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸುತ್ತಿರಲು ಅಲ್ಲಲ್ಲಿದ್ದ ಮೃಗಪಕ್ಷಿಗಳು ಕಂಗೆಟ್ಟು ಹಿಂದೆ ನೋಡದೆ ಓಡುತ್ತಿದ್ದವು. ಈ ರೀತಿಯಲ್ಲಿ ರಾಕ್ಷಸರ ಸೇನೆಯು ಅತಿಸತ್ತ್ವವುಳ್ಳ ಶ್ರೀರಾಮನನ್ನು ಮುತ್ತಿಕೊಳ್ಳಲು ಯುದ್ಧದಲ್ಲಿ ಪ್ರವೀಣನಾದ ಆ ರಘುನಾಥನು ಯುದ್ಧಸನ್ನಾಹದಿಂದ ಸುತ್ತಿಕೊಂಡಿದ್ದ ರಾಕ್ಷಸರ ಸೇನೆಯನ್ನು ನೋಡಿ ಬತ್ತಳಿಕೆಗಳಿಂದ ಅಂಬುಗಳನ್ನು ತೆಗೆದುಕೊಂಡು ರಾಕ್ಷಸರ ಕೊಲೆಗೋಸ್ಕರ ಸಿದ್ಧನಾದನು. ಅವನು ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸುತ್ತ ರುದ್ರಸ್ವರೂಪನಾದನು. ಆಗ ವನದೇವತೆಗಳು ಶ್ರೀರಾಮನನ್ನು ನೋಡಿ ದಕ್ಷಧ್ವಂಸಿಯಾದ ಪಿನಾಕಿಯೇ ಇವನೆಂದು ಭಾವಿಸಿದರು.

ಹೀಗೆ ಬಿಲ್ಲುಬಾಣಗಳನ್ನು ತೆಗೆದುಕೊಂಡು ಅತ್ಯಂತ ಕೋಪದಿಂದ ಸಮರಸಂನದ್ಧನಾಗಿ ತನ್ನ ಆಶ್ರಮದಲ್ಲಿ ನಿಂತಿದ್ದ ಶ್ರೀರಾಮನನ್ನು ಕಂಡು ಖರನು ಶ್ರೀರಾಮನಿಗೆ ಅಭಿಮುಖವಾಗಿ ರಥವನ್ನು ನಡೆಯಿಸಬೇಕೆಂದು ಸಾರಥಿಗೆ ಆಜ್ಞಾಪಿಸಿದನು. ಆತನು ಕುದುರೆಗಳನ್ನು ಚಬುಕುಮಾಡಿ ಅಸಹಾಯಶೂರನಾದ ಶ್ರೀರಾಮನಿಗೆ ಅಭಿಮುಖವಾಗಿ ರಥವನ್ನು ನಡೆಯಿಸಿದನು. ಆಗ ಸಮಸ್ತ ರಾಕ್ಷಸರೂ ಶೂಲ ಮುಷ್ಕರ ಖಡ್ಗ ಪಟ್ಟಸ ಈಟಿ ವರಶು ಕೊಡಲಿ ಮೊದಲಾದ ಆಯುಧಗಳನ್ನು ತೆಗೆದುಕೊಂಡು ಕಾರ್ಮುಗಿಲಿಗೆ ಸಮಾನವಾದ ಶರೀರಕಾಂತಿಯುಳ್ಳವರಾಗಿಯೂ ಮಹಾಪರಾಕ್ರಮ ಉಳ್ಳವರಾಗಿಯೂ ರಥಗಳಲ್ಲಿದ್ದು ಕೊಂಡೂ ಪರ್ವತಾಕಾರಗಳಾದ ಆನೆಗಳ ಮೇಲಿದ್ದು ಕೊಂಡ ವಾಯುವೇಗಮನೋವೇಗವುಳ್ಳ ಕುದುರೆಗಳ ಮೇಲಿದ್ದುಕೊಂಡೂ ಶ್ರೀರಾಮನನ್ನು ಅಟ್ಟಿಬಂದು ಮೇಘಗಳು ಪರ್ವತದ ಮೇಲೆ ಮಳೆಯನ್ನು ಕರೆಯುವಂತೆ ಆಂದಿನ ಮಳೆಯನ್ನು ಕರೆದರು.

ಶ್ರೀರಾಮನು ಸಮುದ್ರರಾಜನು ನದೀಪ್ರವಾಹಗಳನ್ನು ತಡೆಗಟ್ಟುವಂತ ಆ ರಾಕ್ಷಸರು ಪ್ರಯೋಗಿಸಿದ ಬಾಣಗಳನ್ನು ತನ್ನ ನಿಶಿತವಾದ ಶರಗಳಿಂದ ತಡೆಗಟ್ಟಿದನು. ಆಗ ಅನೇಕ ಮಂದಿ ರಾಕ್ಷಸರು ಆತನ ಮೇಲೆ ಕವಿದು ನಿಶಿತವಾಣಗಳಿಂದ ಹೊಯ್ಯಲು, ಶ್ರೀರಾಮನು ಆ ರಾಕ್ಷಸರ ಆಯುಧಗಳಿಂದ ಗಾಯಪಡೆದು ಶರೀರವೆಲ್ಲವೂ ರಕ್ತಮಸಗಿ ಸಂಧ್ಯಾಕಾಲದಲ್ಲಿ ಕೆಮ್ಮುಗಿಲುಗಳಿಂದ ಬಳಸಲ್ಪಟ್ಟ ಸೂರ್ಯನಂತೆ ತೋರುತ್ತಿದ್ದನು. ಹೀಗೆ ಬಹುಮಂದಿ ರಾಕ್ಷಸರು ಏಕಾಕಿಯಾದ ಶ್ರೀರಾಮನನ್ನು ಸುತ್ತಿಕೊಂಡದ್ದನ್ನು ಕಂಡು ಗಂಧರ್ವಾದಿದೇವತೆಗಳು ದುಃಖಪಡುತ್ತಿದ್ದರು. ಮೇಲೆ ಶ್ರೀರಾಮನು ಕುಪಿತನಾಗಿ ಬಿಲ್ಲನ್ನು ಚಕ್ರಾಕಾರವಾಗಿ ಬಗ್ಗಿಸಿ ಯಾರಿಗೂ ತಡೆಯುವುದಕ್ಕಾದರೂ

ಮುಂದುವರಿಯುವುದು...

---

# ಸಂಪಾದಕೀಯ


## ಕಲಾ ಸಾಹಿತ್ಯ



ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

# ನಾಡಿನೆಲ್ಲೆಡೆ ದಸರೆಯ ಸಂಭ್ರಮ

■ ಉದಯವಾಹಿನಿ, ವಿಶೇಷ





• ಉದಯವಾಹಿನಿ, ವಿಶೇಷ

ವರ್ಷಪೂರ್ತಿ ಒಂದಿಲ್ಲೊಂದು ಹಬ್ಬಗಳು ಭಾರತೀಯತೆಯ ವೈಶಿಷ್ಟ್ಯ. ಸಂಪ್ರದಾಯ, ತಳಿರು–ತೋರಣ, ಪೂಜೆ–ಪುನಸ್ಕಾರಗಳು ಒಂದೆಡೆಯಾದರೆ, ಹಬ್ಬದ ಭೂರಿ ಭೋಜನ, ಹೊಸಬಟ್ಟೆ– ಗೃಹಾಲಂಕಾರದ ಸಂಭ್ರಮ, ಬಂಧು ಬಳಗ,ಸ್ನೇಹಿತರ ಭೇಟಿ ಇನ್ನೊಂದು ಬಗೆಯ ಪುಳಕ. ಪ್ರತಿ ಹಬ್ಬಕ್ಕೂ ತನ್ನದೇ ಆದ ಪೂಜೆಯ ರೀತಿ, ಆಚರಣೆ, ಅಡುಗೆಯಲ್ಲಿ ಇಂಥದೇ ತಿಂಡಿ–ತಿನಿಸು, ಭಕ್ಷ್ಯ, ಖಾದ್ಯ ಮಾಡಬೇಕೆನ್ನುವ ವಿಶೇಷತೆ ಬೇರೆ. ಆದರೆ ಆಶ್ವೀಜ ಶುಕ್ಲಪಕ್ಷದ ಕಡೆಯ ಹತ್ತು ದಿನಗಳು ಪಾಡ್ಯದಿಂದ ಆರಂಭವಾಗಿ ವಿಜಯದಶಮಿಯಂದು ಮುಕ್ತಾಯವಾಗುವ ಹತ್ತೂ ದಿನಗಳು ನಿಜವಾಗಿ ಹರ್ಷದಾಯಕವೇ ಸರಿ. ಆದರೆ ಇದು ಒಂದು ವರ್ಗ–ಜಾತಿಗೆ ಸೀಮಿತವಾಗಿರದೆ ನಾಡಹಬ್ಬ ಎನ್ನುವುದು ಹೆಮ್ಮೆಯ ಸಂಗತಿ.

ಸಡಗರದ ನಾಡಹಬ್ಬ– ದಸರಾ ಕರ್ನಾಟಕದ ನಾಡಹಬ್ಬ. ಹಿಂದೂ ಧರ್ಮೀಯರಿಗೆ ಇದೊಂದು ಪ್ರಮುಖವಾದ ಹಬ್ಬ. ಈ ನಾಡಹಬ್ಬ ನಾಡ ರಕ್ಷಣೆಗೆ ನಿಂತ ಭುವನೇಶ್ವರಿಯ ಪೂಜಾ ಉತ್ಸವವಾಗಿದೆ. ಕರ್ನಾಟಕದಲ್ಲಿ ಇದನ್ನು ದಸರಾ ಹಬ್ಬ ಎಂದೂ , ಪಶ್ಚಿಮ ಬಂಗಾಳದಲ್ಲಿ ಇದನ್ನು ದುರ್ಗಾ ಪೂಜೆಯಾಗಿ ಆಚರಿಸುತ್ತಾರೆ. ನವರಾತ್ರಿ ಎಂದರೆ ಒಂಭತ್ತು ರಾತ್ರಿಗಳು, ದೇವಿಯ ಒಂಭತ್ತು ರೂಪಗಳನ್ನು ಆರಾಧಿಸಲಾಗುತ್ತದೆ. ಹತ್ತನೆಯ ದಿನ 'ವಿಜಯದಶಮಿ'. ವಿಜಯ ದುಂದುಭಿಯ ದಿನ. ಇಡೀ ದಿನ ಪ್ರಶಸ್ತವಾದ ಮುಹೂರ್ತ ಹೊಂದಿದ ದಿನ. ಈ ದಿನ ಕೈಗೊಂಡ ಎಲ್ಲಾ ಕೆಲಸಗಳೂ ಜಯ ಜಯ. ವಿಜಯದಶಮಿ ಭಾರತದ ಸಾರ್ವತ್ರಿಕ ಹಬ್ಬಗಳಲ್ಲಿ ಒಂದಾಗಿದೆ. ದೇವಿ ಆರಾಧನೆ– ಈ ಶರನ್ನವರಾತ್ರಿಯನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ವಿಶೇಷವಾಗಿ ಆಚರಿಸಲಾಗುತ್ತದೆ ಶಕ್ತಿ ಆರಾಧನೆ ಈ ಹಬ್ಬದ ವೈಶಿಷ್ಟ್ಯ. ಸಪ್ತಮಿಯಂದು ಮಹಾ ಸರಸ್ವತಿಯನ್ನು, ನವಮಿಯಂದು ಮಹಾಲಕ್ಷ್ಮಿಯನ್ನು , ದಶಮಿಯಂದು ಮಹಾಕಾಳಿಯನ್ನು ಪೂಜಿಸುವುದು ವಿಶೇಷ. ವಿಜಯನಗರದ ಅರಸರ ಕಾಲದಿಂದಲೇ ನವರಾತ್ರಿ ಅಥವಾ ದಸರಾ ಹಬ್ಬ ಚಾಲ್ತಿಗೆ ಬಂದಿದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯ ಪಡುತ್ತಾರೆ. ಮೈಸೂರಿನ ವಿಜಯದಶಮಿಗೆ ವಿಶೇಷ ಪಾರಂಪರಿಕ ಇತಿಹಾಸವಿದೆ. ದೇವಾನುದೇವತೆಗಳಿಗೆ ವಿಪರೀತ ಕಾಟ ಕೊಡುತ್ತಿದ್ದ ಮಹಿಷಾಸುರನನ್ನು ಸಂಹರಿಸಲು ಎಲ್ಲಾ ದೇವಾನುದೇವತೆಗಳು ತಂತಮ್ಮ ಶಕಿಯನ್ನು ಧಾರೆಯೆರೆದು ದೇವಿ ಅವನ ಸಂಹಾರ ಮಾಡಲು ಕಾರಣರಾಗುತ್ತಾರೆ. ಒಂಭತ್ತನೇ ದಿನ ದೇವಿ ಅವನನ್ನು ಸಂಹರಿಸಿ ಲೋಕಕ್ಕೆ ಶಾಂತಿ ತಂದಳೆಂಬ ನಂಬಿಕೆಯ ದ್ಯೋತಕವಾಗಿ ಒಂಭತ್ತನೆಯ ದಿನ ಆಯುಧ ಪೂಜಾದಿನ ಹಾಗೂ ಆದಿಶಕ್ತಿಗೆ ಗೆಲುವು ತಂದ ದಿನವೇ ವಿಜಯದಶಮಿ. ಅಂದು ಚಾಮುಂಡಿ ಬೆಟ್ಟದ ಮೇಲಿರುವ ಚಾಮುಂಡೇಶ್ವರಿಯನ್ನು ಬಂಗಾರದ ಪಲ್ಲಕ್ಕಿಯಲ್ಲಿ ಕೂರಿಸಿ ಸಕಲ ಸರ್ಕಾರಿ ಹಾಗೂ ರಾಜ ಮರ್ಯಾದೆಯ ಮೂಲಕ ತಾಯಿಯನ್ನು ಪೂಜಿಸಲಾಗುತ್ತದೆ. ವಿಜಯದ ಸಂಕೇತ– ಉತ್ತರ ಭಾರತದಲ್ಲಿ ದಸರಾ ಸಂಭ್ರಮದ ಹತ್ತೂ ದಿನಗಳೂ 'ರಾಮಲೀಲ' ನಡೆಯುತ್ತದೆ. ಹತ್ತನೆಯ ದಿನ ರಾವಣನ ಪ್ರತಿಕೃತಿಯನ್ನು ಸುಡಲಾಗುತ್ತದೆ. ದಶಮಿಯಂದು ರಾವಣನ ಮೇಲೆ ಶ್ರೀರಾಮ ವಿಜಯ ಸಾಧಿಸಿದನೆನ್ನಲಾಗಿದೆ. ದ್ವಾಪರಯುಗದಲ್ಲಿ ವಿರಾಟರಾಯನ ರಾಜ್ಯದಲ್ಲಿ ಅಜ್ಞಾತವಾಸದಲ್ಲಿದ್ದ ಪಾಂಡವರು ಶಮಿವೃಕ್ಷದ ಮೇಲೆ ಬಚ್ಚಿಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ಹೊರತೆಗೆದು ವಿರಾಟರಾಜನ ಗೋವುಗಳನ್ನು ಬಿಡಿಸಿಕೊಂಡು ಹೋಗುತ್ತಿದ್ದ ಕೌರವ ಸೈನ್ಯವನ್ನು ಹೊಡೆದೋಡಿಸಿ ಅರ್ಜುನ ಗೋವುಗಳನ್ನು ಬಿಡಿಸಿ ವಿಜಯವನ್ನು ಸಾಧಿಸಿದ್ದೂ ಈ ವಿಜಯದಶಮಿಯ ದಿನವೇ. ಹೀಗಾಗಿ ಈ ವಿಶೇಷ ಮಹತ್ವದ ದಿನಾಚರಣೆ ಅತ್ಯಂತ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿದೆ. ಕರ್ನಾಟಕದಲ್ಲಿ ವಿಜಯನಗರ ಸಂಸ್ಥಾನದಲ್ಲಿ ದಸರಾ ಉತ್ಸವಕ್ಕೆ ಚಾಲನೆ ಸಿಕ್ಕಿದರೆ, ಮೈಸೂರು ಸಂಸ್ಥಾನದ ಒಡೆಯರ ಕಾಲದಲ್ಲಿ ಮನೆ ಮನೆಗಳಲ್ಲೂ ಪ್ರಚಲಿತವಾಯಿತು.

ಶಸ್ತ್ರ ಪೂಜೆ – ನವರಾತ್ರಿಯ ಮಹಾನವಮಿಯಂದು ಶಸ್ತ್ರಪೂಜೆಯನ್ನು ಮಾಡುತ್ತಾರೆ. ಅಂದು ರಾಜರು, ಸಾಮಂತರು ತಮ್ಮ ಶಸ್ತ್ರಾಸ್ತ್ರಗಳನ್ನು ಸ್ವಚ್ಛಗೊಳಿಸಿ ಅವುಗಳನ್ನು ಸಾಲಾಗಿರಿಸಿ ಪೂಜೆಯನ್ನು ಮಾಡುತ್ತಾರೆ. ಅದೇ ರೀತಿಯಲ್ಲಿ ರೈತರು, ಇತರ ತಂತ್ರಜ್ಞರು, ಕಾರ್ಮಿಕರು ತಾವು ದಿನನಿತ್ಯ ಬಳಸುವ ಸಾಧನ ಸಲಕರಣೆಗಳನ್ನು ಪೂಜಿಸುತ್ತಾರೆ.

ಆಯುಧ ಪೂಜೆಗೆ ಹೆಚ್ಚಿನ ಮಹತ್ವ. ಪ್ರತಿಯೊಂದು ಆಯುಧ, ಸಾಧನ ಸಲಕರಣೆಗಳನ್ನೂ ಕೃತಜ್ಞತಾಪೂರ್ವಕವಾಗಿ ಪೂಜಿಸಲಾಗುತ್ತದೆ. ದಸರೆಯ ಉತ್ಸವಕ್ಕೆ ಶಮಿಯ ನಂಟೂ ಉಂಟು. ವಿಜಯದ ಸಂಕೇತ ಶಮಿ. ಅಂತಲೇ ವಿಜಯದ ಶಮಿಯೇ ವಿಜಯದಶಮಿಯಾಗಿದೆ. ವಿಜಯದಶಮಿ ಹಬ್ಬದ ದ್ಯೋತಕವಾಗಿ ಮನೆ ಮನೆಗಳಲ್ಲಿ ನೆಂಟರಿಷ್ಟರು ಪರಸ್ಪರ ಬನ್ನಿ ಎಲೆಗಳನ್ನು ವಿನಿಯೋಗಿಸಿಕೊಂಡು ಸಂತಸಪಡುತ್ತಾರೆ.


**ಬೊಂಬೆಹಬ್ಬ ಎಂದೇ ಖ್ಯಾತಿ –ಇಡೀ ನಾಡು ಈ ಉತ್ಸವದ ಸಂಭ್ರಮವನ್ನು ಹಂಚಿಕೊಳ್ಳುತ್ತಿತ್ತು. ಮನೆ ಮನೆಗಳಲ್ಲಿ ಪಟ್ಟದ ಬೊಂಬೆಗಳ ಜೊತೆ ತರಹಾವರಿ ಮಣ್ಣಿನ, ಲೋಹದ ಬೊಂಬೆಗಳನ್ನಿಟ್ಟು ಪ್ರದರ್ಶನ ಮಾಡಿ, ಅದನ್ನು ನೋಡಲು ಅಕ್ಕ ಪಕ್ಕದವರು, ನೆಂಟರಿಷ್ಟರನ್ನು ವಿಶೇಷವಾಗಿ ಮಕ್ಕಳನ್ನು ಆಹ್ವಾನಿಸಿ, ತಾಂಬೂಲ, ಸಿಹಿ ಹಂಚುತ್ತಿದ್ದರು. ಮಕ್ಕಳಿಗೆ ಪುಟ್ಟ ಪುಟ್ಟ ವಿವಿಧ ತಿನಿಸುಗಳನ್ನು ಮಾಡಿ ಬಾಗಿನ ಕೊಡುವುದು ಪದ್ಧತಿ. ಈ ಹತ್ತು ದಿನಗಳಲ್ಲಿ ವಿಶೇಷ ದಾನ-ಧರ್ಮದ ಆಚರಣೆಯೂ ನಡೆದು ಬಂದಿತ್ತು. ಕ್ರಮೇಣ ನಗರ ಜೀವನದ ಯಾಂತ್ರಿಕತೆಯಲ್ಲಿ ಈ ಸಡಗರ ಕೊಂಚ ಕಡಮೆಯಾಗಿದ್ದರೂ ದಸರೆಯ ಉತ್ಸಾಹ-ಮಹತ್ವಗಳು ಇಂದಿಗೂ ಉಳಿದುಕೊಂಡು ಬಂದಿರುವುದು ಸಂತಸದ ವಿಚಾರ.**

ಮೈಸೂರು ದಸರಾ ವೈಭವ – ಈ ಹತ್ತು ದಿನಗಳನ್ನು ಮೈಸೂರಿನಲ್ಲಿ ವಿಶೇಷ ರೀತಿಯಿಂದ ಆಚರಿಸಲಾಗುತ್ತದೆ. ಇತಿಹಾಸ ಪ್ರಸಿದ್ಧ ಮೈಸೂರಿನ ಅರಮನೆ ದೀಪಾಲಂಕಾರದಿಂದ ಕಂಗೊಳಿಸುತ್ತದೆ. ಮೈಸೂರನ್ನು ಆಳಿದ ರಾಜಮನೆತನವಾದ ಒಡೆಯರ ಕುಲದೇವತೆಯಾದ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಲಾಗುತ್ತದೆ. ಹಿಂದೆ , ವಿಜಯದಶಮಿಯಂದು ಪಟ್ಟದಾನೆ ಹೊತ್ತು ಸಾಗುವ ಚಿನ್ನದ ಅಂಬಾರಿಯ ಮೇಲೆ ಮಹಾರಾಜರ ಮೆರವಣಿಗೆ ಮೈಸೂರಿನ ಬೀದಿ ಬೀದಿಗಳಲ್ಲಿ ವಿಜೃಂಭಣೆಯಾಗಿ ಸಾಗುತ್ತಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಜನಗುಂಪು ಸಂತಸದಿಂದ ಆ ಭವ್ಯ ದೃಶ್ಯವನ್ನು ವೀಕ್ಷಿಸುತ್ತಿತ್ತು. ಅನಂತರ ಬನ್ನಿ ಮಂಟಪಕ್ಕೆ ತೆರಳಿ ತಮ್ಮ ವಿಜಯದ ಸಂಕೇತವಾಗಿ ಬನ್ನಿಮರವನ್ನು ಕಡಿದು ದೇವಿಯ ದರ್ಶನ ಪಡೆದು ಹಿಂತಿರುಗುವುದು ವಾಡಿಕೆ. ಪ್ರಸ್ತುತ ಕಾಲಘಟ್ಟದಲ್ಲಿ, ಈಗ ಚಿನ್ನದ ಅಂಬಾರಿಯ ಮೇಲೆ ಚಾಮುಂಡೇಶ್ವರಿಯ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡಲಾಗುತ್ತದೆ.

---

# ದೇವತೆಯ ತತ್ತ್ವಕ್ಕೆ ಸಂಬಂಧಿಸಿದ ರಂಗೋಲಿಯನ್ನು ಏಕೆ ಬಿಡಿಸಬೇಕು ?

■ ಶ್ರೀ. ವಿನೋದ ಕಾಮತ್



• ಉದಯವಾಹಿನಿ, ವಿಶೇಷ

ವಿಶಿಷ್ಟ ದೇವತೆಯ ಪೂಜೆಯನ್ನು ಮಾಡುವಾಗ ಆ ದೇವತೆಯ ತತ್ತ್ವಕ್ಕೆ ಸಂಬಂಧಿಸಿದ ರಂಗೋಲಿಯನ್ನು ಬಿಡಿಸಬೇಕು. ರಂಗೋಲಿಯು ದೇವತೆಯ ನಿರ್ಗುಣ ತತ್ತ್ವವನ್ನು ಗ್ರಹಿಸಿ ಜೀವದ ಕ್ಷಮತೆಗನುಸಾರ ಅದನ್ನು ವಾಯುಮಂಡಲದಲ್ಲಿ ಪ್ರಕ್ಷೇಪಿಸುತ್ತದೆ. ಆದುದರಿಂದ ದೇವತೆಯ ತತ್ತ್ವ ವಾಯುಮಂಡಲದಲ್ಲಿ ಮತ್ತು ಜೀವಗಳ ಕಡೆಗೆ ಹೆಚ್ಚು ಪ್ರಮಾಣದಲ್ಲಿ ಪ್ರಕ್ಷೇಪಿತವಾಗುತ್ತದೆ. ರಂಗೋಲಿಯಲ್ಲಿರುವ ಬಿಳಿ ಕಣಗಳಲ್ಲಿ ಈಶ್ವರೀ ತತ್ತ್ವದ ಲಹರಿಗಳನ್ನು ಆಕರ್ಷಿಸುವ ಕ್ಷಮತೆ ಇರುತ್ತದೆ, ಆದರೆ ಬಿಳಿ ಬಣ್ಣವು ನಿಷ್ಕ್ರಿಯತೆಗೆ ಸಂಬಂಧಿಸಿರುವುದರಿಂದ ರಂಗೋಲಿಗೆ ವೇಗವು ಪ್ರಾಪ್ತವಾಗುವುದಿಲ್ಲ. ಕುಂಕುಮದಿಂದ ಬ್ರಹ್ಮಾಂಡದಲ್ಲಿನ ಶ್ರೀದುರ್ಗಾದೇವಿಯ ಪ್ರಕಟಶಕ್ತಿ ಮತ್ತು ಅರಶಿನದಿಂದ ಗಣೇಶ ತತ್ತ್ವವು ಕಾರ್ಯನಿರತವಾಗುತ್ತದೆ. ಇದರಿಂದ ರಂಗೋಲಿಯಲ್ಲಿ ಆಕರ್ಷಿತವಾದ ಈಶ್ವರೀತತ್ತ್ವಕ್ಕೆ ಚಲನೆಯು ಪ್ರಾಪ್ತವಾಗಿ ವಾಯುಮಂಡಲದಲ್ಲಿನ ದೂಷಿತ ಸ್ಪಂದನಗಳು ಮತ್ತು ಕಣಗಳು ವಿಘಟನೆಯಾಗುತ್ತವೆ.

**ರಂಗೋಲಿ ಹಾಕುವುದರ ಹಿಂದಿನ ಅಧ್ಯಾತ್ಮಶಾಸ್ತ್ರೀಯ ದೃಷ್ಟಿಕೋನ:** ನೆಲವನ್ನು ಕಸಬರಿಕೆಯಿಂದ ಗುಡಿಸುವಾಗ ಅಥವಾ ಸೆಗಣಿಯಿಂದ ಸಾರಿಸುವಾಗ ನೆಲದಲ್ಲಿ ಸೂಕ್ಷ್ಮ ರೇಖೆಗಳು ನಿರ್ಮಾಣವಾಗುತ್ತವೆ. ಈ ರೇಖೆಗಳು ಅನಿಯಮಿತವಾಗಿರುವುದರಿಂದ ಅವುಗಳ ಸ್ಪಂದನಗಳು ಸಹ ಅನಿಯಮಿತವಾಗಿರುತ್ತವೆ. ಈ ಸ್ಪಂದನಗಳು ಶರೀರ, ಕಣ್ಣು ಮತ್ತು ಮನಸ್ಸಿಗೆ ಹಾನಿಕರವಾಗಿರುತ್ತವೆ. ಈ ಸ್ಪಂದನಗಳನ್ನು ದೂರಗೊಳಿಸಲು ಸಾರಿಸಿದ ನೆಲದ ಮೇಲೆ ರಂಗೋಲಿಯಿಂದ ಶುಭಚಿಹ್ನೆಗಳನ್ನು ಬಿಡಿಸುತ್ತಾರೆ. ಇದರಿಂದ ನೆಲದ ಮೇಲೆ ಅಶುಭ ಸ್ಪಂದನಗಳು ದೂರವಾಗಿ ಶುಭ ಪರಿಣಾಮಗಳಾಗುತ್ತವೆ.

**ರಂಗೋಲಿಯನ್ನು ಆದಷ್ಟು ಸ್ತ್ರೀಯರೇ ಏಕೆ ಬಿಡಿಸಬೇಕು?:** ಪೂಜಾವಿಧಿಗಳ ರಂಗೋಲಿಯನ್ನು ಸ್ತ್ರೀಯರೇ ಬಿಡಿಸಬೇಕು. ಏಕೆಂದರೆ ಸ್ತ್ರೀಯರು ದೇವತೆಯ ಸೂಕ್ಷ್ಮತತ್ತ್ವಗಳನ್ನು ಸಹಜವಾಗಿ ಗ್ರಹಿಸಬಹುದು. ಅವರು ಆಯಾಯ ತತ್ತ್ವಕ್ಕೆ ಸಂಬಂಧಿಸಿದ ಸೂಕ್ಷ್ಮ ಸ್ಪಂದನಗಳ ರಚನೆಯ ಆಕೃತಿಗಳನ್ನು ನಿರ್ಮಿಸಲು ಹೆಚ್ಚು ಸಂವೇದನಾಶೀಲರಾಗಿರುತ್ತಾರೆ. ಆದು ದರಿಂದ ಬ್ರಹ್ಮಾಂಡದಲ್ಲಿ ಕಾರ್ಯನಿರತವಾಗಿರುವ ಈಶ್ವರೀ ತತ್ತ್ವವು ಶೀಘ್ರವಾಗಿ ರಂಗೋಲಿಯಲ್ಲಿ ಆಕರ್ಷಿತವಾಗಿ ಕಾರ್ಯನಿರತವಾಗುತ್ತದೆ. ಇದಕ್ಕಾಗಿ ಪ್ರಾಥಮಿಕ ಸ್ತರದಲ್ಲಿನ ಜೀವಗಳಿಗಾಗಿ ರಂಗೋಲಿಯನ್ನು ಸ್ತ್ರೀಯರಿಂದ ಬಿಡಿಸಿಕೊಳ್ಳುವುದು ಯೋಗ್ಯವಾಗಿದೆ. ಅದೇ ರೀತಿ ಇದರಿಂದ ಈಶ್ವರೀ ತತ್ತ್ವವು ಹೆಚ್ಚು ಪ್ರಮಾಣದಲ್ಲಿ ಕಾರ್ಯನಿರತವಾಗಿ ವಾಯುಮಂಡಲ ಹಾಗೂ ಪೂಜೆಗೆ ಕುಳಿತುಕೊಳ್ಳುವ ಜೀವಕ್ಕೆ ಲಾಭವಾಗುತ್ತದೆ. ರಂಗೋಲಿಯಲ್ಲಿನ ಕಲಾತರಂಗದಿಂದ ಸ್ತ್ರೀಯರ ಅನಾಹತ ಚಕ್ರವು ಸ್ವಲ್ಪ ಪ್ರಮಾಣದಲ್ಲಿ ಜಾಗೃತವಾಗಿ ಚೈತನ್ಯ ಗ್ರಹಿಸುವ ಕ್ಷಮತೆಯು ಹೆಚ್ಚಾಗುತ್ತದೆ.

---

# ಕರುನಾಡಿನ ನಾಡ ಹಬ್ಬ ಬಂದಿದೆ

■ ಉದಯವಾಹಿನಿ, ವಿಶೇಷ

ಕರುನಾಡಿನ ದೊಡ್ಡಹಬ್ಬ ನಾಡಹಬ್ಬ ಬಂದಿದೆ
ನಮ್ಮನೆಲ್ಲ ಭಾವೈಕ್ಯದಿ ಮೇಳೈಸುತ ಸಾಗಿದೆ
ನಮ್ಮ ನಾಡಿನವರ ಹಿರಿಮೆ ಗರಿಮೆ ಸಂಸ್ಕೃತಿಯನು
ಅವರು ಬಿಟ್ಟ, ಅಳಿಯದಂಥ ಘನ ಪರಂಪರೆಯನು
ನೆನೆಯಲೆಂದೆ ರೂಢಿಯಲ್ಲಿ ನಾಡಹಬ್ಬ ಬಂದಿದೆ
ನಮ್ಮ ನಾಡ ನುಡಿಯ ಮೆರೆಸಿ ಸಾಮರಸ್ಯ ತಂದಿದೆ
ನವದಿನದಿ ಶಕ್ತಿಯನ್ನು ಭಕ್ತಿಯಿಂದ ಪೂಜಿಸಿ
ಅವಳ ಕರುಣೆಗಾಗಿ ಹೋಮಹವನಗಳನು ಯೋಜಿಸಿ
ಪ್ರತಿದಿನವೂ ಸಂಜೆಯಲ್ಲಿ ಸಭಿಕರನ್ನು ಸೇರಿಸಿ
ನೃತ್ಯ, ಗೀತೆ ವಿವಿಧ ಗೋಷ್ಠಿ ಕಲೆಗಳಿಂದ ರಂಜಿಸಿ
ನಾಡಿನೆಲ್ಲಕಡೆಗೆ ಈಗ ನಾಡಹಬ್ಬ ನಡೆದಿದೆ
ಎಲ್ಲರೊಂದುಗೂಡಿ ನಕ್ಕು ನಲಿವ ಸಮಯ ಬಂದಿದೆ
ವಿಜಯದಶಮಿ ಶುಭದಿನದಲಿ ಸೀಮೆ ಉಲ್ಲಂಘಿಸಿ
ಬನ್ನಿ ವೃಕ್ಷದಲ್ಲಿ ಮಹಂಕಾಳಿಯನ್ನು ಭಾವಿಸಿ
ಪೂಜೆಗೈದು ಬನ್ನಿಯನ್ನು ಸಂಭ್ರಮದಲಿ ಸೇರಿಸಿ
ಬಂಧು ಬಳಗ ಎಲ್ಲರನ್ನು ಕಂಡು ನಮನ ಸಲ್ಲಿಸಿ
ಬನ್ನಿಕೊಟ್ಟು ಬಂಗಾರದ ತೆರನಿರಲು ಅವರ ಕೋರುತ
ನಮ್ಮಲ್ಲಿಯ ಭೇದಭಾವ ವೈರತ್ವವ ಮರೆಯುತ
ಬನ್ನಿ ಬನ್ನಿ ಸನಿಹ ಬನ್ನಿ ಇನ್ನು ನಾವು ಗೆಳೆಯರು ಎಂದು
ಹರಸಿ ಪ್ರೀತಿತೋರಿ ಹಳೆಯದನ್ನು ಮರೆಯುವ
ನಾವು ನೀವು ಚೊಕ್ಕ ಚೆನ್ನವಾಗಿ ಬಾಳುಗೈಯುವ ಎನಲು
ಕರುನಾಡಿನ ದೊಡ್ಡಹಬ್ಬ ನಾಡಹಬ್ಬ ಬಂದಿದೆ

**ನರಸಿಂಗರಾವ ಹೇಮನೂರ**
**ಹಿರಿಯ ಸಾಹಿತಿಗಳು, ಕಲಬುರಗಿ**



• ಉದಯವಾಹಿನಿ, ವಿಶೇಷ


---

# ಹಿಂದೂಗಳ ಜನಸಂಖ್ಯೆ ಕಡಿಮೆ ಮಾಡಲು ಜಾತಿಗಣತಿ

• ಉದಯವಾಹಿನಿ, ಬೆಂಗಳೂರು

ಹಿಂದೂಗಳ ಜನಸಂಖ್ಯೆ ಕಡಿಮೆ ಮಾಡಲು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಜಾತಿಗಣತಿ ಮಾಡುತ್ತಿರುವಂತಿದೆ ಎಂದು ಕೇಂದ್ರ ಮಾಜಿ ಸಚಿವ ಎ.ನಾರಾಯಣಸ್ವಾಮಿ ಅವರು ಆಕ್ಷೇಪಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರು 1.40 ಕೋಟಿಗೂ ಹೆಚ್ಚಿದ್ದಾರೆ. ಅವರು ಕ್ರಿಶ್ಚಿಯನ್ನರು ಹಾಕುವ ಬಿರಿಯಾನಿಗೆ ಹೋಗುತ್ತಾರೆ. ಅದನ್ನು ತಿಂದವರೆಲ್ಲರೂ ಕ್ರಿಶ್ಚಿಯನ್ನರು. ಅದಕ್ಕಾಗಿ ಅವರನ್ನು ಹಿಂದೂ ಧರ್ಮದಿಂದ ತೆಗೆಯುತ್ತೇವೆ ಎಂದಿದ್ದಾರೆ ಎಂದು ಟೀಕಿಸಿದರು. ಕ್ರೈಸ್ತ ವ್ಯಾಪ್ತಿಗೆ ಸೇರಿಸಿದ ಇನ್ನೂ 13–14 ಪರಿಶಿಷ್ಟ ಜಾತಿಗಳ ಕ್ರೈಸ್ತ ಪದವನ್ನು ಕಾಣದಂತೆ (ಹೈಡ್) ಮಾಡಿ ಎಂದರೆ, ನಾನು ಯೋಚಿಸಬೇಕು ಎನ್ನುತ್ತಾರೆ ಎಂದು ದೂರಿದರು. ಈ ಜಾತಿಗಣತಿಯನ್ನು ಬಿಜೆಪಿ, ಪರಿಶಿಷ್ಟ ಜಾತಿಗೆ ಸೇರಿದ ಶಾಸಕರು, ಸಂಸದರು, ಮಾಜಿ ಸಚಿವರು ವಿರೋಧಿಸುತ್ತೇವೆ.



**ಕೇವಲ ಹೈಡ್ ಮಾಡುವುದಲ್ಲ;** ಸರ್ವೇಗೆ ಹೋದಾಗ ಚರ್ಚ್‌ಗೆ ಹೋಗುತ್ತೀರಾ ಬರ್ಕೊಳ್ಳಲೇ ಎಂಬ ಪದಗಳನ್ನು ಉಪಯೋಗಿಸಬಾರದು ಎಂದು ಎಚ್ಚರಿಕೆ ನೀಡಿ, ಈ ವಿಚಾರದಲ್ಲಿ ದಲಿತ ಸಂಘಟನೆಗಳು ಜಾಗೃತರಾಗಬೇಕು ಎಂದು ತಿಳಿಸಿದರು.

---

# ಬರೀ ಒಂದು ಬಾಳೆಹಣ್ಣು ಸಾಕು

## ನಿಮ್ಮ ಮುಖವನ್ನು ಕಾಂತಿಯುತವಾಗಿಸುತ್ತದೆ

ಬಾಳೆಹಣ್ಣನ್ನು ಈ ರೀತಿ ಬಳಸೋದ್ರಿಂದ ನಿಮ್ಮದು ಡ್ರೈ ಸ್ಕಿನ್ ಆಗಿರಲೀ ಅಥವಾ ಎಣ್ಣೆಯುಕ್ತ ಚರ್ಮವೇ ಆಗಿರಲಿ ನಿಮ್ಮ ಮುಖಕ್ಕೆ ಕಾಂತಿಯನ್ನು ನೀಡುತ್ತದೆ. ಬಾಳೆಹಣ್ಣು ಪೊಟ್ಯಾಸಿಯಮ್, ಫೈಬರ್‌ನಿಂದ ಸಮೃದ್ಧವಾಗಿರುವ ಹಣ್ಣುಗಳಲ್ಲಿ ಒಂದಾಗಿದೆ. ಬಾಳೆಹಣ್ಣಿನ ಸೇವನೆಯನ್ನು ಹೊರತುಪಡಿಸಿ ಇದನ್ನು ನಾನಾ ರೀತಿಯಲ್ಲಿ ಬಳಸೋದ್ರಿಂದ ಕೂದಲಿಗೂ ಒಳ್ಳೆಯದು, ಚರ್ಮಕ್ಕೂ ಒಳ್ಳೆಯದು ಎನ್ನುವುದು ನಿಮಗೆ ಗೊತ್ತಾ?. ಬಾಳೆಹಣ್ಣಿನ ಫೇಸ್‌ಪ್ಯಾಕ್ ಮುಖಕ್ಕೆ ಹಚ್ಚೋದ್ರಿಂದ ನಾನಾ ರೀತಿಯಲ್ಲಿ ಪ್ರಯೋಜನಪಡೆಯಬಹುದು. ಇದನ್ನು ಯಾವ ರೀತಿ ಬಳಸೋದ್ರಿಂದ ನಿಮ್ಮ ಮುಖಕ್ಕೆ ನೈಸರ್ಗಿಕಕಾಂತಿ ದೊರೆಯುತ್ತದೆ ಎನ್ನುವುದನ್ನು ತಿಳಿಯೋಣ.

**ಒಣ ಚರ್ಮಕ್ಕಾಗಿ ಬಾಳೆಹಣ್ಣಿನ ಫೇಸ್ ಪ್ಯಾಕ್ ಪದಾರ್ಥಗಳು**

**ಬಾಳೆಹಣ್ಣಿನ ಫೇಸ್ ಮಾಸ್ಕ್ ಬಳಸುವ ಪ್ರಯೋಜನಗಳು:** ಬಾಳೆಹಣ್ಣಿನಲ್ಲಿ ಪೊಟ್ಯಾಸಿಯಮ್, ವಿಟಮಿನ್ ಇ ವಿಟಮಿನ್ ಸಿ ಇರುತ್ತವೆ. ವಿಟಮಿನ್ ಇ ಮತ್ತು ಸಿ ಚರ್ಮಕ್ಕೆ ಪ್ರಯೋಜನಕಾರಿ. ಬಾಳೆಹಣ್ಣಿನ ಫೇಸ್ ಮಾಸ್ಕ್ ಹಚ್ಚುವುದರಿಂದ ನಿಮ್ಮ ಚರ್ಮದ ಹೊಳಪು ಹೆಚ್ಚಾಗುತ್ತದೆ. ಬಾಳೆಹಣ್ಣಿನಲ್ಲಿರುವ ಸಿಲಿಕಾ, ಚರ್ಮವನ್ನು ಹೈಡ್ರೀಕರಿಸಿ ಮತ್ತು ನಯವಾಗಿಡಲು ಸಹಾಯ ಮಾಡುವ ನೈಸರ್ಗಿಕ ಪ್ರೋಟೀನ್‌ಗಳಾದ ಕಾಲಜನ್ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

**ಕಾಂತಿಯುತ ಚರ್ಮಕ್ಕೆ ಬಾಳೆಹಣ್ಣಿನ ಫೇಸ್ ಪ್ಯಾಕ್:** **ಬೇಕಾಗುವ ಸಾಮಗ್ರಿಗಳು:** ಬಾಳೆಹಣ್ಣು, ರೋಸ್ ವಾಟರ್, ಜೇನುತುಪ್ಪ ಮತ್ತು ಹಸಿ ಹಾಲು ಫೇಶಿಯಲ್ ಪ್ಯಾಕ್ ಮಾಡಲು ಮಾಗಿದ ಒಂದು ಬಾಳೆಹಣ್ಣನ್ನು ತೆಗೆದುಕೊಳ್ಳಿ. ಅದನ್ನು ಮ್ಯಾಶ್ ಮಾಡಿ. ನಂತರ ಅದಕ್ಕೆ ಹಸಿ ಹಾಲು, ಜೇನುತುಪ್ಪ ಮತ್ತು ರೋಸ್ ವಾಟರ್ ಸೇರಿಸಿ. ನಯವಾದ ಪೇಸ್ಟ್ ತಯಾರಿಸಿಡಿ. ಈ ಪೇಸ್ಟ್‌ನ್ನು ನಿಮ್ಮ ಮುಖಕ್ಕೆ ಹಚ್ಚುವ ಮೊದಲು ಮುಖವನ್ನು ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಿ.



ನಂತರ ಇದನ್ನು ಮುಖಕ್ಕೆ ಹಚ್ಚಿ. 15 ರಿಂದ 20 ನಿಮಿಷಗಳ ನಂತರ, ನಿಮ್ಮ ಮುಖವನ್ನು ನೀರಿನಿಂದ ತೊಳೆಯಿರಿ.

**ಎಣ್ಣೆಯುಕ್ತ ಚರ್ಮಕ್ಕಾಗಿ ಬಾಳೆಹಣ್ಣಿನ ಫೇಸ್ ಪ್ಯಾಕ್:** ಪದಾರ್ಥಗಳು: ಬಾಳೆಹಣ್ಣು, ಪಪ್ಪಾಯಿ ಮತ್ತು ಸೌತೆಕಾಯಿ ಈ ಬಾಳೆಹಣ್ಣಿನ ಫೇಸ್ ಪ್ಯಾಕ್‌ನಲ್ಲಿ ಪಪ್ಪಾಯಿ, ಸೌತೆಕಾಯಿ ಮತ್ತು ಬಾಳೆಹಣ್ಣಿನ ಉತ್ತಮ ಗುಣಗಳು ಹೇರಳವಾಗಿದ್ದು, ಇದು ಜಿಡ್ಡಿನ ಚರ್ಮವನ್ನು ಪುನಃ ತುಂಬಿಸುತ್ತದೆ. ಬಾಳೆಹಣ್ಣು ಚರ್ಮವನ್ನು ಪೋಷಿಸುತ್ತದೆ, ಆದರೆ ಪಪ್ಪಾಯಿ ಚರ್ಮವನ್ನು ಹಗುರಗೊಳಿಸಲು ಸಹಾಯ ಮಾಡುತ್ತದೆ ಮತ್ತು ಸೌತೆಕಾಯಿಯನ್ನು ಹೈಡ್ರೇಟ್ ಮಾಡುತ್ತದೆ ಮತ್ತು ಶುಷ್ಕತೆಯನ್ನು ಕಡಿಮೆ ಮಾಡುತ್ತದೆ.

ವಿಧಾನ: ಪಪ್ಪಾಯಿಯ 1/4, ಸೌತೆಕಾಯಿಯ 1/4 ಮತ್ತು ಬಾಳೆಹಣ್ಣಿನ 1/2 ಭಾಗವನ್ನು ತುರಿದು ನಯವಾದ ಪೇಸ್ಟ್ ಮಾಡಿ. ಪೇಸ್ಟ್ ಅನ್ನು ನಿಮ್ಮ ಮುಖ ಮತ್ತು ಕುತ್ತಿಗೆಗೆ ಹಚ್ಚಿದ ನಂತರ, 15 ನಿಮಿಷ ಕಾಯಿರಿ. ಅದರ ನಂತರ, ಬೆಚ್ಚಗಿನ ನೀರಿನಿಂದ ಚೆನ್ನಾಗಿ ತೊಳೆಯಿರಿ.

**ವಯಸ್ಸಾದ ಚರ್ಮಕ್ಕಾಗಿ ಬಾಳೆಹಣ್ಣಿನ ಫೇಸ್ ಪ್ಯಾಕ್:** **ಬೇಕಾಗುವ ಸಾಮಾಗ್ರಿಗಳು:** ಬಾಳೆಹಣ್ಣು ಮತ್ತು ಮೊಸರು: ಮೊಸರಿನಲ್ಲಿರುವ ಉತ್ಕರ್ಷಣ ನಿರೋಧಕ ಗುಣಗಳು ಫ್ರೀ ರಾಡಿಕಲ್‌ಗಳ ವಿರುದ್ಧ ಹೋರಾಡಲು, ಸುಕ್ಕುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ರಂಧ್ರಗಳನ್ನು ಕಡಿಮೆ ಮಾಡಲು ಚರ್ಮದ ಟೋನ್ ಅನ್ನು ಸಮಗೊಳಿಸಲು ಸಹಾಯ ಮಾಡುವ ಲ್ಯಾಕ್ಟಿಕ್ ಆಮ್ಲವೂ ಬಾಳೆಹಣ್ಣಿನಲ್ಲಿದೆ. ಬಾಳೆಹಣ್ಣು , ಮೊಸರಿನ ಸಂಯೋಜನೆಯು ಕಾಲಜನ್ ಉತ್ಪಾದನೆಯನ್ನು ಉತ್ತೇಜಿಸುತ್ತದೆ ಮತ್ತು ಚರ್ಮದ ವಯಸ್ಸಾದ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ.

**ವಿಧಾನ:** ಅರ್ಧ ಮಾಗಿದ ಬಾಳೆಹಣ್ಣನ್ನು ಒಂದು ಬಟ್ಟಲಿನಲ್ಲಿ 2 ಚಮಚ ಮೊಸರಿನೊಂದಿಗೆ ಬೆರೆಸಿ ಹಿಸುಕಬೇಕು. ಈ ಮಿಶ್ರಣವನ್ನು ಮುಖ, ಕುತ್ತಿಗೆಗೆ ಸಮವಾಗಿ ಹಚ್ಚಿ, ಉಗುರು ಬೆಚ್ಚಗಿನ ನೀರಿನಿಂದ ತೊಳೆಯುವ ಮೊದಲು 15 ನಿಮಿಷ ಕಾಯಿರಿ.

**ಮೊಡವೆಗಳಿಗೆ ಬಾಳೆಹಣ್ಣಿನ ಫೇಸ್ ಪ್ಯಾಕ್:** ಬೇಕಾಗುವ ಸಾಮಗ್ರಿಗಳು: ಬಾಳೆಹಣ್ಣು, ಅರಿಶಿನ ಮತ್ತು ಬೇವು: ಬೇವು ಮತ್ತು ಅರಿಶಿನದ ಬ್ಯಾಕ್ಟೀರಿಯಾ ವಿರೋಧಿ ಗುಣಗಳು ಮೊಡವೆಗಳನ್ನು ಗುಣಪಡಿಸಲು ಸಹಾಯ ಮಾಡುತ್ತದೆ. ಆದರೆ ಬಾಳೆಹಣ್ಣಿನಲ್ಲಿರುವ ವಿಟಮಿನ್ ಸಿ ಉರಿಯೂತ ಮತ್ತು ಕಿರಿಕಿರಿಯನ್ನು ಕಡಿಮೆ ಮಾಡುತ್ತದೆ. ಈ ಫೇಸ್ ಪ್ಯಾಕ್ ಮೊಡವೆಗಳನ್ನು ಗುಣಪಡಿಸಲು ಗಾಯದ ಗುರುತುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ವಿಧಾನ:** ಒಂದು ಬಟ್ಟಲಿನಲ್ಲಿ ಅರ್ಧ ಬಾಳೆಹಣ್ಣನ್ನು 1 ಚಮಚ ಅರಿಶಿನ ಅಥವಾ 1 ಚಮಚ ಬೇವಿನ ಪುಡಿ ಅಥವಾ ಪೇಸ್ಟ್‌ನೊಂದಿಗೆ ಹಿಸುಕಿಕೊಳ್ಳಿ. ಅದನ್ನು ಸಂಪೂರ್ಣವಾಗಿ ಮಿಶ್ರಣ ಮಾಡುವ ಮೂಲಕ ನಯವಾದ ಪೇಸ್ಟ್ ತಯಾರಿಸಿ ನಿಮ್ಮ ಮುಖ ಮತ್ತು ಕುತ್ತಿಗೆಗೆ ಹಚ್ಚಿ 20 ನಿಮಿಷಗಳ ಕಾಲ ಹಾಗೆಯೇ ಬಿಡಬೇಕು.

**ಬಾಳೆಹಣ್ಣಿನಲ್ಲಿ ಪೊಟ್ಯಾಸಿಯಮ್, ವಿಟಮಿನ್ ಎ, ವಿಟಮಿನ್ ಇ ಅಧಿಕವಾಗಿರುವುದರಿಂದ, ಇವೆಲ್ಲವೂ ಚರ್ಮವನ್ನು ತೇವಗೊಳಿಸಲು ಕೆಲಸ ಮಾಡುತ್ತವೆ, ಬಾಳೆಹಣ್ಣಿನ ಫೇಸ್ ಪ್ಯಾಕ್ ಒಣ ಚರ್ಮಕ್ಕೆ ಸೂಕ್ತವಾಗಿದೆ. ವಿಟಮಿನ್ ಎ ಮಾಯಿಶ್ಚರೈಸರ್ ಮತ್ತು ಚರ್ಮದ ಟೋನ್ ಅನ್ನು ಸಮಗೊಳಿಸುತ್ತದೆ, ಆದರೆ ವಿಟಮಿನ್ ಇ ಫ್ರೀ ರಾಡಿಕಲ್‌ಗಳ ವಿರುದ್ಧ ರಕ್ಷಣೆ ನೀಡುತ್ತದೆ. ಬಾಳೆಹಣ್ಣಿಗೆ ಜೇನುತುಪ್ಪವನ್ನು ಸೇರಿಸುವುದರಿಂದ ಅದರ ದೀರ್ಘಕಾಲೀನ ತೇವಾಂಶವನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.**



ಸರ್ಕಾರದ ನಿಯಮಗಳನ್ನು ಪಾಲಿಸದೆ ನಾಯಿಕೊಡೆಗಳಂತೆ ಎತ್ತರೆತ್ತರಕ್ಕೆ ತಲೆ ಎತ್ತುತ್ತಿರುವ ಮೊಬೈಲ್ ಗೋಪುರಗಳ ಸಂಖ್ಯೆ

# ಅನಧಿಕೃತ ಮೊಬೈಲ್ ಟವರ್‌ಗಳಿಗೆ ಬೇಕಿದೆ ಕಡಿವಾಣ: ಆತಂಕ

• ಉದಯವಾಹಿನಿ ಶಿರಹಟ್ಟಿ

ಸರ್ಕಾರದ ನಿಯಮಗಳನ್ನು ಪಾಲಿಸದೆ ನಾಯಿಕೊಡೆಗಳಂತೆ ಎತ್ತರೆತ್ತರಕ್ಕೆ ತಲೆ ಎತ್ತುತ್ತಿರುವ ಮೊಬೈಲ್ ಗೋಪುರಗಳ ಸಂಖ್ಯೆ ತಾಲ್ಲೂಕಿನಾದ್ಯಂತ ಹೆಚ್ಚುತ್ತಿದ್ದು, ಸಾರ್ವಜನಿಕರು ಹಾಗೂ ಪ್ರಾಣಿ ಸಂಕುಲದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನಲ್ಲಿ ಅಕ್ರಮವಾಗಿ ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ಮೊಬೈಲ್ ಟವರ್‌ಗಳು ತಲೆ ಎತ್ತುತ್ತಿವೆ. ಸ್ಥಾಪನೆ ವೇಳೆ ನಿಯಮಾವಳಿಗಳನ್ನು ಪಾಲಿಸದೇ ಇರುವುದು ಒಂದು ಕಡೆಯಾದರೆ; ಇನ್ನೊಂದೆಡೆ ಪಕ್ಷಿಸಂಕುಲ ಅವನತಿಯತ್ತ ಸಾಗುತ್ತಿದೆ. ಅಲ್ಲದೇ, ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ತಾಲ್ಲೂಕಿನಲ್ಲಿ ಈಗಾಗಲೇ ಅಳವಡಿಸಲಾದ ಮೊಬೈಲ್ ಟವರ್‌ಗಳ ಪೈಕಿ ಶೇ 90ರಷ್ಟು ಮಂದಿ ಅನುಮತಿಯನ್ನೇ ಪಡೆದುಕೊಂಡಿಲ್ಲ ಎಂಬುದು ಪರಿಸರವಾದಿಗಳ ಆರೋಪವಾಗಿದೆ.

**ಪೈಪೋಟಿ ಮೇಲೆ ಹೆಚ್ಚಳ:** ಮೊಬೈಲ್ ಟವರ್‌ಗಳು ಅಕ್ರಮವಾಗಿ ತಲೆ ಎತ್ತುವ ಮೂಲಕ ದೊಡ್ಡ ಮಾಫಿಯಾದಂತೆ ಬೆಳೆದಿದ್ದು, ಪೈಪೋಟಿಯ ಮೇಲೆ ಟವರ್‌ಗಳ ಸಂಖ್ಯೆ ಹೆಚ್ಚುತ್ತಲಿದೆ ಎಂದು ಸಾರ್ವಜನಿಕರು ದೂರುತ್ತಾರೆ. ಅಕ್ರಮವಾಗಿ ಟವರ್‌ಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಯಾರ ಬಳಿ ಕೇಳಬೇಕು ಎನ್ನುವ ಪ್ರಶ್ನೆ ಅವರಿಗೆ ಎದುರಾಗಿದೆ.

ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಯಾವುದೇ ಮೊಬೈಲ್ ಟವರ್ ನಿರ್ಮಿಸಬೇಕಾದರೆ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಅಗ್ನಿಶಾಮಕದಳ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ (ಎನ್‌ಒಸಿ) ಪಡೆಯುವುದು ಕಡ್ಡಾಯ. ಆದರೆ, ಖಾಸಗಿ ಮೊಬೈಲ್ ಕಂಪನಿಗಳು ಈ ನಿಯಮಗಳನ್ನು ಗಾಳಿಗೆ ತೂರಿ ಟವರ್ ನಿರ್ಮಿಸುತ್ತಿವೆ. ಜತೆಗೆ ಹೀಗೆ ಅಕ್ರಮವಾಗಿ ಮೊಬೈಲ್ ಟವರ್ ಅಳವಡಿಸಿದ್ದರ ಪರಿಣಾಮವಾಗಿ ಸರ್ಕಾರದ ಬೊಕ್ಕಸಕ್ಕೂ ಲಕ್ಷಾಂತರ ರೂಪಾಯಿ ತೆರಿಗೆ ವಂಚನೆಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

**ಟವರ್ ನಿರ್ಮಾಣದ ವ್ಯಾಪಾರ:** ಇತ್ತೀಚೆಗಂತೂ ಮೊಬೈಲ್ ಟವರ್ ನಿರ್ಮಾಣ ದೊಡ್ಡ ವ್ಯಾಪಾರವಾಗಿ ಮಾರ್ಪಟ್ಟಿದ್ದು, ಪಟ್ಟಣದಲ್ಲಿ ಮನೆಯ ಮಹಡಿಗಳ ಮೇಲೆ ಅಳವಡಿಸಲಾಗುತ್ತಿದೆ. ತಿಂಗಳಿಗೆ ಇಲ್ಲವೇ ವರ್ಷಕ್ಕೆ ಇಂತಿಷ್ಟು ಬಾಡಿಗೆ ನಿಗದಿ ಮಾಡಿ ಸಂಬಂಧಪಟ್ಟ ದಾಖಲೆಗಳಿಲ್ಲದೆ ಕರಾರು ಮಾಡಿಕೊಳ್ಳುತ್ತಿದ್ದಾರೆ. 4ಜಿ, 5ಜಿ ಎಂದು ತಾಂತ್ರಿಕತೆ ಮುಂದುವರಿದಂತೆಲ್ಲಾ ಪರಿಸರವನ್ನು ವಿನಾಶಕ್ಕೆ ತಳ್ಳಲಾಗುತ್ತಿದೆ. ಊರಿನ ಮಧ್ಯ ಭಾಗದಲ್ಲಿ ಮೊಬೈಲ್ ಟವರ್‌ಗಳು ತಲೆ ಎತ್ತುತ್ತಿವೆ. ಸಂಪರ್ಕ ಸಾಧಿಸಲು ನೆರವಾಗುವ ಈ ಮೊಬೈಲ್ ಟವರ್‌ಗಳು ಜೀವಕ್ಕೆ ಹಾನಿಕಾರಕವೂ ಹೌದು ಎನ್ನುತ್ತಾರೆ ಪ್ರಜ್ಞಾವಂತರು.



ಉದಯವಾಹಿನಿ ಚಿತ್ರ

**ಸರ್ಕಾರಕ್ಕೆ ಲಕ್ಷಾಂತರ ರೂ.ನಷ್ಟ**



ಉದಯವಾಹಿನಿ ಚಿತ್ರ

**ಹೈಕೋರ್ಟ್ ಆದೇಶ:** ದೂರಸಂಪರ್ಕ ಜಾಲಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯುವ ಖಾಸಗಿ ಮೊಬೈಲ್ ಕಂಪನಿಗಳು, ಮೊಬೈಲ್ ಟವರ್‌ಗಳನ್ನು ನಿರ್ಮಿಸಲು, ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯಬೇಕು ಎಂಬ ಚಾರದ ಹಿನ್ನೆಲೆಯಲ್ಲಿ 2009ರಲ್ಲಿ ಹೈಕೋರ್ಟ್ ಮೊರೆ ಹೋದವು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಮ್ ಮೋಹನ್ ರೆಡ್ಡಿ, ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ಕಟ್ಟುವುದಕ್ಕೆ ವಿನಾಯಿತಿ ನೀಡಿತು. ಆದರೆ, ಅಳವಡಿಸಲು ಇರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ಸೂಚಿಸಿತ್ತು.

## ಮರೆಯಾದ ಗುಬ್ಬಚ್ಚಿ

**ಮೊಬೈಲ್ ಟವರ್ ಹೊರ ಸೂಸುವ ವಿಕಿರಣಗಳಿಂದ ಗುಬ್ಬಚ್ಚಿ ಪಕ್ಷಿ ನಗರ ಪ್ರದೇಶ ವ್ಯಾಪ್ತಿಯಲ್ಲಿ ಕಣ್ಮರೆಯಾಗಿದೆ. ವೈದ್ಯರ ಪ್ರಕಾರ ಈ ರೇಡಿಯೊ ತರಂಗಗಳು ಮಕ್ಕಳು, ವೃದ್ಧರ ಮೇಲೆ ಮಾತ್ರವಲ್ಲದೇ ಗರ್ಭಿಣಿಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಮೊಬೈಲ್ ಟವರ್ ವಿಕಿರಣಗಳ ಬಗ್ಗೆ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಎಲೆಕ್ಟ್ರಿಕಲ್ ವಿಭಾಗ ಅಧ್ಯಯನ ನಡೆಸಿದ್ದು, ಈ ವಿಕಿರಣಗಳಿಂದ ಜನಸಾಮಾನ್ಯರು, ಪ್ರಾಣಿ-ಪಕ್ಷಿಗಳೊಂದಿಗೆ ಪರಿಸರಕ್ಕೂ ಹಾನಿಯಾಗುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ ಎಂದು ಹೇಳಲಾಗುತ್ತಿದೆ.**

## ಅಧಿಕಾರಿಗಳ ಬೇಜವಾಬ್ದಾರಿ

**ಈಗಾಗಲೇ ಪಟ್ಟಣ ಸೇರಿದಂತೆ ತಾಲ್ಲೂಕಿನಲ್ಲಿ ಅಳವಡಿಸಲಾದ ಬಹುತೇಕ ಮೊಬೈಲ್ ಟವರ್ ಕಂಪನಿಗಳು ಸ್ಥಳೀಯ ಸಂಸ್ಥೆಗಳಿಂದ ಪರವಾನಗಿ ತೆಗೆದುಕೊಂಡಿಲ್ಲ. ಶಿರಹಟ್ಟಿ ಪಟ್ಟಣದ ಫಕೀರೇಶ್ವರ ನಗರದ ಪಕ್ಕದಲ್ಲಿನ ಡಬಾಲಿ ಅವರ ಜಾಗೆಯಲ್ಲಿ ಅಳವಡಿಸಲಾದ ಖಾಸಗಿ ಕಂಪನಿಯ ಮೊಬೈಲ್ ಟವರ್ ಅಳವಡಿಸಲು ಪಂಚಾಯಿತಿಯಿಂದ ಯಾವುದೇ ಪರವಾನಗಿ ಪಡೆದಿಲ್ಲ. ತಾಲ್ಲೂಕಿನ ಕಡಕೋಳ ಗ್ರಾಮದ ವೀರಪ್ಪ ಚಿಕ್ಕಪ್ಪ ಅಂಗಡಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಕಾಂಪೌಂಡ್ ಹತ್ತಿರ ಮೊಬೈಲ್ ಟವರ್ ನಿರ್ಮಿಸಲಾಗಿದ್ದು, ನಿತ್ಯ ಜೀವಭಯದಲ್ಲಿ ತರಗತಿಗಳು ನಡೆಯುತ್ತಿವೆ.**

# ಗ್ರಾಮೀಣ ಪ್ರದೇಶಗಳು ಹೆಚ್ಚೆಚ್ಚು ಅಭಿವೃದ್ಧಿ ಆಗಲಿ : ದಂಡಿನ

• ಉದಯವಾಹಿನಿ ಗದಗ

ದೇಶದ ಸಂಸ್ಕೃತಿ, ಪರಂಪರೆ, ಭಕ್ತಿ, ಭಾವ, ನಾಡಿನ ವಿವಿಧ ಹಬ್ಬಗಳ ಆಚರಣೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಜೀವಂತವಾಗಿವೆ ಎಂದು ಕೆಎಸ್‌ಎಸ್ ಚೇರಮನ್ನ ರವಿಂದ್ರನಾಥ ದಂಡಿನ ಅಭಿಪ್ರಾಯಪಟ್ಟರು.

ಅವರು ತಾಲ್ಲೂಕಿನ ಅಡವಿಸೋಮಾಪೂರ ಗ್ರಾಮದ ಶ್ರೀ ಗೋಣಿ ಬಸವೇಶ್ವರ ದೇವಸ್ಥಾನದಲ್ಲಿ ಕೆ.ವ್ಹಿ.ಎಸ್.ಆರ್. ಸಂಯುಕ್ತ ಪಪೂ ಮಹಾವಿದ್ಯಾಲಯದ ವತಿಯಿಂದ ಹಮ್ಮಿಕೊಂಡ ಎನ್‌ಎಸ್‌ಎಸ್ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಕಂಡ ಕನಸು ನನಸಾಗಬೇಕು. ದೇಶದ ಹೆಚ್ಚು ಪ್ರದೇಶವು ಹಳ್ಳಿಗಳಿಂದ ಕೂಡಿದೆ. ಗ್ರಾಮೀಣ ಪ್ರದೇಶಗಳು ಸಮೃದ್ಧವಾಗಿ ಬೇಳೆಯಬೇಕು. ಅಂದಾಗ ದೇಶ ಅಭಿವೃದ್ಧಿ ಜೊತೆಗೆ ಶಕ್ತಿಶಾಲಿಯಾಗಿ ಬೇಳೆಯಲಿದೆ. ದೇಶವು ಇಂದು ಮೂರನೇ ಬಲಿಷ್ಠ ಹಾಗೂ ನಾಲ್ಕನೇಯ ಶ್ರೀಮಂತ ರಾಷ್ಟ್ರವಾಗಿದೆ ಎಂದು ತಿಳಿಸಿದರು. ದೇಶದ ಸೈನಿಕರು ಸತತ ಪರಿಶ್ರಮದ ಫಲವಾಗಿ ಇಂದು ನಾವೆಲ್ಲ ಆರಾಮವಾಗಿ ಇದ್ದೇವೆ. ಸೈನಿಕರು ಕೆಲಸ ಕಾರ್ಯಗಳನ್ನು ಸ್ಮರಿಸಿದ ಅವರು ಆಪರೇಶನ್ ಸಿಂಧೂರ ಕುರಿತಂತೆ ಮಾತನಾಡಿದರು.

ಎನ್‌ಎಸ್‌ಎಸ್ ಶಿಬಿರ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರು ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಬೇಕು. ಶಿಬಿರಾರ್ಥಿಗಳಿಗೆ ಸಹಕಾರವನ್ನು ನೀಡಬೇಕೆಂದು ಮನವಿ ಮಾಡಿಕೊಂಡರು. ಸಮಾರಂಭದಲ್ಲಿ ಮಾಜಿ ಸೈನಿಕರಾದ ಭೋಜರಾಜ ತಳವಾರ, ಮಹಾದೇವಪ್ಪ ಡಂಬಳ, ಅರುಣಕುಮಾರ ಕಂಕರಿ, ಶಾಮ ಸುಂದರ ಡಂಬಳ ಅವರನ್ನು ಸನ್ಮಾನಿಸಲಾಯಿತು. ಗ್ರಾಪಂ ಅಧ್ಯಕ್ಷೆ ಶ್ರೀಮತಿ ಪವಿತ್ರ ಪ್ರಲ್ಹಾದ ಹೊಸಳ್ಳಿ ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು.

ಸಮಾರಂಭದ ವೇದಿಕೆಯಲ್ಲಿ ಆನಂದಪ್ಪ ಪುರದ, ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ ಹೊಂಬಳ, ಆರ್.ಎನ್ ಭಂಡಾರಿ, ಎಸ್.ಐ. ಮೇಟಿ, ಶಶಿಧರ ಕುರಿ, ಪ್ರದೀಪ ನಾಯಕ, ರವಿ ಕಿರೆಸೂರ ಸೇರಿದಂತೆ ಮಹಾವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ, ಗ್ರಾಮದ ಹಿರಿಯರು ಇದ್ದರು.



ಉದಯವಾಹಿನಿ ಚಿತ್ರ

**ಎನ್‌ಎಸ್‌ಎಸ್ ಶಿಬಿರದ ಮೂಲಕ ಗ್ರಾಮದಲ್ಲಿ ಶ್ರಮದಾನ, ಸ್ವಚ್ಛತೆ ಕುರಿತಂತೆ ಜಾಗೃತೆ, ಪ್ಲಾಸ್ಟಿಕ್ ಮುಕ್ತ ಭಾರತ ಹಾಗೂ ದೇಶದ ಪ್ರಗತಿಯಲ್ಲಿ ಯುವಜನತೆಯ ಪಾತ್ರ ಹೀಗೆ ಹತ್ತು ಹಲವಾರು ವಿಷಯಗಳನ್ನು ಒಳಗೊಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.**


**-ಪ್ರಾ ವ್ಹಿ.ಎಸ್. ದಲಾಲಿ**

# ದಸರಾ ಹಬ್ಬದ ಅಂಗವಾಗಿ ಜಿ ಎಸ್‌ಟಿ ಕಡಿತಗೊಳಿಸಿದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಜೀ: ಕೆ. ಕರಿಯಪ್ಪ

• ಉದಯವಾಹಿನಿ ಸಿಂಧನೂರು

ದೇಶದ ಜನತೆಗೆ ದಸರಾ ಹಬ್ಬದ ಅಂಗವಾಗಿ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜೀ ಯವರ ಆಡಳಿತ ಸರ್ಕಾರವು ಜಿಎಸ್‌ಟಿ ಕಡಿತಗೊಳಿಸಿ ನಾಡಿನ ಸಾಮಾನ್ಯ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಜನತೆಯ ಕನಸು ನನಸು ಮಾಡಿಕೊಂಡಿದ್ದಾರೆ

ಹಿನ್ನೆಲೆಯಲ್ಲಿ ಸಿಂಧನೂರು ವಿಧಾನಸಭಾ ಕ್ಷೇತ್ರದ ನಾಯಕರಾದ ಕೆ. ಕರಿಯಪ್ಪ ಅವರು ನೇತೃತ್ವದಲ್ಲಿ. ಗ್ರಾಮೀಣ ಮತ್ತು ನಗರ ಮಂಡಲದ ಅಧ್ಯಕ್ಷರುಗಳು ಹಾಗೂ ಕಾರ್ಯಕರ್ತರ ಜೊತೆಗೆ ಜಿ. ಎಸ್. ಟಿ ಇಳಿಕೆಯ ನಿರ್ಧಾರಕ್ಕೆ ಧನ್ಯವಾದ ಮೋದಿಜೀ ಎಂಬ ಅಭಿಯಾನದಡಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ನಗರದ ಗಾಂಧಿ ವೃತ್ತದಲ್ಲಿ ಗಾಂಧಿಜೀಯ ಪುತ್ತಳಿಗೆ ಮಾಲಾರ್ಪಣೆ ಮಾಡಿ ಸಿಹಿ ಹಂಚಿ ಸಂಭ್ರಮಿಸಿದರು. ಮುಖಂಡರಾದ ಎಂ ದೊಡ್ಡ ಬಸವರಾಜ, ಗ್ರಾಮೀಣ ಮಂಡಲದ ಅಧ್ಯಕ್ಷರಾದ ಯಂಕೋಬ ನಾಯಕ್ ರಾಮತ್ನಾಳ್, ಹಾಗೂ ನಗರ ಮಂಡಲದ ಅಧ್ಯಕ್ಷರಾದ ಸಿದ್ದರಾಮೇಶ ಮನ್ನಾಪುರ, ಮುಖಂಡರಾದ ಲಿಂಗರಾಜ ಹೂಗಾರ, ನೀರುಪಾದೆಪ್ಪ ಜೋಳದರಾಶಿ, ನಬಿ ಅನಗವಾಡಿ, ರಾಮದಾಸ್ ಸಾಲಗುಂದಾ, ಚಾಂದಪಾಸ್ ಯತ್ಮಾರಿ, ಕಾಶಿನಾಥ್ ಹೀರೆಮಠ ಪ್ರೇಮ ಸಿದ್ಧಾಂತಿ ಮಠ ಸಹನಾ ಹೀರೆಮಠ ಮಮತಾ ಹೀರೆಮಠ ರವಿ ರಾಠೋಡ ಶರಣಪ್ಪ ಪಲ್ಲೆದ್ ಸಿರಾಜ್ ಪಾಷಾ ಮಹಿಳಾ ಅಧ್ಯಕ್ಷರಾದ ಮಹಾನಂದ ಹಾಗೂ ಗ್ರಾಮೀಣ ಮಂಡಲದ ವಿವಿಧ ಮೋರ್ಚಾ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಕಾರ್ಯಕರ್ತರು ಇನ್ನಿತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

# ವೈಯಕ್ತಿಕ ವಿರೋಧವಿದೆ: ಸಚಿವ ಮಂಕಾಳ ವೈದ್ಯ

• ಉದಯವಾಹಿನಿ ಶಿರಸಿ

ಶರಾವತಿ ಪಂಪ್ಸ್ ಸ್ಟೋರೇಜ್ ಯೋಜನೆ ಬಗ್ಗೆ ತಿಳಿದಂದಿನಿಂದಲೂ ಅದನ್ನು ಕೈ ಬಿಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೆ. ಈಗಲೂ ವೈಯಕ್ತಿಕವಾಗಿ ಯೋಜನೆ ಅನುಷ್ಠಾನಕ್ಕೆ ನನ್ನ ವಿರೋಧವಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು. ಶರಾವತಿ ಪಂಪ್ಸ್ ಸ್ಟೋರೇಜ್ ಯೋಜನೆ 2006-07ರಲ್ಲಿಯೇ ಚರ್ಚೆಯಾಗಿದ್ದು, ಈಗ ಯೋಜನೆಯ ಟೆಂಡರ್ ಆಗಿ ಸಾರ್ವಜನಿಕ ಅಹವಾಲು ಸ್ವೀಕರಿಸಲಾಗಿದೆ.

ಈ ಯೋಜನೆಯನ್ನು ಕೇವಲ ವಿರೋಧ ಪಕ್ಷದವರು ಮಾತ್ರ ವಿರೋಧಿಸಿಲ್ಲ. ಜನರಿಗೆ ತೊಂದರೆ ಆಗಬಾರದು ಎಂಬ ಉದ್ದೇಶಕ್ಕೆ ನಾವೂ ವಿರೋಧಿಸಿದ್ದೇವೆ. ಆದರೆ, ಯೋಜನೆಯಿಂದ ತೊಂದರೆ ಆಗುವುದಿಲ್ಲ ಎಂದು ಯೋಜನೆಯ ಪರವಾಗಿ ಮಾತನಾಡುವವರು ಹೇಳುತ್ತಿದ್ದಾರೆ. ಅಂತಿಮ ತೀರ್ಮಾನ ಏನಾಗುತ್ತದೆ ನೋಡೋಣ' ಎಂದ ಅವರು, 'ಬೇಡ್ತಿ-ವರದಾ ನದಿ ನೀರನ್ನು ನಾವು ಬೇರೆ ಜಿಲ್ಲೆಗೆ ಕೊಡುವುದಿಲ್ಲ ಎಂದು 20 ವರ್ಷದಿಂದಲೂ ಹೇಳುತ್ತ ಬಂದಿದ್ದೇವೆ. ಅದು ಕಾರ್ಯರೂಪಕ್ಕೆ ಬರದ ಯೋಜನೆ' ಎಂದರು. ದೇಶಮಟ್ಟದಲ್ಲೂ ಜಾತಿ ಸಮೀಕ್ಷೆ ನಡೆಯುತ್ತಿದೆ. ರಾಜ್ಯದಲ್ಲಿಯೂ ಆರಂಭಿಸಿದ್ದೇವೆ. ಆದರೆ, ಕೇಂದ್ರ ಸರ್ಕಾರ ಕೇವಲ ಜಾತಿಯನ್ನಷ್ಟೇ ಗಮನಿಸಿ ಸಮೀಕ್ಷೆ ನಡೆಸುತ್ತಿದ್ದರೆ ನಾವು ಜನರ ಆರ್ಥಿಕ ಪರಿಸ್ಥಿತಿ, ಶಿಕ್ಷಣಿಕ ಸ್ಥಿತಿ ಗತಿಯನ್ನೂ ಗಮನಿಸಿ ಸಮೀಕ್ಷೆ ನಡೆಸುತ್ತಿದ್ದೇವೆ. ಬಡವರು ಇನ್ನೂ ಎಷ್ಟಿದ್ದಾರೆ, ಅವರ ಸ್ಥಿತಿ ಗತಿ ಯಾವ ಮಟ್ಟದಲ್ಲಿದೆ ಎಂಬುದನ್ನೂ ಸಮೀಕ್ಷೆ ನಡೆಸುತ್ತಿದ್ದೇವೆ. ಈಗ ಶಿಕ್ಷಕರು ರಜೆಯಲ್ಲಿ ಇದ್ದಾರೆ. ಸಮೀಕ್ಷೆ ಮಾಡಬೇಕಾದ ಮನೆಗಳ ಸಂಖ್ಯೆಯೂ ಜಾಸ್ತಿ ಇದೆ. ಹೀಗಾಗಿ, ಆದಷ್ಟು ಬೇಗ ಈ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂಬುದು ಸರ್ಕಾರದ ನಿರ್ಧಾರ ಎಂದರು.




# ಕರ್ತವ್ಯ ಲೋಪ ಎಸಗಿದ ಮುಖ್ಯ ಶಿಕ್ಷಕಿಯ ಅಮಾನತು

• ಉದಯವಾಹಿನಿ ಔರಾದ

ಶಾಲಾ ಮಕ್ಕಳಿಗೆ ಬಿಸಿಯೂಟ, ಮೊಟ್ಟೆಯನ್ನು ಸಮರ್ಪಕವಾಗಿ ವಿತರಿಸುವಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ತಾಲ್ಲೂಕಿನ ದಾಬಕಾ(ಸಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಸುನಂದಾ ಕೊಂಗೆ ಅವರನ್ನು ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ (ಆಡಳಿತ) ಎಸ್.ಜಿ ಸುರೇಶ ಆದೇಶಿಸಿದ್ದಾರೆ.

ಔರಾದ್ (ಬಿ) ತಾಲ್ಲೂಕು ಹಿರಿಯ ಸಿವಿಲ್ ನ್ಯಾಯಾಧೀಶರಾದ ಹಾಜಿ ಹುಸೇನ್ ಸಾಬ ಯಾದವಾಡ ಅವರು ದಾಬಕಾ ಗ್ರಾಮದ ಸರ್ಕಾರಿ ಶಾಲೆಗೆ ಭೇಟಿ ನೀಡಿದಾಗ 'ಶಾಲೆಯಲ್ಲಿ ಕುಡಿಯುವ ನೀರು, ಶೌಚಾಲಯ ಅವ್ಯವಸ್ಥೆ , ಬಿಸಿಯೂಟ ಸರಿಯಾಗಿ ವಿತರಣೆಯಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ನ್ಯಾಯಾಧೀಶರಿಗೆ ತಿಳಿಸಿದರು. ಶಾಲೆಯ ಅವ್ಯವಸ್ಥೆ ಕಂಡು ನ್ಯಾಯಾಧೀಶರು ಶಾಲೆಯ ಮುಖ್ಯಗುರು ಹಾಗೂ ಅಡುಗೆ ಸಿಬ್ಬಂದಿಗೆ ತೀವ್ರ ತರಾಟೆ ತೆಗೆದುಕೊಂಡಿದ್ದರು.

ಈ ಕುರಿತು ಸೆ.16 ರಂದು ಪತ್ರಿಕೆ ವರದಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿರುವುದನ್ನು ಆಧರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದ ತಂಡ ಸೆ.17 ರಂದು ಶಾಲೆಗೆ ಭೇಟಿ ನೀಡಿತು, '200 ಮಕ್ಕಳಿಗೆ ಅರ್ಧ ಕೆ.ಜಿ. ಟಮಾಟೋ ಬಳಕೆ ಮಾಡಿರುವುದು ಮತ್ತು ವಿದ್ಯಾರ್ಥಿಗಳು ಊಟ ಮಾಡಲು ಮನೆಯಿಂದಲೇ ತಟ್ಟೆ ಮತ್ತು ಲೋಟ ತರುವುದು, ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದು, ಬಿಸಿ ಊಟದಲ್ಲಿ ಹುಳುಗಳು ಬಂದರೆ ಅದನ್ನು ತೆಗೆದು ಊಟ ಮಾಡಲು ಮುಖ್ಯ ಶಿಕ್ಷಕರು ಮಕ್ಕಳಿಗೆ ತಿಳಿಸಿರುವುದು' ಕಂಡು ಬಂದಿದೆ. 'ಒಂದುವರೇ ತಿಂಗಳಿನಿಂದ ಮಕ್ಕಳಿಗೆ ಸರಿಯಾಗಿ ಮೊಟ್ಟೆ ನೀಡಿರುವುದಿಲ್ಲ. ಆಹಾರ ಧಾನ್ಯಗಳು ಹಾಗೂ ಹಾಲಿನ ಪುಡಿಯನ್ನು ಮುಖ್ಯ ಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿಯವರು ಮನೆಗೆ ತೆಗೆದುಕೊಂಡು ಹೋಗಿರುತ್ತಾರೆ. ಶಾಲೆಯಲ್ಲಿ ಶೌಚಾಲಯದ ಕಟ್ಟಡವಿದ್ದರೂ ನೀರಿನ ಸೌಲಭ್ಯವಿಲ್ಲದೇ ಗಂಡು ಮಕ್ಕಳು ಬಯಲಿಗೆ ಹಾಗೂ ಹೆಣ್ಣು ಮಕ್ಕಳು ಮನೆ ಅಥವಾ ಪ್ರೌಢ ಶಾಲೆಯ ಶೌಚಾಲಯ ಬಳಸುತ್ತಿರುವುದು ಕಂಡು ಬಂದಿರುತ್ತದೆ' ಎಂಬ ಆರೋಪಗಳು ಪ್ರಭಾರಿ ಮುಖ್ಯಶಿಕ್ಷಕಿ ಒಪ್ಪಿಕೊಂಡಿದ್ದಾರೆ' ಎಂದು ಆದೇಶ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.




ಉದಯವಾಹಿನಿ ಚಿತ್ರ

## ವರದಿ ಆಧರಿಸಿ ಅಮಾನತು

**ವಿದ್ಯಾರ್ಥಿಗಳಿಗೆ ಹೊಡೆಯುವುದು, ಮಹತ್ವಕಾಂಕ್ಷಿ ಯೋಜನೆಯಾದ ಮಧ್ಯಾಹ್ನ ಬಿಸಿಯೂಟ ಮಕ್ಕಳಿಗೆ ಒದಗಿಸುವಲ್ಲಿ ವಿಫಲರಾಗಿ ಕರ್ತವ್ಯದಲ್ಲಿ ಲೋಪ, ಬೇಜವಾಬ್ದಾರಿ ಹಾಗೂ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆ ಔರಾದ್ ಬಿಇಒ ಅವರು ನೀಡಿದ ಜಂಟಿ ಸಮೀಕ್ಷೆ ವರದಿ ಆಧರಿಸಿ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.**

# ಅಪೌಷ್ಟಿಕತೆಯ ನಿವಾರಣೆಯ ಬಗ್ಗೆ ಅರಿವು ಮೂಡಿಸಬೇಕು: ಕ್ಯಾ. ಬ್ರಿಜೇಶ್ ಚೌಟ

• ಉದಯವಾಹಿನಿ ಮಂಗಳೂರು

ಜಿಲ್ಲೆಯಾದ್ಯಂತ ಪೊಷಣ ಅಭಿಯಾನ ನಡೆಯುತ್ತಿದ್ದು, ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ನಿವಾರಿಸಲು ಮತ್ತು ಆರೋಗ್ಯವಂತ ಭಾರತ ನಿರ್ಮಿಸುವ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು ಎಂದು ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಹೇಳಿದರು. ಅವರು ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಭವನದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದ.ಕ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯುಷ್ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಪೋಷಣ ಅಭಿಯಾನ ಯೋಜನೆಯಡಿ ''ಪೋಷಣ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗರ್ಭಿಣಿ, ಬಾಣಂತಿಯರು, ಮಕ್ಕಳು ಮತ್ತು ಬಾಲಕಿಯರಲ್ಲಿ ಅಪೌಷ್ಟಿಕತೆಯ ನಿವಾರಣೆಯ ಬಗ್ಗೆ ಅರಿವು ಮೂಡಿಸಬೇಕು. ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಎಲ್ಲರೂ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ ಮಾತನಾಡಿ, ಅಪೌಷ್ಟಿಕತೆಯ ಪಿಡುಗನ್ನು ಹೋಗಲಾಡಿಸಬೇಕು. ಅಂಗನವಾಡಿ ಕೇಂದ್ರಗಳ ಮೂಲಕ ಪೌಷ್ಟಿಕ ಆಹಾರವನ್ನು ವಿತರಿಸಲಾಗುತ್ತದೆ. ಮಕ್ಕಳಲ್ಲಿ ಕುಂಠಿತ ಬೆಳವಣಿಗೆ, ಅಪೌಷ್ಟಿಕತೆ, ರಕ್ತಹೀನತೆ ಮತ್ತು ಕಡಿಮೆ ತೂಕದ ಶಿಶು ಜನನ ಮಟ್ಟವನ್ನು ಕಡಿಮೆ ಮಾಡಲು ಸಮಾಜಕ್ಕೆ ಅಪೌಷ್ಟಿಕತೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ಅವರು ಹೇಳಿದರು. ದೇಶದಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಎಲ್ಲಾ ಇಲಾಖೆಗಳು ಹೋರಾಟ ಮಾಡುತ್ತಿರುವುದು ಶ್ಲಾಘನೀಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನೀಸಾ ಹೇಳಿದರು.

ಮಕ್ಕಳಿಗೆ ಪೊಷಣೆ ನೀಡುವುದರ ಜೊತೆಗೆ ವಿದ್ಯಾಭ್ಯಾಸವನ್ನು ನೀಡಿ ಅವರು ದೇಶದ ಪ್ರಗತಿಗೆ ಕೊಡುಗೆ ನೀಡುವಂತಾಗಬೇಕು. ಮಕ್ಕಳಿಗೆ ಕಲಬೆರಕೆಯುತ ಆಹಾರವನ್ನು ನೀಡದೆ ಸದೃಢ ದೇಶದ ವ್ಯಕ್ತಿಗಳನ್ನಾಗಿ ಮಾಡಲು ಪೌಷ್ಟಿಕ ಆಹಾರವನ್ನು ನೀಡಬೇಕು. ಪೌಷ್ಟಿಕ ಆಹಾರವನ್ನು ನೀಡುವುದರಿಂದ ಸುಪೋಷಿತ ಭಾರತ ನಿರ್ಮಿಸಬಹುದು ಎಂದು ಅವರು ಹೇಳಿದರು.

**ಪೋಷಣ ಮಾಸಾಚರಣೆ ಕಾರ್ಯಕ್ರಮ**



# ತೆರೆದುಕೊಳ್ಳದ ಆ್ಯಪ್, ಸಾಧ್ಯವಾಗದ ಸಮೀಕ್ಷೆ

• ಉದಯವಾಹಿನಿ ಜಗಳೂರು

ಸರ್ಕಾರದ ಮಹತ್ವದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ರಾಜ್ಯದಾದ್ಯಂತ ಸೋಮವಾರ ಪ್ರಾರಂಭಗೊಂಡಿದ್ದು, ಸಮೀಕ್ಷಾ ಆ್ಯಪ್ ತಾಂತ್ರಿಕ ಸಮಸ್ಯೆಯಿಂದ ತಾಲ್ಲೂಕಿನಲ್ಲಿ ಮೊದಲ ದಿನ ಯಾವುದೇ ಕುಟುಂಬದ ಸಮೀಕ್ಷೆ ನಡೆದಿಲ್ಲ ಎಂದು ಮೂಲಗಳು ತಿಳಿಸಿವೆ.

ಮಧ್ಯಾಹ್ನದವರೆಗೂ ಆ್ಯಪ್ ತೆರೆದುಕೊಳ್ಳದ ಕಾರಣ ತಾಲ್ಲೂಕಿನಲ್ಲಿ ಸಮೀಕ್ಷಾ ಕಾರ್ಯ ಪ್ರಾರಂಭಿಸಲು ಸಾಧ್ಯವಾಗಿಲ್ಲ. ಪಟ್ಟಣದ ಇಂದಿರಾ ಬಡಾವಣೆಯಲ್ಲಿ ಕೇವಲ ಒಂದು ಕುಟುಂಬದ ಸಮೀಕ್ಷೆ ಪೂರ್ಣವಾಗಿದೆ.

ಮಂಗಳವಾರದಿಂದ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸುಗಮವಾಗಿ ಸಮೀಕ್ಷೆ ನಡೆಯಲಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅಸ್ಮಾಬಾನು ತಿಳಿಸಿದ್ದಾರೆ. ತಾಲ್ಲೂಕಿನಲ್ಲಿ ಒಟ್ಟು 412 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. 150 ಮನೆಗಳಿಗೆ ಒಂದು ಬ್ಲಾಕ್ ರಚಿಸಲಾಗಿದೆ. ಬೆಸ್ಕಾಂ ಮೂಲಗಳ ಪ್ರಕಾರ ತಾಲ್ಲೂಕಿನಲ್ಲಿ ಒಟ್ಟು 46,000 ಮನೆಗಳಿವೆ. ಒಟ್ಟು 412 ಗಣತಿದಾರರು ಭಾಗವಹಿಸಲಿದ್ದಾರೆ. ಪ್ರತಿ 20 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರಂತೆ ಒಟ್ಟು 21 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಅ. 10ರವರೆಗೆ ಸಮೀಕ್ಷಾ ಕಾರ್ಯ ನಡೆಯಲಿದೆ' ಎಂದು ಮಾಹಿತಿ ನೀಡಿದರು.

# ಕಲ್ಯಾಣ ಕರ್ನಾಟಕ ಹೋರಾಟಗಾರರ ತ್ಯಾಗ ಸ್ಮರಣೆ ಅಗತ್ಯ: ಈಶ್ವರ್ ಖಂಡ್ರೆ

## ಕಲ್ಯಾಣ ಕರ್ನಾಟಕದ ಜನತೆಗೆ ನ್ಯಾಯ ದೊರಕಲು ನಾವು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು

• ಉದಯವಾಹಿನಿ ಬೀದರ್

ದೂರವಾಣಿ ಮೂಲಕ ಕಾರ್ಯಕ್ರಮಕ್ಕೆ ಶುಭ ಹಾರೈಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಬಿ. ಖಂಡ್ರೆ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ನಿರ್ಮಾಣಕ್ಕಾಗಿ ಈ ಭಾಗದ ಅನೇಕರು ಹೋರಾಟ ನಡೆಸಿದ್ದಾರೆ. ಅವರ ತ್ಯಾಗ ಮತ್ತು ಸಮರ್ಪಣೆಯನ್ನು ನಾವು ಪ್ರತಿದಿನ ಸ್ಮರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ಬೀದರ ನಗರದ ಪರಮ ಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರ ಜಿಲ್ಲಾ ರಂಗಮಂದಿರದಲ್ಲಿ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆ ವತಿಯಿಂದ ಏರ್ಪಡಿಸಿದ ಸಂಸ್ಥಾಪನಾ ದಿನಾಚರಣೆ ಮತ್ತು ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ 11 ಜನ ಸಾಧಕರಿಗೆ ಸನ್ಮಾನ ಮತ್ತು ಸೇನೆ ಬಲಪಡಿಸಲು ಕಾರ್ಯಕರ್ತರ ಬೃಹತ್ ಸಮಾವೇಶ ಕುರಿತು ಮಾತನಾಡಿದರು.

ಅವರು ಪ್ರಾಂತ್ಯವಾರು ಅಸಮತೋಲನದ ಸಮಸ್ಯೆಗಳು ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಕಲ್ಯಾಣ ಕರ್ನಾಟಕದ ಜನತೆಗೆ ನ್ಯಾಯ ದೊರಕಲು ನಾವು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು. ಸಮಾನ ಅವಕಾಶ, ಸಮಾನ ಸೌಕರ್ಯ ಹಾಗೂ ಸಮಗ್ರ ಅಭಿವೃದ್ಧಿ ಇವುಗಳೇ ನಮ್ಮ ಮುಖ್ಯ ಗುರಿಯಾಗಬೇಕು ಎಂದು ಹೇಳಿದರು. ಸಚಿವ ಖಂಡ್ರೆ ಅವರು ಕಾರ್ಯಕ್ರಮ ಆಯೋಜಕರಿಗೆ ಧನ್ಯವಾದ ತಿಳಿಸಿ, ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಹೋರಾಟದ ದಾರಿಯಲ್ಲಿ ಸರ್ಕಾರ ಸದಾ ಕೈಜೋಡಿಸಲು ಸಿದ್ಧವಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಸಂಸ್ಥಾಪಕ ಅಧ್ಯಕ್ಷರಾದ ಸ್ವಾಮಿದಾಸ್ ಕೆಂಪೆನೋರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ಚಿಂತನೆಗೆ ನಾವೆಲ್ಲರೂ ನಿರಂತರ ಹೋರಾಟದ ಹಾದಿ ತುಳಿಯಲೇಬೇಕು. ನ್ಯಾಯ ದೊರಕಿಸಲು ಏಕತಾ ಶಕ್ತಿ ಹಾಗೂ ಸಂಘಟಿತ ಹೋರಾಟವೇ ಶ್ರೇಷ್ಠ ಮಾರ್ಗ ಎಂದು ಒತ್ತಾಯಿಸಿದರು.

ಬೆಳಿಗ್ಗೆ ಅಂಬೇಡ್ಕರ್ ಸರ್ಕಲ್‌ನಲ್ಲಿ ತೆರೆದ ವಾಹನದಲ್ಲಿ ಸರ್ದಾರ ವಲ್ಲಾಭಾಯ್ ಪಟೇಲ್ ಅವರ ಭಾವಚಿತ್ರದ ಮೆರವಣಿಗೆಗೆ ಪರಮ ಪೂಜ್ಯ ಶ್ರೀ ಹವಾ ಮಲ್ಲಿನಾಥ್ ಮಹಾರಾಜರು ಚಾಲನೆ ನೀಡಿದರು. ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಅಮೃತರಾವ್ ಚಿಮಕೋಡೆ, ಬಂಟಿದರಬಾರೆ, ಪಪ್ಪು ಪಾಟೀಲ್ ಮತ್ತಿತರರು ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ ನ್ಯಾಯವಾದಿ, ಅಶೋಕ್ ಮಾನುರೆ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ರಾಜ್ಯವು ಪ್ರತಿಯೊಂದು ರಾಜ್ಯದ ಕೂಗಿನಂತೆ, ಹೋರಾಟಗಾರರ ತ್ಯಾಗ, ಜನರ ಆಕಾಂಕ್ಷೆ ಮತ್ತು ಅಭಿವೃದ್ಧಿಯ ಬಯಕೆಯ ಪ್ರತೀಕವಾಗಿದೆ. ಇಲ್ಲಿ ಇರುವ ಜನರ ಸಮಸ್ಯೆ ನಿವಾರಣೆಗೆ, ಶಿಕ್ಷಣ, ಉದ್ಯೋಗ ಹಾಗೂ ಮೂಲಸೌಕರ್ಯಗಳ ಸುಧಾರಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಾಜ್ಯದ ಪ್ರತಿಯೊಂದು ಕೂಗು ಸರ್ಕಾರದ ಕಿವಿಗೆ ತಲುಪಬೇಕು. ಆಗ ಮಾತ್ರ ಈ ಭಾಗದ ನಿಜವಾದ ಅಭಿವೃದ್ಧಿ ಸಾಧ್ಯ ಎಂದರು. ಅದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ, ಶ್ರಮ ಮತ್ತು ಸೇವಾ ಮನೋಭಾವದಿಂದ ಸಾಧನೆ ಮಾಡಿ ಹೆಸರನ್ನು ಗಳಿಸಿರುವ 11 ಮಂದಿಗೆ ವಿಶೇಷವಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಫಾಳೆಪ್ಪಾ ಅಂತಿ ಸ್ವಾಗತಿಸಿದರು, ನಾಗಪ್ಪ ಜಾಣಕನೋರ್ ನಿರೂಪಿಸಿದರು, ಸಂಗಮೇಶ ಏಣಕೂರ್ ವಂದಿಸಿದರು.

ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸೋಮಶೇಖರ್ ಬಿರಾದರ್, ಕುರಿ ಉಣ್ಣೆ ಅಭಿವೃದ್ಧಿ ನಿಮಗದ ಮಾಜಿ ಅಧ್ಯಕ್ಷರಾದ ಪಂಡಿತ್ ಚಿದ್ರಿ, ನ್ಯಾಯವಾದಿ ಗೌತಮ್ ವಾಗರಾಜ್, ಯುವ ಮುಖಂಡರಾದ ಆದೀಶ್ ವಾಲಿ, ಸಾಬಣ್ಣಾ ಜಮಾದಾರ್, ಜೇಮ್ಸ್ ಇಸ್ಲಾಂಪೂರ್, ಪ್ರಕಾಶ ಹಳ್ಳಿಖೇಡ್, ನೀಲಕಂಠ ಭೆಂಡೆ, ಸಂಗಪ್ಪಾ, ಧನರಾಜ ಬೆಮಳಖೇಡಾ, ಮಾರುತಿ ಬಂಗಾರೆ, ಸಚೀನ್ ಮಲ್ಕಾಪೂರೆ, ಸುನೀಲ ಭಾವಿಕಟ್ಟಿ ವೇದಿಕೆ ಮೇಲೆ ಇದ್ದರು.

**ಕ. ಕರ್ನಾಟಕದ ಜನರ ಶಕ್ತಿ ಅಪಾರವಾಗಿದೆ. ಈ ಶಕ್ತಿಯನ್ನು ನಾವು ಒಗ್ಗಟ್ಟಿನಿಂದ ಸಮಾಜ ಹಿತಕ್ಕಾಗಿ ಬಳಸಿದಾಗ ನಿಜವಾದ ನ್ಯಾಯ ದೊರಕುತ್ತದೆ. ಹೋರಾಟಗಾರರಿಗೆ ಆಧ್ಯಾತ್ಮಿಕ ಪ್ರೇರಣೆ ಅವಶ್ಯಕ. ಭಕ್ತಿ ಮತ್ತು ಶಕ್ತಿ ಇವೆರಡೂ ಸೇರಿದಾಗ ಮಾತ್ರ ಪ್ರಗತಿಯ ಬಾಗಿಲು ತೆರೆಯುತ್ತದೆ.**

**-ಶ್ರೀ ಶಿವಯೋಗಿ ಮಚೆಂದ್ರನಾಥ ಮಹಾರಾಜರು**



ಉದಯವಾಹಿನಿ ಚಿತ್ರ

**ಕಲ್ಯಾಣ ಕರ್ನಾಟಕ ಭಾಗದವರು ಯಾವಾಗಲೂ ಪ್ರತಿಯೊಂದು ರಂಗದಲ್ಲಿ ಮುಂಚೂಣಿಯಲ್ಲಿದ್ದಾರೆ. ವಿಶೇಷವಾಗಿ ಕಲೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಮತ್ತು ಸಮಾಜ ಸೇವೆಯ ಕ್ಷೇತ್ರಗಳಲ್ಲಿ ನಮ್ಮ ಭಾಗದ ಪ್ರತಿಭೆಗಳು ದೇಶದ ಮಟ್ಟದಲ್ಲಿ ಗುರುತಿಸಿಕೊಂಡಿವೆ ಎಂದು ಹೇಳಿದರು.**

**-ಶಿವಶರಣಪ್ಪಾ ವಾಲಿ**
**ಉತ್ತರ ಕರ್ನಾಟಕ ದಿನ ಪತ್ರಿಕೆ ಸಂಪಾದಕ**

**ಕಲ್ಯಾಣ ಕರ್ನಾಟಕ ಉತ್ಸವ**

## ಮಿನಿ ನ್ಯೂಸ್

### ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಪಡಿಸಿ

• ಉದಯವಾಹಿನಿ ಮಹಾಲಿಂಗಪುರ

ಸಮೀಪದ ಸಮೀರವಾಡಿಯ ಕಬ್ಬು ಬೆಳೆಗಾರರ ಸಂಘದ ಸಭಾಭವನದಲ್ಲಿ ನಡೆದ ಸಂಘದ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಆಗುತ್ತಿರುವ ಮೋಸ ಮತ್ತು ಬಾಕಿ ಹಣ ಪಾವತಿ ಸಮಸ್ಯೆಗಳ ಕುರಿತು ರೈತರು ಕಳವಳ ವ್ಯಕ್ತಪಡಿಸಿದರು.

ಕಬ್ಬಿಗೆ ನ್ಯಾಯಯುತ ಬೆಲೆಯನ್ನು ನಿಗದಿಪಡಿಸಬೇಕು. ರೈತರು ಕಬ್ಬನ್ನು ಕಾರ್ಖಾನೆಗೆ ಸಾಗಿಸಿದ ಕೂಡಲೇ ಹಣ ಜಮಾ ಮಾಡಬೇಕು. ಕಬ್ಬು ಪೂರೈಕೆ ಮಾಡುವ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ತೂಕದಲ್ಲಿ ಆಗುತ್ತಿರುವ ಮೋಸ ನಿಂತಿದೆ. ಆದರೆ ಕಬ್ಬಿನ ರಿಕವರಿಯಲ್ಲಿ ಮೋಸ ಆಗುತ್ತಿದ್ದು, ಇದನ್ನು ತಡೆಯಬೇಕು ಎಂದು ರೈತರು ಆಗ್ರಹಿಸಿದರು.

ಸಕ್ಕರೆ ಕಾರ್ಖಾನೆಗೆ ಕಬ್ಬು ಪೂರೈಸಿದ ರೈತರಿಗೆ ಮಾತ್ರ ಭೂಮಿ ಲಾಭ ನೀಡಬೇಕು. ಕಳೆದ ಸಾಲಿನಲ್ಲಿ ಕಬ್ಬು ಕಟಾವು ಮಾಡಿದ ಕಾರ್ಮಿಕರಿಗೆ ಬಾಕಿ ಹಣ ಪಾವತಿಸಬೇಕು' ಎಂದು ರೈತರು ಒತ್ತಾಯಿಸಿದರು.

'ಮೋಸ ಮಾಡುವ ಕಾರ್ಖಾನೆಗಳಿಗೆ ಕಬ್ಬು ಕಳುಹಿಸದಿರಲು ರೈತರು ನಿರ್ಧರಿಸಬೇಕು. ರೈತರು ಒಗ್ಗಟ್ಟಾಗಬೇಕು. ಸಕ್ಕರೆ ಕಾರ್ಖಾನೆ ಮಾಲೀಕರು ಅಭಿವೃದ್ಧಿ ಹೊಂದುತ್ತಿದ್ದಾರೆ. ಆದರೆ, ರೈತರು ಇದ್ದಲ್ಲೇ ಇದ್ದಾರೆ. ಕಬ್ಬಿಗೆ ಪರ್ಯಾಯ ಬೆಳೆ ಬೆಳೆಯಲು ಚಿಂತನೆ ಹರಿಸಬೇಕು' ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

### ಸಿಡಿಲು ಬಡಿದು ಎತ್ತು ಸಾವು

• ಉದಯವಾಹಿನಿ ಬಾದಾಮಿ

ಪಟ್ಟಣ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ಧಾರಾಕಾರ ಮಳೆಯಾಗಿದ್ದು, ಸಮೀಪದಯರಗೊಪ್ಪ ಎಸ್. ಬಿ. ಗ್ರಾಮದಲ್ಲಿ ಸಿಡಿಲು ಬಡಿದು ಎತ್ತು ಸತ್ತಿದೆ. ರಾಘವೇಂದ್ರ ಹೊಸಮನಿ ರೈತರು ಹೊಲದಲ್ಲಿ ಎತ್ತಿನ ಕಟ್ಟಿದ್ದಾಗ ಸಿಡಿಲು ಬಡಿದಿದೆ. ಅಗಸ್ತ್ಯತೀರ್ಥ ಹೊಂಡದ ನೀರು ನುಗ್ಗಿ ಆರು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ತಾಲ್ಲೂಕಿನಲ್ಲಿ 12 ಮನೆಗಳು ಭಾಗಶಃ ಕುಸಿದಿವೆ ಎಂದು ತಹಶೀಲ್ದಾರ್ ಕಾವ್ಯ ಶ್ರೀ ತಿಳಿಸಿದರು.

ಬಾದಾಮಿ ಪಟ್ಟಣದಲ್ಲಿ 7.8 ಸೆ.ಮೀ. ಮಳೆಯಾಗಿದೆ. ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಧಾರಾಕಾರ ಮಳೆಯಿಂದಾಗಿ ಜೋಡಿ ಜಲಧಾರೆಗಳು ಧುಮ್ಮಿಕ್ಕುತ್ತಿವೆ. ಅಗಸ್ತ್ಯತೀರ್ಥ ಹೊಂಡ ತುಂಬಿ ನೀರು ಹೊರ ಹರಿಯುತ್ತಿದ್ದು, ಪಟ್ಟಣದ ನೂರಾರು ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಯಿತು. ಮನೆಗಳಲ್ಲಿ ನುಗ್ಗಿದ ನೀರನ್ನು ರಾತ್ರಿಯಿಡೀ ಸ್ವಚ್ಛತೆ ಕಾರ್ಯಮಾಡಿದರು. 2009ರಲ್ಲಿ ಈ ರೀತಿಯಾಗಿ ನೀರು ಬಂದಿತ್ತು. ಈ ಬಾರಿ ಅದಕ್ಕಿಂತ ಹೆಚ್ಚಿನ ನೀರು ಬಂದು ಮನೆಗೆ ನೀರು ನುಗ್ಗಿದೆ' ಎಂದು ರೇಣಮ್ಮ ಹೇಳಿದರು.

ಹೊಂಡದ ನೀರು ಉಳ್ಳಾಗಡ್ಡಿ ಓಣಿ, ನೇಕಾರ ಓಣೆ, ಕಳ್ಳಿಪೇಟೆ ಬೀದಿಯಲ್ಲಿನ ಮನೆಗಳಿಗೆ ನೀರು ನುಗ್ಗಿದೆ. ಬಸ್ ನಿಲ್ದಾಣದ ಸಮೀಪದ ಹಳ್ಳದ ನೀರು ರಸ್ತೆ ಆವರಿಸಿಸಿತ್ತು. ಬಸ್ ನಿಲ್ದಾಣದಿಂದ ಅಂಚೆ ಕಚೇರಿವರೆಗಿನ ರಸ್ತೆ ಜಲಾವೃತವಾಗಿತ್ತು. ಬಾಯಿ ಹಳ್ಳ, ಸಿದ್ದನಗವಿ ಹಳ್ಳದ ನೀರು ಮಕಾನ್ ಪ್ರದೇಶ, ಸದಾಶಿವನಗರ ಹಾಗೂ ಚಾಲುಕ್ಯ ನಗರದ ರಸ್ತೆಗಳಲ್ಲಿ ನೀರು ಹರಿಯುತ್ತಿತ್ತು. ಇದರಿಂದ ಜನರಿಗೆ ತೊಂದರೆಯಾಯಿತು. ವಾಹನಗಳ ಸಂಚಾರವೂ ಕಷ್ಟವಾಗಿತ್ತು.

### ಅಂಗವಿಕಲ, ಅನಾರೋಗ್ಯ ಪೀಡಿತ ಶಿಕ್ಷಕರಿಗೆ ಸಮೀಕ್ಷೆ ಕೆಲಸದಿಂದ ವಿನಾಯಿತಿಗೆ ಆಗ್ರಹ

• ಉದಯವಾಹಿನಿ ಬೆಳಗಾವಿ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಅಂಗವಿಕಲ, ತೀವ್ರ ತರಹದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಮತ್ತು ಸೇವಾನಿವೃತ್ತಿ ಅಂಚಿನಲ್ಲಿ ಇರುವ ಶಿಕ್ಷಕರನ್ನು ನೇಮಿಸಿರುವುದನ್ನು ಖಂಡಿಸಿ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ಶಿಕ್ಷಕರು ನಗರದಲ್ಲಿ ಪ್ರತಿಭಟನೆ ನಡೆಸಿದರು. ತಹಶೀಲ್ದಾರ್ ಕಚೇರಿ ಆವರಣದಲ್ಲಿ ಮತ್ತು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಶಿಕ್ಷಕರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಜಯಕುಮಾರ ಹೆಬಳಿ, 'ಸಮೀಕ್ಷೆ ನಡೆಸಲು ನಾವು ಸಿದ್ಧರಿದ್ದೇವೆ. ಆದರೆ, ಗರ್ಭಿಣಿಯರು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಮತ್ತು ಅಂಗವಿಕಲ ಶಿಕ್ಷಕರನ್ನು ಸಮೀಕ್ಷೆದಾರರನ್ನಾಗಿ ನೇಮಿಸಿದ್ದಾರೆ. ನಾವು ಕರ್ತವ್ಯ ನಿರ್ವಹಿಸುವ ಶಾಲೆಗಳ ಸ್ಥಳ ಬಿಟ್ಟು, ಬೇರೆ ಕಡೆ ಸಮೀಕ್ಷೆಗೆ ನಿಯೋಜಿಸಿದ್ದಾರೆ. ಒಬ್ಬ ಸಮೀಕ್ಷೆದಾರ 16 ದಿನಗಳಲ್ಲಿ 9 ಬೇರೆ ಸ್ಥಳಗಳಲ್ಲಿ ಸಮೀಕ್ಷೆ ಮಾಡುವಂತೆ ತಿಳಿಸಿರುವುದು ಸರಿಯಲ್ಲ' ಎಂದು ದೂರಿದರು. ಬೂತ್ ಮಟ್ಟದಲ್ಲಿ ಚುನಾವಣೆ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರನ್ನೂ ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ. ಒಬ್ಬ ಶಿಕ್ಷಕ ಏಕಕಾಲಕ್ಕೆ ಎರಡೂ ಕೆಲಸ ಹೇಗೆ ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು. ಸಮೀಕ್ಷೆದಾರರ ನೇಮಕದಲ್ಲಿ ಆಗಿರುವ ಲೋಪವನ್ನು ತಕ್ಷಣವೇ ಸರಿಪಡಿಸಬೇಕು. ಅಂಗವಿಕಲರು, ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಮತ್ತು ವಯಸ್ಸಾದ ಶಿಕ್ಷಕರಿಗೆ ಸಮೀಕ್ಷೆ ಕೆಲಸದಿಂದ ವಿನಾಯಿತಿ ಕೊಡಬೇಕು. ಇಲ್ಲದಿದ್ದರೆ ನಾವು ಸಮೀಕ್ಷೆ ಬಹಿಷ್ಕರಿಸುತ್ತೇವೆ' ಎಂದು ಎಚ್ಚರಿಕೆ ಕೊಟ್ಟರು. 'ನಾನು ಯಮನಾಪುರದ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆದರೆ, ಅಲಾರವಾಡದಲ್ಲಿ ಸಮೀಕ್ಷೆಗೆ ನನ್ನನ್ನು ನಿಯೋಜಿಸಿದ್ದಾರೆ. ನಾನು ಅಂಗವಿಕಲನಿದ್ದು, ಬಹುಮಹಡಿ ಕಟ್ಟಡಗಳನ್ನು ಹತ್ತಿಹೋಗಲು ಕಷ್ಟವಾಗುತ್ತದೆ. ಬೆನ್ನುನೋವಿನ ಸಮಸ್ಯೆಯೂ ಇದೆ. ಹಾಗಾಗಿ ವಿನಾಯಿತಿ ಕೊಡಬೇಕು' ಎಂದು ಕೋರಿದರು.

# ಟೆಲಿಕಾಂ ಕಂಪೆನಿಗೆ ಭಾರತ ಮೂಲದ ಶ್ರೀನಿವಾಸ್ ಸಿಇಒ ಆಗಿ ನೇಮಕ



**ವಾಷಿಂಗ್ಟನ್:** ಒಂದು ಕಡೆ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ , H-1Bವೀಸಾ ನಿಯಮವನ್ನು ಬಿಗಿಗೊಳಿಸುತ್ತಿದ್ದಾರೆ. ಭಾರತೀಯರನ್ನೇ ಟಾರ್ಗೆಟ್ ಮಾಡಿದಂತೆ, ವೀಸಾ ಶುಲ್ಕವನ್ನು ಅನಾಮತ್ತಾಗಿ ಏರಿಸಿದ್ದಾರೆ. ಇನ್ನೊಂದು ಕಡೆ, ಅಮೆರಿಕಾದ ಕಂಪೆನಿಗಳು, ಭಾರತೀಯ ಮೂಲದವರನ್ನು ಟಾಪ್ ಹುದ್ದೆಗೆ ನೇಮಕ ಮಾಡಿವೆ. ಎರಡು ದೊಡ್ಡ ಅಮೆರಿಕಾದ ಕಂಪೆನಿಗಳು, ಸಿಇಒ ಹುದ್ದೆಗೆ ಭಾರತೀಯ ಮೂಲದವರನ್ನು ಆಯ್ಕೆ ಮಾಡುವ ಮೂಲಕ, ಅಮೆರಿಕಾ ಸರ್ಕಾರದ ನಿರ್ಧಾರಕ್ಕೆ ಪರೋಕ್ಷವಾಗಿ ಸೆಡ್ಡು ಹೊಡೆಯುವ ಕೆಲಸವನ್ನು ಮಾಡಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರತೀಯರನ್ನು ನೇಮಿಸುವ ಮೂಲಕ, ಅಮೆರಿಕಾದ ಸಂಸ್ಥೆಗಳು ಹೊಸ ಟ್ರೆಂಡ್ ಅನ್ನು ಹುಟ್ಟುಹಾಕುತ್ತಿದೆಯೇ ಎನ್ನುವ ಪ್ರಶ್ನೆ ಇದರಿಂದ ಎದುರಾಗಿದೆ. ಟಿ-ಮೊಬೈಲ್ ಸಂಸ್ಥೆಯು ತಮ್ಮ ಸಿಇಒ ಆಗಿ ಶ್ರೀನಿವಾಸ ಗೋಪಾಲನ್ (ಶ್ರೀನಿ) ಅವರನ್ನು ನೇಮಕ ಮಾಡಿದೆ. ಇವರು ನವೆಂಬರ್ ತಿಂಗಳಿನಿಂದ ಈ ಹುದ್ದೆಯನ್ನು ಅಲಂಕರಿಸಲಿದ್ದಾರೆ. 55 ವರ್ಷದ ಶ್ರೀನಿ, ಅಹಮದಾಬಾದ್ ಐಐಎಂ ವಿದ್ಯಾರ್ಥಿಯಾಗಿದ್ದವರು ಮತ್ತು ಅದೇ ಸಂಸ್ಥೆಯಲ್ಲಿ ಸಿಒಒ ಆಗಿ ಕೆಲಸ ಮಾಡಿಕೊಂಡಿದ್ದವರು. ಮೈಕ್ ಸೆವೆರ್ಟ್ ಅವರ ಜಾಗಕ್ಕೆ ಇವರ ನೇಮಕವಾಗಿದೆ. 2020ರಿಂದ ಸೆವೆರ್ಟ್ ಸಿಇಒ ಆಗಿದ್ದವರನ್ನು ಸಂಸ್ಥೆ ಉಪಾಧ್ಯಕ್ಷ ಸ್ಥಾನದ ಜವಾಬ್ದಾರಿಗೆ ಏರಿಸಿದೆ.

ಇನ್ನೊಂದು ಕಡೆ, ಮೊಲ್ಸನ್ ಕೂರ್ಸ್ ಎನ್ನುವ ಚಿಕಾಗೋ ಮೂಲದ ಸಂಸ್ಥೆಯು ರಾಹುಲ್ ಗೋಯಲ್ ಅವರನ್ನು ಸಿಇಒ ಮತ್ತು ಅಧ್ಯಕ್ಷರಾಗಿ ನೇಮಿಸಿದೆ. ಅಮೆರಿಕಾದಲ್ಲಿ ವಿದೇಶಿ ಉದ್ಯೋಗಿಗಳ ಬಗ್ಗೆ ಭಾರೀ ಚರ್ಚೆ ನಡೆಯುತ್ತಿರುವಾಗಲೇ, ಭಾರತೀಯ ಮೂಲದವರಿಗೆ ಭಡ್ತಿ ನೀಡಲಾಗಿದೆ. ಇವರು ಮುಂದಿನ ತಿಂಗಳು, ಹೊಸ ಜವಾಬ್ದಾರಿಯನ್ನು ಹೊರಲಿದ್ದಾರೆ.

49 ವರ್ಷದ ಗೋಯಲ್, ಗ್ಯಾವಿನ್ ಹ್ಯಾಟರ್ಸ್ಲಿ ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಗ್ಯಾವಿನ್ ಈ ವರ್ಷದ ಅಂತ್ಯದವರೆಗೆ ಸಲಹೆಗಾರರಾಗಿ ಉಳಿಯಲಿದ್ದಾರೆ. ಗೋಯಲ್ ಅವರು ಕಳೆದ 24 ವರ್ಷಗಳಿಂದ ಕಂಪನಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ಟಿ-ಮೊಬೈಲ್ ಸಂಸ್ಥೆ ನನ್ನ ಮೇಲೆ ವಿಶ್ವಾಸವಿಟ್ಟು ಈ ಗುರುತರ ಜವಾಬ್ದಾರಿಯನ್ನು ನನಗೆ ವಹಿಸಿದೆ. ಸಂಸ್ಥೆಯನ್ನು ಇನ್ನಷ್ಟು ಎತ್ತರಕ್ಕೇರಿಸುವ ಕನಸನ್ನು ಹೊತ್ತಿದ್ದೇನೆ. ಗ್ರಾಹಕರೇ ನಮಗೆ ದೇವರು, ಅವರು ಊಹಿಸದ ರೀತಿಯಲ್ಲಿ ವೈರ್ ಲೆಸ್ ಸೇವೆಯಲ್ಲಿ ನಮ್ಮ ಸಂಸ್ಥೆ ಸಾಧನೆ ಮಾಡಿದೆ ಎಂದು ಸಿಇಒ ಆಗಿ ನೇಮಕಗೊಳ್ಳುತ್ತಿರುವ ಶ್ರೀನಿ ಗೋಪಾಲನ್ ಹೇಳಿದ್ದಾರೆ.

ಹಿಂದೂಸ್ಥಾನ್ ಯೂನಿಲಿವರ್ ನಲ್ಲಿ ಟ್ರೈನಿಯಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಶ್ರೀನಿ, ಭಾರತಿ ಏರ್ಟೆಲ್, ವೊಡಾಫೋನ್, ಕ್ಯಾಪಿಟಲ್ ಒನ್, ಡ್ಯೂಡಜ್ ಟೆಲಿಕಾಂ ಮುಂತಾದ ಸಂಸ್ಥೆಗಳಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದರು. ಜರ್ಮನಿಯಲ್ಲಿ ಇವರ ಅವಧಿಯಲ್ಲಿ ದಾಖಲೆಯ ಮೊಬೈಲ್ ಮಾರುಕಟ್ಟೆ ಪಾಲನ್ನು ಇವರು ಪಡೆದರು.

ಇನ್ನೊಂದು ಕಡೆ, ಭಾರತ ಮೂಲದ ರಾಹುಲ್ ಗೋಯಲ್, ಮೈಸೂರಿನಲ್ಲಿ ಇಂಜಿನಿಯರ್ ಅಧ್ಯಯನವನ್ನು ಮಾಡಿದವರು. ಅಲ್ಲಿಂದ, ಡೆನ್ವರ್‌ನಲ್ಲಿ ವಾಣಿಜ್ಯ ಅಧ್ಯಯನ ಮಾಡಲು ಅಮೆರಿಕಾಗೆ ತೆರಳಿದರು. ಇವರು, ಅಮೆರಿಕಾ, ಯುನೈಟೆಡ್ ಕಿಂಗ್ಡಮ್ ಮತ್ತು ಭಾರತದಲ್ಲಿ ಕೂರ್ಸ್ ಮತ್ತು ಮೊಲ್ಸನ್ ಬ್ರ್ಯಾಂಡ್ ಗಳಲ್ಲಿ ಕೆಲಸ ಮಾಡಿದ್ದಾರೆ.

## ಬಿಹಾರ: ಸೀಮಾಂಚಲ್ ನ್ಯಾಯ ಯಾತ್ರೆ ಮೂಲಕ ಓವೈಸಿ ಚುನಾವಣೆ ಪ್ರಚಾರ



**ಹೈದರಾಬಾದ್:** ಮುಂಬರುವ ಬಿಹಾರ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಮುಂದಡಿ ಇಟ್ಟಿದ್ದಾರೆ. ಬಿಹಾರದಲ್ಲಿ ಸೆ. 24ರಿಂದ ಮೂರು ದಿನಗಳವರೆಗೆ ಚುನಾವಣೆ ಪ್ರಚಾರ ನಡೆಸಲಿದ್ದಾರೆ. ಸೆ. 24ರಂದು ಅಸಾದುದ್ದೀನ್ ಓವೈಸಿ ಅವರು ಕಿಶನ್‌ಗಂಜ್‌ನಿಂದ ಸೀಮಾಂಚಲ್ ನ್ಯಾಯ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಸೀಮಾಂಚಲ್ ಪ್ರದೇಶದಲ್ಲಿ ಮೂರು ದಿನ ಕಾಲ ನ್ಯಾಯ ಯಾತ್ರೆ ನಡೆಯಲಿದೆ ಎಂದು ಪಕ್ಷದ ಅಧಿಕೃತ ಮೂಲಗಳು ತಿಳಿಸಿವೆ. ಯಾತ್ರೆಯ ಸಮಯದಲ್ಲಿ ಓವೈಸಿ ಅವರು ಸೀಮಾಂಚಲ್‌ನ 25ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ರೋಡ್ ಶೋ ಮತ್ತು ಕಾರ್ನರ್ ಸಭೆಗಳನ್ನು ನಡೆಸಲಿದ್ದಾರೆ ಎಂದು ಎಐಎಂಐಎಂ ಮಂಗಳವಾರ ತಿಳಿಸಿದೆ. ಅಭಿವೃದ್ಧಿಗಾಗಿ ಜನರನ್ನು ಒಂದುಗೂಡಿಸಲು ಮತ್ತು ಸೀಮಾಂಚಲ್‌ಗೆ ನ್ಯಾಯ ಒದಗಿಸಲು ಯಾತ್ರೆ ನಡೆಸುತ್ತಿರುವುದಾಗಿ ಪಕ್ಷ ಹೇಳಿಕೊಂಡಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೀಮಾಂಚಲ್‌ನ 25 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಐಎಂಐಎಂ ಐದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಹಿಂದುಳಿದಿರುವ ಸೀಮಾಂಚಲ್‌ನ ಅಭಿವೃದ್ಧಿಗಾಗಿ ಸಂವಿಧಾನದ 371ನೇ ವಿಧಿಯಡಿ ಸೀಮಾಂಚಲ್ ಅಭಿವೃದ್ಧಿ ಮಂಡಳಿ ಸ್ಥಾಪಿಸುವಂತೆ ಓವೈಸಿ ಲೋಕಸಭೆಯಲ್ಲಿ ಖಾಸಗಿ ಮಸೂದೆ ಮಂಡಿಸಿದ್ದರು.

## ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಹಮಾಸ್‌ಗೆ ಕರೆ ನೀಡಿದ ಪ್ಯಾಲೆಸ್ಟೀನ್ ಅಧ್ಯಕ್ಷ ಎಜೆನ್ಸಿಸ್

**ಜೆರುಸಲೇಂ:** ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಹಮಾಸ್ ಬಂಡುಕೋರರಿಗೆ ಪ್ಯಾಲೆಸ್ಟೀನ್ ಪ್ರಾಧಿಕಾರದ ಅಧ್ಯಕ್ಷ ಮಹಮೂದ್ ಅಬ್ಬಾಸ್ ಕರೆ ನೀಡಿದ್ದಾರೆ ಎಂದು ವರದಿಯಾಗಿದೆ. ಗಾಜಾ ಆಡಳಿತದಲ್ಲಿ ಹಮಾಸ್ ಬಂಡುಕೋರರು ಯಾವುದೇ ಪಾತ್ರವನ್ನು ಹೊಂದಿರುವುದಿಲ್ಲ, ಹಾಗಾಗಿ ಹಮಾಸ್, ಇತರ ಬಣಗಳು ತಮ್ಮ ಬಳಿ ಇರುವ ಶಸ್ತ್ರಾಸ್ತ್ರಗಳನ್ನು ಕೂಡಲೇ ಹಿಂದಿರುಗಿಸಬೇಕು ಎಂದು ಅಬ್ಬಾಸ್ ಹೇಳಿದ್ದಾರೆ. ಅಮೆರಿಕದ ತೀವ್ರ ವಿರೋಧದ ಮಧ್ಯೆಯೂ ಬ್ರಿಟನ್ ಸರ್ಕಾರವು ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಮುಂದಾಗಿದೆ.

ಗಾಜಾದಲ್ಲಿ ನಡೆಸುತ್ತಿರುವ ಯುದ್ಧ ಸಂಬಂಧ ಇಸ್ರೇಲ್‌ಗೆ ಬ್ರಿಟನ್ ಸರ್ಕಾರವು ಕೆಲವು ನಿಬಂಧನೆಗಳನ್ನು ಹಾಕಿತ್ತು. ಇದನ್ನು ಪಾಲಿಸಿಲ್ಲ ಎನ್ನುವ ಕಾರಣಕ್ಕೆ ಈ ನಿರ್ಧಾರಕ್ಕೆ ಬ್ರಿಟನ್ ಮುಂದಾಗಿದೆ. ಸೋಮವಾರದಿಂದ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆ ಆರಂಭವಾಗಿದೆ. ಗಾಜಾದಲ್ಲಿ ನಡೆಯುತ್ತಿರುವ ಯುದ್ಧ, ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

## ಕ್ರಿಶ್ಚಿಯನ್ ರಾಷ್ಟ್ರದಲ್ಲಿ ನಕಲಿ ಹಿಂದೂ ದೇವರಿಗೆ ಜಾಗ ಬೇಡ

### ಹನುಮಂತನ ಪ್ರತಿಮೆ ಸಹಿಸದ ರಿಪಬ್ಲಿಕನ್ ನಾಯಕ, ಭುಗಿಲೆದ್ದ ಆಕ್ರೋಶ

**ವಾಷಿಂಗ್ಟನ್:** ಅಮೆರಿಕದ ನಗರದಲ್ಲಿ 'ಸ್ಟ್ಯಾಚ್ಯೂ ಆಫ್ ಯೂನಿಯನ್' ಎಂದು ಕರೆಯಲ್ಪಡುವ 90 ಅಡಿ ಎತ್ತರದ ಹನುಮಾನ್ ಪ್ರತಿಮೆಯ ಅಗತ್ಯತೆಯನ್ನು, ಟೆಕ್ಸಾಸ್‌ನ ರಿಪಬ್ಲಿಕನ್ ನಾಯಕ ಅಲೆಕ್ಸಾಂಡರ್ ಡಂಕನ್ ಪ್ರಶ್ನಿಸಿದ್ದಾರೆ. ಈ ಪ್ರತಿಮೆಯ ಕುರಿತಾದ ಅವರ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅಮೆರಿಕ ಕ್ರಿಶ್ಚಿಯನ್ ರಾಷ್ಟ್ರವಾಗಿದ್ದು, ಇಲ್ಲಿ ನಕಲಿ ಹಿಂದೂ ದೇವರ ಪ್ರತಿಮೆ ಇರುವುದು ಸರಿಯಲ್ಲ ಎಂದು ಅಲೆಕ್ಸಾಂಡರ್ ಡಂಕನ್ ಹಿಂದೂ ದೇವರ ಪ್ರತಿಮೆ ನಿರ್ಮಾಣಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಅಲೆಕ್ಸಾಂಡರ್ ಡಂಕನ್, ಟೆಕ್ಸಾಸ್‌ನಲ್ಲಿ ಸುಳ್ಳು ಹಿಂದೂ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ನಾವೇಕೆ ಅನುಮತಿ ನೀಡಿದ್ದೇವೆ ಎಂದು ಪ್ರಶ್ನಿಸಿದ್ದಾರೆ.

ಟೆಕ್ಸಾಸ್‌ನ ಶುಗರ್ ಲ್ಯಾಂಡ್ ಪಟ್ಟಣದ ಶ್ರೀ ಅಷ್ಟಲಕ್ಷ್ಮಿ ದೇವಸ್ಥಾನದಲ್ಲಿ ಭಗವಾನ್ ಹನುಮಾನ್ ಪ್ರತಿಮೆ ಇದ್ದು, ಇದನ್ನು ಸ್ಟ್ಯಾಚ್ಯೂ ಆಫ್ ಯೂನಿಯನ್ ಎಂದೂ ಕರೆಯುತ್ತಾರೆ. ಈ ಪ್ರತಿಮೆಯ ಕುರಿತು ರಿಪಬ್ಲಿಕನ್ ನಾಯಕನ ವಿವಾದಾತ್ಮಕ ಹೇಳಿಕೆ ಇದೀಗ ಅಮೆರಿಕದಲ್ಲಿರುವ ಹಿಂದೂಗಳನ್ನು ಕೆರಳಿಸಿದೆ. ಈ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹಿಂದೂ ಅಮೆರಿಕನ್ ಫೌಂಡೇಶನ್, ಅಲೆಕ್ಸಾಂಡರ್ ಡಂಕನ್ ಅವರ ಹೇಳಿಕೆಯನ್ನು ಹಿಂದೂ ವಿರೋಧಿ ಮತ್ತು ಪ್ರಚೋದನಕಾರಿ ಎಂದು ಕಿಡಿಕಾರಿದೆ. ಅಲ್ಲದೇ ಈ ಹೇಳಿಕೆಯಿಂದ ಸೃಷ್ಟಿಯಾಗಿರುವ ವಿವಾದವನ್ನು ಬೆಗಹರಿಸುವಂತೆ ರಿಪಬ್ಲಿಕನ್ ಪಕ್ಷವನ್ನು ಒತ್ತಾಯಿಸಿದೆ.

ನಿಮ್ಮ ಸ್ವಂತ ಮಾರ್ಗಸೂಚಿಗಳನ್ನು ಬಹಿರಂಗವಾಗಿ ಉಲ್ಲಂಘಿಸಿರುವ ನಿಮ್ಮ ಪಕ್ಷದ ಸೆನೆಟ್ ಅಭ್ಯರ್ಥಿಯನ್ನು ನೀವು ತರಾಟೆಗೆ ತೆಗೆದುಕೊಳ್ಳುವೀರಾ? ಎಂದು ರಿಪಬ್ಲಿಕ್ ಪಕ್ಷವನ್ನು ಪ್ರಶ್ನಿಸಿರುವ ಹಿಂದೂ ಅಮೆರಿಕನ್ ಫೌಂಡೇಶನ್,



- ಟೆಕ್ಸಾಸ್‌ನಲ್ಲಿರುವ ಹನುಮಂತನ ಪ್ರತಿಮೆಗೆ ರಿಪಬ್ಲಿಕನ್ ನಾಯಕನ ಆಕ್ಷೇಪ.
- ಕ್ರಿಶ್ಚಿಯನ್ ರಾಷ್ಟ್ರದಲ್ಲಿ ನಕಲಿ ಹಿಂದೂ ದೇವರ ಪ್ರತಿಮೆ ಏಕೆ ಎಂದು ಪ್ರಶ್ನಿಸಿದ ಅಲೆಕ್ಸಾಂಡರ್ ಡಂಕನ್.
- ಅಲೆಕ್ಸಾಂಡರ್ ಡಂಕನ್ ವಿವಾದಾತ್ಮಕ ಹೇಳಿಕೆಗೆ ಹಿಂದೂ ಅಮೆರಿಕನ್ ಫೌಂಡೇಶನ್ ಆಕ್ಷೇಪ.

ಈ ಅಸಹ್ಯಕರ ಹಿಂದೂ ವಿರೋಧಿ ಹೇಳಿಕೆಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಗುಡುಗಿದೆ. ಇದೇ ವೇಳೆ ಹುನುಮಾನ್ ಪ್ರತಿಮೆ ಕುರಿತ ಅಲೆಕ್ಸಾಂಡರ್ ಡಂಕನ್ ಅವರ ವಿವಾದಾತ್ಮಕ ಹೇಳಿಕೆಯನ್ನು, ಕೆಲವು ಅಮೆರಿಕನ್ನರೂ ಕೂಡ ಖಂಡಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಜೋರ್ಡಾನ್ ಕ್ರೌಡರ್ ಎಂಬ ಎಕ್ಸ್ ಬಳಕೆದಾರ, ನೀವು ಹಿಂದೂ ಅಲ್ಲದ ಕಾರಣಕ್ಕೆ ಹನುಮಾನ್ ಪ್ರತಿಮೆಯನ್ನು ನಕಲಿ ಹಿಂದೂ ದೇವರು ಎಂದು ಕರೆಯುವುದು ಸರಿಯಲ್ಲ ಎಂದು ಹರಿಹಾಯ್ದಿದ್ದಾರೆ.

ಮುಂದುವರೆದು, ಯೇಸು ಭೂಮಿಗೆ ಬರುವ 2,000 ವರ್ಷಗಳ ಹಿಂದೆಯೇ ವೇದಗಳನ್ನು ಬರೆಯಲಾಗಿದೆ. ಕ್ರಿಶ್ಚಿಯನ್ ಧರ್ಮದ ಮೇಲೆ ವೇದಗಳ ಸ್ಪಷ್ಟವಾದ ಪ್ರಭಾವವಿದೆ.

**ಹೇಳಿಕೆಗೆ ಭಾರೀ ವಿರೋಧ**

**ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಬೀಗುವ ಅಮೆರಿಕ, ನಿಧಾನವಾಗಿ ಜನಾಂಗೀಯ ಮತ್ತು ಧಾರ್ಮಿಕ ಅಸಹಿಷ್ಣು ರಾಷ್ಟ್ರವಾಗಿ ಪರಿವರ್ತನೆಯಾಗುತ್ತಿದೆ. ಇದಕ್ಕೆ ಸಾಕ್ಷಿಯಾಗಿ ರಿಪಬ್ಲಿಕನ್ ಪಕ್ಷದ ನಾಯಕ ಅಲೆಕ್ಸಾಂಡರ್ ಡಂಕನ್ ಅವರು, ಟೆಕ್ಸಾಸ್ ಬಳಿ ಇರುವ 'ಸ್ಟ್ಯಾಚ್ಯೂ ಆಫ್ ಯೂನಿಯನ್' ಎಂದು ಕರೆಯಲ್ಪಡುವ ಭಗವಾನ್ ಹನುಮಂತನ ಪ್ರತಿಮೆಯ ಔಚಿತ್ಯವನ್ನು ಪ್ರಶ್ನಿಸಿದ್ದಾರೆ. ಕ್ರಿಶ್ಚಿಯನ್ ರಾಷ್ಟ್ರವಾದ ಅಮೆರಿಕದಲ್ಲಿ ನಕಲಿ ಹಿಂದೂ ದೇವರ ಪ್ರತಿಮೆ ಇರಕೂಡದು ಎಂಬ ಅವರ ಹೇಳಿಕೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ.**

ಆದ್ದರಿಂದ ನಿಮ್ಮ ಧರ್ಮಕ್ಕಿಂತ ಹಿಂದಿನ ಮತ್ತು ಪ್ರಭಾವ ಬೀರುವ ಧರ್ಮವನ್ನು ಗೌರವಿಸುವುದು ಮತ್ತು ಸಂಶೋಧಿಸುವುದು ಬುದ್ಧಿವಂತರ ಲಕ್ಷಣವಾಗಿದೆ ಎಂದು ಅಲೆಕ್ಸಾಂಡರ್ ಡಂಕನ್ ಅವರನ್ನು ಜೋರ್ಡಾನ್ ಕ್ರೌಡರ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಭಾರತ-ಅಮೆರಿಕ ಸಂಬಂಧ ಸುಧಾರಣೆ ಪ್ರಯತ್ನಗಳಿಗೆ, ಅಲೆಕ್ಸಾಂಡರ್ ಡಂಕನ್ ಅವರ ಹೇಳಿಕೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಇಂತಹ ಧಾರ್ಮಿಕ ಅಸಹಿಷ್ಣು ಹೇಳಿಕೆಗಳು ಅಮೆರಿಕ ಬದಲಾಗುತ್ತಿರುವುದಕ್ಕೆ ಸಾಕ್ಷಿ ಒದಗಿಸಿದೆ.

**ಸ್ಟ್ಯಾಚ್ಯೂ ಆಫ್ ಯೂನಿಯನ್':** 2024ರಲ್ಲಿ ಅನಾವರಣಗೊಂಡ ಸ್ಟ್ಯಾಚ್ಯೂ ಆಫ್ ಯೂನಿಯನ್ ಪ್ರತಿಮೆಯು, ಅಮೆರಿಕದ ಅತ್ಯಂತ ಎತ್ತರದ ಹಿಂದೂ ಸ್ಮಾರಕಗಳಲ್ಲಿ ಒಂದಾಗಿದೆ. ಇದು ಅಮೆರಿಕದ ಮೂರನೇ ಅತಿ ಎತ್ತರದ ಪ್ರತಿಮೆ ಎಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡಿದೆ.

## ಭಾರತವೂ ಅಮೆರಿಕಕ್ಕೆ ನಿರ್ಣಾಯಕ : ಮಾರ್ಕೊ ರೂಬಿಯೋ


**ನ್ಯೂಯಾರ್ಕ್:** ಭಾರತವು ಅಮೆರಿಕಕ್ಕೆ ನಿರ್ಣಾಯಕ ಪ್ರಾಮುಖ್ಯತೆಯ ಸಂಬಂಧವಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರಿಗೆ ತಿಳಿಸಿದ್ದಾರೆ.ಇಬ್ಬರು ನಾಯಕರು ಭೇಟಿಯಾಗಿ ವ್ಯಾಪಾರ, ರಕ್ಷಣೆ ಮತ್ತು ಇಂಧನ ಸೇರಿದಂತೆ ದ್ವಿಪಕ್ಷೀಯ ವಿಷಯಗಳಲ್ಲಿ ನವದೆಹಲಿಯ ನಿರಂತರ ಸಂಪರ್ಕಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಉನ್ನತ ಮಟ್ಟದ ವಾರದ 80ನೇ ಅಧಿವೇಶನದ ಸಂದರ್ಭದಲ್ಲಿ ನಿನ್ನೆ ಬೆಳಿಗ್ಗೆ ಅವರು ಜೈಶಂಕರ್ ಅವರನ್ನು ಇಲ್ಲಿ ಭೇಟಿಯಾದರು. ಭಾರತವು ಅಮೆರಿಕಕ್ಕೆ ನಿರ್ಣಾಯಕ ಪ್ರಾಮುಖ್ಯತೆಯ ನಂಬಂಧವಾಗಿದೆ ಎಂದು ರುಬಿಯೊ ಪುನರುಚ್ಚರಿಸಿದರು ಮತ್ತು ವ್ಯಾಪಾರ, ರಕ್ಷಣೆ, ಇಂಧನ, ಔಷಧಗಳು, ನಿರ್ಣಾಯಕ ಖನಿಜಗಳು ಮತ್ತು ದ್ವಿಪಕ್ಷೀಯ ಸಂಬಂಧಕ್ಕೆ ಸಂಬಂಧಿಸಿದ ಇತರ ವಸ್ತುಗಳು ಸೇರಿದಂತೆ ಹಲವಾರು ವಿಷಯಗಳಲ್ಲಿ ಭಾರತ ಸರ್ಕಾರದ ನಿರಂತರ ನಿಶ್ಚಿತಾರ್ಥಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು ಎಂದು ವಿದೇಶಾಂಗ ಇಲಾಖೆ ಒದಗಿಸಿದ ಸಭೆಯ ಓದುಗ ಹೇಳಿದರು.

ಕ್ವಾಡ್ ಮೂಲಕವೂ ಸೇರಿದಂತೆ ಮುಕ್ತ ಮತ್ತು ಮುಕ್ತ ಇಂಡೋ-ಪೆಸಿಫಿಕ್ ಪ್ರದೇಶವನ್ನು ಉತ್ತೇಜಿಸಲು ಅಮೆರಿಕ ಮತ್ತು ಭಾರತ ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತವೆ ಎಂದು ರುಬಿಯೊ ಮತ್ತು ಜೈಶಂಕರ್ ಒಪ್ಪಿಕೊಂಡರು ಎಂದು ಹೇಳಿಕೆಯಲ್ಲಿ ಸೇರಿಸಲಾಗಿದೆ. ಎಕ್ಸ್‌ನ ಪೋಸ್ಟ್‌ನಲ್ಲಿ, ಜೈಶಂಕರ್ ನ್ಯೂಯಾರ್ಕ್‌ನಲ್ಲಿ ರುಬಿಯೊ ಅವರನ್ನು ಭೇಟಿಯಾಗುವುದು ಒಳ್ಳೆಯದು ಎಂದು ಹೇಳಿದರು. ನಮ್ಮ ಸಂಭಾಷಣೆಯು ಪ್ರಸ್ತುತ ಕಾಳಜಿಯ ಹಲವಾರು ದ್ವಿಪಕ್ಷೀಯ, ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಒಳಗೊಂಡಿದೆ. ಆದ್ಯತೆಯ ಕ್ಷೇತ್ರಗಳಲ್ಲಿ ಪ್ರಗತಿಗೆ ನಿರಂತರ ನಿಶ್ಚಿತಾರ್ಥದ ಪ್ರಾಮುಖ್ಯತೆಯ ಬಗ್ಗೆ ಒಪ್ಪಿಕೊಂಡರು. ನಾವು ಸಂಪರ್ಕದಲ್ಲಿರುತ್ತೇವೆ ಎಂದು ಅವರು ಹೇಳಿದರು. ಭಾರತ, ಯುನೈಟೆಡ್ ಸ್ಟೇಟ್ಸ್‌ಗೆ ಸಮೃದ್ಧಿಯನ್ನು

**ಶುಲ್ಕವನ್ನು ವಿಧಿಸುವ ಘೋಷಣೆಗೆ ಸಹಿ**

**ಟ್ರಂಪ್ ಆಡಳಿತವು ರಷ್ಯಾದ ತೈಲ ಖರೀದಿಗೆ ದಂಡವಾಗಿ ನವದೆಹಲಿಯ ಮೇಲೆ ಹೆಚ್ಚುವರಿಯಾಗಿ 25 ಪ್ರತಿಶತ ಸುಂಕವನ್ನು ವಿಧಿಸಿತು. ಇದು ಅಮೆರಿಕ ಭಾರತದ ಮೇಲೆ ವಿಧಿಸಿದ ಒಟ್ಟು ಸುಂಕವನ್ನು ಶೇಕಡಾ 50 ಕ್ಕೆ ತಂದಿತು. ಇದು ವಿಶ್ವದಲ್ಲೇ ಅತಿ ಹೆಚ್ಚು.ಸಭೆಗೆ ಕೆಲವೇ ದಿನಗಳ ಮೊದಲು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸ 1 ವೀಸಾಗಳ ಮೇಲೆ 100,000 ಶುಲ್ಕವನ್ನು ವಿಧಿಸುವ ಘೋಷಣೆಗೆ ಸಹಿ ಹಾಕಿದರು.**

ಸೃಷ್ಟಿಸಲು ವ್ಯಾಪಾರ. ಇಂಧನ, ಔಷಧಗಳು, ನಿರ್ಣಾಯಕ ಖನಿಜಗಳು, ಇನ್ನೂ ಹೆಚ್ಚಿನವುಗಳನ್ನು ಒಳಗೊಂಡಂತೆ ನಮ್ಮ ದ್ವಿಪಕ್ಷೀಯ ಸಂಬಂಧದ ಪ್ರಮುಖ ಕ್ಷೇತ್ರಗಳ ಬಗ್ಗೆ ಜೈಶಂಕರ್ ಅವರೊಂದಿಗೆ ಚರ್ಚಿಸಿರುವುದಾಗಿ ರೂಬಿಯೊ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಸುಮಾರು ಒಂದು ಗಂಟೆ ಕಾಲ ನಡೆದ ಈ ಸಭೆಯು, ವ್ಯಾಪಾರ, ಸುಂಕಗಳು ಮತ್ತು ನವದೆಹಲಿಯ ರಷ್ಯಾದ ಇಂಧನ ಖರೀದಿಗಳ ಕುರಿತು ಕಳೆದ ಕೆಲವು ತಿಂಗಳುಗಳಿಂದ ಉಭಯ ದೇಶಗಳ ನಡುವಿನ ಉದ್ವಿಗ್ನತೆಯ ನಡುವೆ ರೂಬಿಯೊ ಮತ್ತು ಜೈಶಂಕರ್ ನಡುವಿನ ಮೊದಲ ವೈಯಕ್ತಿಕ ಮಾತುಕತೆಯಾಗಿತ್ತು.

ಈ ಘೋಷಣೆಯು 1 ಕೌಶಲ್ಯಪೂರ್ಣ-ಕೆಲಸಗಾರ ಕಾರ್ಯಕ್ರಮದ ಅತಿದೊಡ್ಡ ಫಲಾನುಭವಿಗಳಾದ ಐಟಿ ಮತ್ತು ವೈದ್ಯಕೀಯ ಕ್ಷೇತ್ರಗಳವರು ಸೇರಿದಂತೆ ಭಾರತೀಯ ವೃತ್ತಿಪರರಲ್ಲಿ ವ್ಯಾಪಕ ಕಳವಳ ಮತ್ತು ಭೀತಿಯನ್ನು ಉಂಟು ಮಾಡಿತು. ರೂಬಿಯೊ ಮತ್ತು ಜೈಶಂಕರ್ ಕೊನೆಯದಾಗಿ ಜುಲೈನಲ್ಲಿ ವಾಷಿಂಗ್ಟನ್ ಡಿಸಿಯಲ್ಲಿ ಕ್ವಾಡ್ ವಿದೇಶಾಂಗ ಮಂತ್ರಿಗಳ ಸಭೆಯ ಸಂದರ್ಭದಲ್ಲಿ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಾಯಿತು.

## ಅಯೋಧ್ಯೆಯಲ್ಲಿ ಮಸೀದಿ ಯೋಜನೆ ತಿರಸ್ಕಾರ




**ಅಯೋಧ್ಯೆ:** ಅಯೋಧ್ಯೆಯಲ್ಲಿ ರಾಮಮಂದಿರ ಭೂಮಿಗೆ ಬದಲಾಗಿ ಪ್ರಸ್ತಾಪಿಸಲಾದ ಮಸೀದಿಯ ವಿನ್ಯಾಸ ಯೋಜನೆಯನ್ನು ಅಯೋಧ್ಯಾ ಅಭಿವೃದ್ಧಿ ಪ್ರಾಧಿಕಾರ ತಿರಸ್ಕರಿಸಿದೆ. ವಿವಿಧ ಸರ್ಕಾರಿ ಇಲಾಖೆಗಳಿಂದ ಕಡ್ಡಾಯ ನಿರಾಕ್ಷೇಪಣಾ ಪ್ರಮಾಣಪತ್ರಗಳ ಕೊರತೆಯಿಂದಾಗಿ ಮಸೀದಿಯ ವಿನ್ಯಾಸ ಯೋಜನೆಯನ್ನು ಅನುಮೋದಿಸಲಾಗಿಲ್ಲ ಎಂದು ಮಾಹಿತಿ ಹಕ್ಕು ಪ್ರತಿಕ್ರಿಯೆಯಿಂದ ತಿಳಿದುಬಂದಿದೆ.

ನ. 9, 2019ರಂದು ಸುಪ್ರೀಂಕೋರ್ಟ್‌ನ ಹೆಗ್ಗುರುತು ಅಯೋಧ್ಯಾ ತೀರ್ಪಿನ ಪ್ರಕಾರ, ಉತ್ತರಪ್ರದೇಶ ಸರ್ಕಾರವು ಮಸೀದಿ ನಿರ್ಮಾಣ ಮತ್ತು ಇತರ ಸೌಲಭ್ಯಗಳಿಗಾಗಿ ಅಯೋಧ್ಯಾ ಸುನ್ನಿ ಕೇಂದ್ರ ವಕ್ಫ್ ಮಂಡಳಿಗೆ ಐದು ಎಕರೆ ಭೂಮಿಯನ್ನು ಮಂಜೂರು ಮಾಡಿತ್ತು. 2020ರ ಆಗಸ್ಟ್ 3ರಂದು ಆಗಿನ ಅಯೋಧ್ಯಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಜ್‌ಕುಮಾರ್ ಝಾ ಅವರು ಅಯೋಧ್ಯಾ ಬಳಿಯ ಧನ್ನಿಪುರ ಗ್ರಾಮದಲ್ಲಿ ಐದು ಎಕರೆ ಭೂಮಿಯನ್ನು ಸುನ್ನಿ ಕೇಂದ್ರ ವಕ್ಫ್ ಮಂಡಳಿಗೆ ವರ್ಗಾಯಿಸಿದ್ದರು.

ಮಸೀದಿ ಟ್ರಸ್ಟ್ 2021ರ ಜೂನ್ 23ರಂದು ಈ ಭೂಮಿಯಲ್ಲಿ ನಿರ್ಮಾಣಕ್ಕಾಗಿ ವಿನ್ಯಾಸ ಯೋಜನೆಯನ್ನು ಅನುಮೋದಿಸಲು ಅರ್ಜಿ ಸಲ್ಲಿಸಿತ್ತು. ಆದಾಗ್ಯೂ ಅಂದಿನಿಂದ ಯೋಜನಾ ಅನುಮೋದನೆ ಪ್ರಕ್ರಿಯೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿರಲಿಲ್ಲ. ವಿವಿಧ ಸರ್ಕಾರಿ ಇಲಾಖೆಗಳಿಂದ ಅಗತ್ಯ ಎನ್‌ಒಸಿಗಳ ಕೊರತೆಯಿಂದಾಗಿ ಮಸೀದಿಯ ವಿನ್ಯಾಸ ಯೋಜನೆಯನ್ನು ಅನುಮೋದಿಸಲಾಗಿಲ್ಲ ಎಂದು ಆರ್‌ಟಿಐ ಕಾರ್ಯಕರ್ತರನ್ನು ಉಲ್ಲೇಖಿಸಿ ಪತ್ರಿಕೆಯೊಂದು ವರದಿ ಮಾಡಿದೆ. ಈ ಪ್ರಮಾಣಪತ್ರಗಳಿಲ್ಲದೆ ಪ್ರಾಧಿಕಾರವು ಯೋಜನೆಯನ್ನು ಮುಂದುವರಿಸಲು ನಿರಾಕರಿಸಿತ್ತು.

**ಪರಿಸ್ಥಿತಿ ಮತ್ತಷ್ಟು ಜಟಿಲ**

ಸುಪ್ರೀಂಕೋರ್ಟ್‌ನ ಅದೇ ತೀರ್ಪಿನಡಿ ಅನುಮೋದಿಸಲಾದ ಅಯೋಧ್ಯೆಯಲ್ಲಿ ರಾಮಮಂದಿರದ ನಿರ್ಮಾಣವು ವೇಗವಾಗಿ ಪ್ರಗತಿಯಲ್ಲಿರುವ ಸಮಯದಲ್ಲೇ ಇದು ಬಹಿರಂಗಗೊಂಡಿದೆ. ಸುನ್ನಿ ಕೇಂದ್ರ ವಕ್ಫ್ ಮಂಡಳಿ ಮತ್ತು ಮಸೀದಿ ಟ್ರಸ್ಟ್ ಈ ವಿಷಯದ ಬಗ್ಗೆ ಇನ್ನೂ ಯಾವುದೇ ಅಧಿಕೃತ ಹೇಳಿಕೆಯನ್ನು ನೀಡಿಲ್ಲ. ಈ ವಿಷಯದಲ್ಲಿ ಮುಂದಿನ ಪ್ರಕ್ರಿಯೆ ಅಥವಾ ಸಮಯದ ಬಗ್ಗೆ ಅಯೋಧ್ಯಾ ಅಭಿವೃದ್ಧಿ ಪ್ರಾಧಿಕಾರವು ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ.

ರಾಮಮಂದಿರ ನಿರ್ಮಾಣ ಕಾರ್ಯವು ವೇಗವಾಗಿ ಪ್ರಗತಿಯಲ್ಲಿದೆ ಮತ್ತು ಮಸೀದಿ ಯೋಜನೆಯು ಇನ್ನೂ ಆರಂಭಿಕ ಹಂತಗಳಲ್ಲಿಯೇ ಸಿಲುಕಿಕೊಂಡಿದೆ ಎಂದು ಗಮನಿಸಿದಾಗ ಪರಿಸ್ಥಿತಿ ಮತ್ತಷ್ಟು ಜಟಿಲವಾಗಿದೆ. ಈ ಬಹಿರಂಗಪಡಿಸುವಿಕೆಯ ನಂತರ, ಸುನ್ನಿ ಕೇಂದ್ರ ವಕ್ಫ್ ಮಂಡಳಿ, ಸಂಬಂಧಪಟ್ಟ ಪಕ್ಷಗಳು ಯೋಜನೆಯನ್ನು ತ್ವರಿತಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತವೆ ಎಂದು ನಿರೀಕ್ಷಿಸಲಾಗಿದೆ.

### ಕೋಲ್ಕತ್ತಾ ಜನರ ಹಬ್ಬದ ಸಂಭ್ರಮ ಕಸಿದ ಮಳೆ; ವಿದ್ಯುತ್ ತಂತಿ ತಗುಲಿ ಏಳು ಮಂದಿ ಸಾವು

# ದುರ್ಗಾ ಮಾತೆ ಪೂಜೆ ಕೋಲ್ಕತ್ತಾದಲ್ಲಿ ವರುಣನ ಅಡ್ಡಿ

**ಕೋಲ್ಕತ್ತಾ:** ವರುಣನ ಅಬ್ಬರದಿಂದ ಅತಿದೊಡ್ಡ ಹಬ್ಬವಾದ ದುರ್ಗಾಪೂಜೆ ಸಂಭ್ರಮದಲ್ಲಿದ್ದ ಕೋಲ್ಕತ್ತಾ ಜನರಿಗೆ ಭಾರಿ ಆಘಾತವನ್ನುಂಟು ಮಾಡಿದೆ. ಸೆ.22ರ ರಾತ್ರಿಯಿಂದ ಸುರಿಯುತ್ತಿರುವ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಪ್ರವಾಹದ ಪರಿಣಾಮದಿಂದಾಗಿ ಇಲ್ಲಿಯವರೆಗೂ ಐವರು ಮೃತಪಟ್ಟಿದ್ದಾರೆ ಎನ್ನಲಾಗಿದೆ. ಭಾರತ ಹವಾಮಾನ ಇಲಾಖೆ ಪ್ರಕಾರ, ಮೂರು ಗಂಟೆಗಳಲ್ಲಿ ಕೋಲ್ಕತ್ತಾದ ನಗರ ಪ್ರದೇಶಗಳಲ್ಲಿ 185 ಮಿ.ಮೀ. ಮಳೆಯಾಗಿದೆ. ಗರಿಯಾ ಕಾಮದಹರಿಯಂತಹ ಕೆಲವು ಪ್ರದೇಶದಲ್ಲಿ 332 ಮಿ.ಮೀ ಮಳೆಯಾದರೆ, ಜೋಧ್‌ಪುರ ಪಾರ್ಕ್ 285 ಮಿ.ಮೀ ಹಾಗೂ ಕಾಳಿಘಾಟ್ 280.2 ಮಿಮೀ, ಟಾಪ್ಸಿಯಾದಲ್ಲಿ 275 ಮಿಮೀ ಮತ್ತು ಬ್ಯಾಲಿಗಂಗೆಯಲ್ಲಿ 264 ಮಿಮೀ ಎಂದುಮಳೆಯಾಗಿದೆ ಎಂದು ಐಎಂಡಿ ಹೇಳಿದೆ.

ವರುಣಾರ್ಭಟಕ್ಕೆ ಮನೆಗಳು, ರಸ್ತೆಗಳು, ದಿನಸಿ ಸಾಮಾಗ್ರಿ, ಕಾರು-ಬೈಕ್ ಎಲ್ಲವೂ ನೀರುಪಾಲಾಗಿವೆ. ಇದಲ್ಲದೆ ಸಾರ್ವಜನಿಕ ಸೇವೆಗಳಾದ ಮೆಟ್ರೋ, ಬಸ್, ರೈಲು ಸೇವೆಯಲ್ಲಿ ವ್ಯತ್ಯಯ ಕಂಡುಬಂದಿದೆ. ಏಳು ಜನರು ವಿದ್ಯುತ್ ತಂತಿ ತಗುಲಿ ಮೃತಪಟ್ಟರು. ಮೃತರಲ್ಲಿ ಮೂವರು ಬೆನಿಯಾಪುಕೂರಿನ ಫಿರೋಜ್ ಅಲಿ ಖಾನ್, ನೇತಾಜಿ ನಗರದ ಪ್ರಣತೋಷ್ ಕುಂದು ಮತ್ತು ಎಕ್ಬಾಲ್‌ಪುರದ ಮುಮ್ತಾಜ್ ಬೀಬಿ ಎಂದು ಗುರುತಿಸಲಾಗಿದೆ. ಘರಿಯತ್‌ನ ಒಬ್ಬ ವ್ಯಕ್ತಿಯು ಎಲ್ಲಿಯವರು ಎಂಬುದು ಇನ್ನು ಪತ್ತೆ ಹಚ್ಚಿಲ್ಲ.

**ಜನರಿಗೆ ಭಾರಿ ಆಘಾತ**

**ತಾತ್ಕಾಲಿಕವಾಗಿ ರೈಲು, ವಿಮಾನ ಹಾರಾಟ ಸ್ಥಗಿತ:** ಮಳೆಯ ಹಿನ್ನೆಲೆ,




**ರೈಲು ಓಡಾಟ ಸೇವೆ ಮತ್ತು ವಿಮಾನ ಹಾರಾಟದಲ್ಲಿ ವ್ಯತ್ಯಯ**

**ಕೋಲ್ಕತ್ತಾದಲ್ಲಿ ಬಹುದೊಡ್ಡ ಹಬ್ಬ ದುರ್ಗಾ ಪೂಜೆ ಸಂಭ್ರಮದಲ್ಲಿದ್ದ ಬೆಂಗಾಲಿಗಳಿಗೆ ಮಳೆಯು ಅಘಾತವನ್ನುಂಟುಮಾಡಿದೆ. ದಾಖಲೆ ಮಟ್ಟದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆ, ಮನೆ, ರಸ್ತೆಗಳು ಜಲಾವೃತಗೊಂಡು ಜನರ ಜೀವನ ಅಸ್ತವ್ಯಸ್ತವಾಗಿದೆ. ವಿದ್ಯುತ್ ತಂತಿ ತಗುಲಿ ಏಳು ಜನರು ಸ್ಥಳದಲ್ಲೇ ಸಾವನ್ನಪ್ಪಿರುವ ಬಗ್ಗೆ ಖಾಸಗಿ ಮಾಧ್ಯಮಗಳು ವರದಿ ಮಾಡಿವೆ. ರೈಲು ಓಡಾಟ ಸೇವೆ ಮತ್ತು ವಿಮಾನ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ.**

**ಹೇಗಿರುತ್ತೆ ದುರ್ಗಾ ಪೂಜೆ?**

**ಕೋಲ್ಕತ್ತಾದ ದುರ್ಗಾ ಪೂಜೆಗೆ ಯುನಸ್ಕೋ ಅಮೂರ್ತ ಸಾಂಸ್ಕೃತಿಕ ಪರಂಪರೆ ಎಂದು ಕರೆದಿದೆ. ಇದು ಬೆಂಗಾಲಿಗಳ ಅತಿ ದೊಡ್ಡ ಸಂಭ್ರಮದ ಹಬ್ಬ ಗಲ್ಲಿ ಗಲ್ಲಿಗೂ ಗಣೇಶನ ವಿಗ್ರಹವಿಟ್ಟಂತೆ ಪೆಂಡಾಲ್ ಹಾಕಿ ದುರ್ಗಾ ಮಾತೆಯ ವಿಗ್ರಹವನ್ನು ಇಟ್ಟು ಪೂಜೆ ಮಾಡಲಾಗುತ್ತದೆ. ಷಷ್ಠಿ, ಸಪ್ತಮಿ, ಅಷ್ಟಮಿ ಮತ್ತು ನವಮಿ, ಸಂಧಿ ಪೂಜೆ ಹೀಗೆ ನಾನಾ ಹೆಸರಿನಲ್ಲಿ ದೇವಿಗೆ ಭಕ್ತಿಯನ್ನು ಸಮರ್ಪಿಸುತ್ತಾರೆ.**

ಕೋಲ್ಕತ್ತಾ-ಅಮೃತಸರ ಎಕ್ಸ್‌ಪ್ರೆಸ್, ಕೋಲ್ಕತ್ತಾ-ಜಮ್ಮು ತಾವಿ ಎಕ್ಸ್‌ಪ್ರೆಸ್ ಮತ್ತು ಕೋಲ್ಕತ್ತಾ-ಬಾಲುರ್‌ಘಾಟ್ ಎಕ್ಸ್‌ಪ್ರೆಸ್ ಎಂಬ ಮೂರು ರೈಲುಗಳ ವೇಳಾಪಟ್ಟಿ ಬದಲಾಯಿಸಲಾಗಿದೆ. ಜೊತೆಗೆ ಹೌರಾ ಮತ್ತು ಸೀಲ್ಡಾ ರೈಲು ನಿಲ್ದಾಣದಲ್ಲಿನ ಹಳಿಗಳ ಮೇಲೆ ನೀರು ತುಂಬಿದ್ದ ಹಿನ್ನೆಲೆ ರೈಲ್ವೆ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ನೀರು ಸಂಗ್ರಹವಾಗುವುದನ್ನು ತಡೆಯಲು ತಗ್ಗು ಪ್ರದೇಶಗಲ್ಲಿ ಪಂಪ್‌ಗಳನ್ನು ನಿಯೋಜಿಸಲಾಗಿದೆ. ಇಂಡಿಗೋ ವಿಮಾನ ಸಂಸ್ಥೆ ಎಕ್ಸ್‌ನಲ್ಲಿ ತನ್ನ ಪ್ರಯಾಣಿಕರಿಗೆ ಹೀಗೆಂದು ಮಾಹಿತಿ ನೀಡಿದೆ, ಕೋಲ್ಕತ್ತಾದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ, ವಿಮಾನ ಹಾರಟದಲ್ಲಿ ವ್ಯತ್ಯಯ ಉಂಟಾಗಲಿದೆ.



ಕೋಲ್ಕತ್ತಾಗೆ ಹೋಗುವ, ಅಲ್ಲಿಂದ ಹೊರಡುವ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಇರಲಿದೆ.ಹೀಗಾಗಿ ನಿಮ್ಮ ಮನೆಯಿಂದ ವಿಮಾನ ನಿಲ್ದಾಣಕ್ಕೆ ಹೊರಡುವ ಮುನ್ನ ನಮ್ಮ ಇಂಡಿಗೋ ವಿಮಾನ ಸಂಸ್ಥೆಯ ಅಧಿಕೃತ ವೆಬ್‌ಸೈಟ್ ವೀಕ್ಷಿಸುತ್ತಿರಿ ಎಂದು ಮನವಿ ಮಾಡಿಕೊಂಡಿದೆ. ಇದುವರೆಗೂ ಕೋಲ್ಕತ್ತಾದಲ್ಲಿ ಮೂವತ್ತು ವಿಮಾನ ಹಾರಟದಲ್ಲಿ ವ್ಯತ್ಯಯ ಉಂಟಾಗಿದೆ. ಕೋಲ್ಕತ್ತಾ ಮೇಯರ್, ಹಿರಿಯ ತೃಣಮೂಲ ಕಾಂಗ್ರೆಸ್ ನಾಯಕ ಫಿರ್ಹಾದ್ ಹಕೀಮ್ ಮಾತನಾಡಿ, ಈಹಿಂದೆ ಎಂದಿಗೂ ನಾನು ಇಷ್ಟೊಂದು ಮಳೆಯಾಗಿದ್ದು, ನೋಡಿಲ್ಲ. ನಾನಿರುವ ಪ್ರದೇಶದಲ್ಲೂ ಭಾರಿ ಮಳೆಯಾಗುತ್ತಿದೆ. ರಾತ್ರಿ ಮಳೆ ಬಾರದಿದ್ದರೆ, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವ ನಿರೀಕ್ಷೆಯಿದೆ.

## ಮಿನಿ ನ್ಯೂಸ್

### ವಿಮಾನದ ಲ್ಯಾಂಡಿಂಗ್ ಗೇರ್ ಜಾಗದಲ್ಲಿ ಅಡಗಿಕೊಂಡು ದೆಹಲಿಗೆ ಬಂದಿಳಿದ ಅಫ್ಘಾನ್ ಹುಡುಗ

**ನವದೆಹಲಿ:** ವಿಮಾನದ ಲ್ಯಾಂಡಿಂಗ್ ಗೇರ್ ಜಾಗದಲ್ಲಿ ಅಡಗಿಕೊಂಡು ಕಾಬೂಲ್‌ನಿಂದ ಅಫ್ಘಾನ್ ಹುಡುಗ ಅಚ್ಚರಿಯ ರೀತಿಯಲ್ಲಿ ದೆಹಲಿಗೆ ಬಂದಿದ್ದಾನೆ. ಸುಮರು 2 ಗಂಟೆಗಳ ಪ್ರಯಾಣದ ನಂತರ ಕೆಎಎಂ ಏರ್‌ಲೈನ್ಸ್ ವಿಮಾನ ಆರ್‌ಕ್ಯೂ -4401 ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದಾಗ ಈ ಘಟನೆ ವರದಿಯಾಗಿದೆ. ನಂತರ ಸುಮಾರು 13 ವರ್ಷದ ಹುಡುಗನನ್ನು ಅದೇ ವಿಮಾನದಲ್ಲಿ ಅಫ್ಘಾನಿಸ್ತಾನಕ್ಕೆ ಕಳುಹಿಸಲಾಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣದ ಭದ್ರತಾ ನಿಯಂತ್ರಣ ಕೊಠಡಿಗೆ ಬಾಲಕನೊಬ್ಬ ವಿಮಾನ ದಿಂದ ಇಳಿದ ಬಳಿಕ ಅಲೆದಾಡುತ್ತಿರುವುದು ಕಂಡುಬಂತು ಎಂದು ವಿಮಾನಯಾನ ಅಧಿಕಾರಿಗಳು ತಿಳಿಸಿದ್ದಾರೆ. ಅಫ್ಘಾನ್‌ನ ಕುಂಡುಜ್ ನಗರದ ಮೂಲದ ಬಾಲಕನನ್ನು ವಿಮಾನಯಾನ ಸಿಬ್ಬಂದಿ ಬಂಧಿಸಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಗೆ ಹಸ್ತಾಂತರಿಸಿದಾಗಅವನನ್ನು ವಿಚಾರಣೆಗಾಗಿ ವಿಮಾನ ನಿಲ್ದಾಣದ ಟರ್ಮಿನಲ್ 3 ಕ್ಕೆ ಕರೆತಂದರು.

ತಾನು ಕಾಬೂಲ್ ವಿಮಾನ ನಿಲ್ದಾಣಕ್ಕೆ ನುಸುಳಿದೆ ಮತ್ತು ಹೇಗೋ ಆ ವಿಮಾನದ ಹಿಂಭಾಗದ ಕೇಂದ್ರ ಲ್ಯಾಂಡಿಂಗ್ ಗೇರ್ ವಿಭಾಗ ದೊಳಗೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿದ್ದೇನೆ ಎಂದು ಅವನು ಅಧಿಕಾರಿಗಳಿಗೆ ಹೇಳಿದನು. ವಿಚಾರಣೆ ಮಾಡಿದ ನಂತರ, ಮಧ್ಯಾಹ್ನ 12:30 ರ ಸುಮಾರಿಗೆ ಹೊರಟ ಅದೇ ವಿಮಾನದ ಮೂಲಕ ಅಫ್ಘಾನ್ ಹುಡುಗನನ್ನು ವಾಪಸ್ ಕಳುಹಿಸಲಾಯಿತು ಎಂದು ಅವರು ಹೇಳಿದರು. ಕೆಎಎಂ ವಿಮಾನಯಾನ ಸಂಸ್ಥೆಯ ಭದ್ರತಾ ಅಧಿಕಾರಿಗಳು ಲ್ಯಾಂಡಿಂಗ್ ಗೇರ್ ವಿಭಾಗದ ಭದ್ರತಾ ಪರಿಶೀಲನೆ ನಡೆಸಿದರು ಮತ್ತು ಆ ಹುಡುಗ ಹೊತ್ತೊಯ್ದಿದ್ದ ಸಣ್ಣ ಕೆಂಪು ಬಣ್ಣದ ಸ್ಪೀಕರ್ ಅನ್ನು ಪತ್ತೆ ಮಾಡಿದ್ದಾರೆ. ಸಂಪೂರ್ಣ ತಪಾಸಣೆ ನಂತರ ವಿಮಾನವನ್ನು ಸುರಕ್ಷಿತವೆಂದು ಘೋಷಿಸಲಾಯಿತು ಎಂದರು.

### ಪತ್ನಿ ಕೊಲೆ ವಿಚಾರವನ್ನು ಫೇಸ್‌ಬುಕ್ ಲೈವ್‌ನಲ್ಲಿ ಬಹಿರಂಗಗೊಳಿಸಿದ ಪತಿ

**ತಿರುವನಂತಪುರಂ:** ಪತ್ನಿ ಸ್ನಾನ ಮಾಡುವಾಗ ಹಿಂದಿನಿಂದ ಬಂದ ಪತಿರಾಯ ಆಕೆಗೆ ಚೂರಿಯಲ್ಲಿ ಇರಿದು ಕೊಲೆ ಮಾಡಿ ನಂತರ ಫೇಸ್ ಬುಕ್ ಲೈವ್‌ನಲ್ಲಿ ಹತ್ಯೆ ಮಾಡಿರುವುದನ್ನು ಒಪ್ಪಿಕೊಂಡಿರುವ ಘಟನೆ ಕೇರಳದಲ್ಲಿ ನಡೆದಿದೆ. ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ಬರ್ಬರವಾಗಿ ಕೊಲೆ ಮಾಡಿದ್ದಾನೆ. ಪೊಲೀಸರಿಗೆ ಶರಣಾಗುವ ಮೊದಲು, ಫೇಸ್‌ಬುಕ್‌ನಲ್ಲಿ ಲೈವ್ ವಿಡಿಯೋ ಮಾಡಿ, ತಾನು ಕ್ರೂರವಾಗಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುವ ಘಟನೆ ವಳಕ್ಕುಡುವಿನ ಪ್ಲಾಚೇರಿಯಲ್ಲಿ ನಡೆದಿದೆ. ಕೊಲೆಯಾದ ಮಹಿಳೆಯನ್ನು 39 ವರ್ಷದ ಶಾಲಿನಿ ಎಂದು ಗುರುತಿಸಲಾಗಿದೆ. ನಿನ್ನೆ ಬೆಳಗ್ಗೆ 6.30 ರ ಸುಮಾರಿಗೆ ಶಾಲಿನಿ ಸ್ನಾನ ಮಾಡುತ್ತಿದ್ದಾಗ, ಆಕೆಯ ಪತಿ ಹರಾತ್ತನೆ ಆಕೆಯ ಮೇಲೆ ಹಲ್ಲೆ ನಡೆಸಿದ್ದಾನೆ. ಅವರ 19 ವರ್ಷದ ಮಗ ಈ ಕುರಿತಂತೆ ಪೊಲೀಸರಿಗೆ ದೂರು ನೀಡಿದ್ದಾನೆ. ದೂರಿನ ಆಧಾರದ ಮೇಲೆ, ಆರೋಪಿ ಐಸಾಕ್ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 103(1) (ಕೊಲೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ದಂಪತಿ ನಡುವೆ ಈ ಹಿಂದೆಯೂ ಜಗಳಗಳು ನಡೆದಿದ್ದವು. ಶಾಲಿನಿ ಸ್ನಾನ ಮಾಡಲು ಹೋದಾಗ, ಆರೋಪಿಯು ಆಕೆಯ ಮೇಲೆ ಚಾಕುವಿನಿಂದ ಹಲ್ಲೆನಡೆಸಿದ್ದಾನೆ. ಮಹಿಳೆಯ ಕುತ್ತಿಗೆ, ಎದೆ ಮತ್ತು ಬೆನ್ನಿಗೆ ಆಳವಾದ ಗಾಯಗಳಾಗಿವೆ ಎಂದು ಎಫ್‌ಐಆರ್‌ನಲ್ಲಿ ದಾಖಲಾಗಿದೆ. ಮೃತ ಮಹಿಳೆ ಮತ್ತು ಆರೋಪಿ ಇಬ್ಬರ ಮೊಬೈಲ್ ಫೋನ್‌ಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ನೆರೆಮನೆಯ ಮಗುವಿಗೆ ವಿಷ ಹಾಕಿ ಕೊಲೆಗೆ ಯತ್ನಿಸಿದ ಯುವತಿ ಬಂಧನ

**ರಾಂಚಿ:** ಯುವತಿಯೊಬ್ಬಳು ನೆರೆ ಮನೆಯ ಮಗುವಿಗೆ ವಿಷ ಬೆರೆಸಿದ ಆಹಾರ ನೀಡಿ ಕೊಲೆ ಮಾಡಲು ಯತ್ನಿಸಿರುವ ಘಟ ನಡೆದಿದೆ. ಇದೀಗ ಯುವತಿಯನ್ನು ಜೈಪುರದ ಧರ್ಮಶಾಲಾ ಠಾಣೆ ಪೊಲೀಸರು ಬಂಧಿಸಿದ್ದಾರೆ. ಭೂಬನ್ ಗ್ರಾಮದ ಮಧುಸ್ಮಿತ ಮೊಹಾಂತಿ(21) ಕೊಲೆಗೆ ಯತ್ನಿಸಿರುವ ಯುವತಿ. ಕಳೆದ ಸೆ.8ರಂದು ಮಧುಸ್ಮಿತ ಪಕ್ಕದ ಮನೆಯ ಎರಡು ವರ್ಷದ ಮಗುವನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ವಿಷ ಬೆರೆಸಿದ ಆಹಾರವನ್ನು ತಿನಿಸಿದ್ದಾಳೆ. ಆಹಾರ ಸೇವಿಸಿದ ನಂತರ ಮಗು ಅಸ್ವಸ್ಥಗೊಂಡಿದೆ. ಮಂಕಾಗಿದ್ದ ಮಗನನ್ನು ತಂದೆತಾಯಿ ಮೊದಲಗೆ ಧರ್ಮಶಾಲಾದ ಕಮ್ಯುನಿಟಿ ಹೆಲ್ತ್ ಸೆಂಟರ್‌ನಲ್ಲಿ ಚಿಕಿತ್ಸೆ ಕೊಡಿಸಿ ನಂತರ ಕಟಕ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಪೋಸ್ಟ್ ಗ್ರಾಜುಯೇಟ್ ಇನ್ಸಿಟ್ಯೂಟ್ ಆಫ್ ಪೀಡಿಯಾಟ್ರಿಕ್ಸ್ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದಾರೆ.


ಅಲ್ಲಿ ವೈದ್ಯರು ಪರೀಕ್ಷಿಸಿ ಮಗುವಿಗೆ ವಿಷಹಾರ ನೀಡಲಾಗಿದೆ ಮಾಡಿದ್ದಾರೆ. ಎಂದು ಖಚಿತಪಡಿಸಿದ್ದಾರೆ. ದೀರ್ಘ ಕಾಲದ ಶುಶ್ರುಸೆಯ ನಂತರ ಸೆ.20ರಂದು ಮಗುವನ್ನು ಡಿಸಾರ್ಚ್ ಬಳಿಕ ಅನುಮಾನಗೊಂಡ ಗಂಡು ಮಗುವಿನ ತಂದೆ ಧರ್ಮಶಾಲಾ ಠಾಣೆಗೆ ಹೋಗಿ ಮೊಹಾಂತಿ ವಿರುದ್ಧ ದೂರು ನೀಡಿದ್ದಾರೆ.

### ಕಾರು, ಕ್ಯಾಂಟರ್ ನಡುವೆ ಭೀಕರ ಅಪಘಾತ : ನಾಲ್ವರ ಸಜೀವ ದಹನ

**ಅಲೆಗಢ:** ಕಾರು ಮತ್ತು ಕ್ಯಾಂಟರ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಎರಡು ವಾಹನಗಳಿಗೆ ಬೆಂಕಿ ಹೊತ್ತುಕೊಂಡ ಪರಿಣಾಮ ಮಹಿಳೆ, ಮಗು ಸೇರಿದಂತೆ ನಾಲ್ವರು ಸುಟ್ಟು ಕರಕಲಾಗಿರುವ ಘಟನೆ ಅಲಿಘಡದಲ್ಲಿ ನಡೆದಿದೆ. ಮಂಗಳವಾರ ಬೆಳಿಗ್ಗೆ ರಾಷ್ಟ್ರೀಯ ಹೆದ್ದಾರಿ-34ರಲ್ಲಿ ಕಾರು ಮತ್ತು ಕ್ಯಾಂಟರ್ ಡಿಕ್ಕಿ ಹೊಡೆದು ಮಹಿಳೆ ಮತ್ತು ಮಗು ಸೇರಿದಂತೆ ನಾಲ್ವರು ಜೀವಂತ ದಹನವಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗೋಪಿ ಸೇತುವೆ ಬಳಿ ಅಲಿಗಢ ಕಡೆಗೆ ಹೋಗುತ್ತಿದ್ದ ಕಾರು ಟೈರ್ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ಈ ಅಪಘಾತ ಸಂಭವಿಸಿದೆ.ವಾಹನವು ರಸ್ತೆ ವಿಭಜಕವನ್ನು ಭೇದಿಸಿ ಮುಂದೆ ಬರುತ್ತಿದ್ದ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಮೃಕ್ ಜೈನ್ ವರದಿಗಾರರಿಗೆ ತಿಳಿಸಿದ್ದಾರೆ. ಘರ್ಷಣೆಯ ನಂತರ ಎರಡೂ ವಾಹನಗಳು ಬೆಂಕಿಗೆ ಆಹುತಿಯಾಗಿ ನಾಲ್ವರು ಸ್ಥಳದಲ್ಲೇ ಸಾವನಪ್ಪಿದ್ದಾರೆ. ಅವರ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಜೈನ್ ಹೇಳಿದರು. ವಾಹನದಲ್ಲಿ ನಿಲುಕಿದ್ದ ಒಬ್ಬ ವ್ಯಕ್ತಿಯನ್ನು ಬಾರಿಹೋಕರ ಸಹಾಯದಿಂದ ಹೊರತೆಗೆದು ಪೊಲೀಸರು ಜವಾಹರಲಾಲ್ ನೆಹರು ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಿದರು. ಅವರ ಸ್ಥಿತಿ ಗಂಭೀರವಾಗಿದೆ ಎಂದು ಅವರು ಹೇಳಿದರು. ಅಗ್ನಿಶಾಮಕ ದಳದವರು ಬೆಂಕಿಯನ್ನು ನಿಯಂತ್ರಣಕ್ಕೆ ತಂದರು, ಬಲಿಪಶುಗಳನ್ನು ಗುರುತಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ.

# 800 ರೂ. ಸಿನಿಮಾ ಟಿಕೆಟನ್ನ 1,29,999 ರೂ.ಗೆ ಖರೀದಿ

ತಮ್ಮಿಷ್ಟದ ನಟನಿಗಾಗಿ ಸರ್ವ ತ್ಯಾಗಕ್ಕೂ ಸಿದ್ಧವಿರುವ ಕೆಲ ಅಭಿಮಾನಿಗಳಿರ್ತಾರೆ. ಅಭಿಮಾನದ ಪರಾಕಾಷ್ಠೆಗೆ ಸಿಕ್ಕಿ ಹಣವನ್ನ ನೀರಿನಂತೆ ಖರ್ಚು ಮಾಡೋದಕ್ಕೂ ಅವರು ಯೋಚಿಸೋದಿಲ್ಲ. ಅಂಥದ್ದೇ ಹುಚ್ಚು ಅಭಿಮಾನಿಯೊಬ್ಬ ಹೈದ್ರಾಬಾದ್‌ನಲ್ಲಿ ಗಮನ ಸೆಳೆದಿದ್ದಾನೆ. ಕೇವಲ ಒಂದೇ ಒಂದು ಸಿನಿಮಾ ಟಿಕೆಟ್ ಅನ್ನು 1,29,999 ರೂಪಾಯಿ ಕೊಟ್ಟು ಖರೀದಿಸಿದ್ದಾನೆ.



ಆಂಧ್ರ ಡಿಸಿಎಂ ಆಗಿರುವ ನಟ ಪವನ್ ಕಲ್ಯಾಣ್ ಅಭಿಮಾನಿ ಈ ಹುಚ್ಚು ಸಾಹಸ ಮಾಡಿದ್ದಾನೆ. ಪವನ್ ಕಲ್ಯಾಣ್ ಒಜಿ ಸಿನಿಮಾ ಟ್ರೈಲರ್ ರಿಲೀಸ್ ಆಗುವ ಕಾರ್ಯಕ್ರಮದಲ್ಲಿ ಬೆನಿಫಿಟ್ ಶೋ ಹೆಸರಿನಲ್ಲಿ ಟಿಕೆಟ್ ಹರಾಜು ಕೂಗಲಾಗಿತ್ತು. ಈ ವೇಳೆ ಚೌಟುಪ್ಪಲ್‌ನ ಅಮುದಲ ಪರಮೇಶ್ ಹೆಸರಿನ ಹುಚ್ಚು ಅಭಿಮಾನಿ, ಹರಾಜಿನಲ್ಲಿ 1,29,999 ರೂಪಾಯಿ ಬೆಲೆ ಕೂಗಿ ಚಿತ್ರದ ಮೊದಲ ಟಿಕೆಟ್ ಖರೀದಿಸಿದ್ದಾನೆ.

ಅಂದಹಾಗೆ ಟಿಕೆಟ್ ಬೆಲೆ ಕೇವಲ 800 ರೂಪಾಯಿ ಆಗಿತ್ತಷ್ಟೆ. ಅದಕ್ಕವನು ಹರಾಜಿನಲ್ಲಿ 1,29,999 ದಾಖಲೆ ಬೆಲೆಗೆ ಕೊಂಡುಕೊಂಡಿರುವುದು ವಿಶೇಷ.



# ಕಾಂತಾರ ಚಾಪ್ಟರ್ 1 ಚಿತ್ರಕ್ಕೆ ರಾಜ್, ರಕ್ಷಿತ್ ಸಹಾಯ ಮಾಡಿಲ್ಲ

ರಿಷಬ್ ಶೆಟ್ಟಿ ಅವರು 'ಕಾಂತಾರ: ಚಾಪ್ಟರ್ 1' ಚಿತ್ರದ ಬಗ್ಗೆ ಮಹತ್ವದ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ. ರಾಜ್ ಬಿ ಶೆಟ್ಟಿ ಅವರು ಬರವಣಿಗೆಗೆ ಸಹಾಯ ಮಾಡಿಲ್ಲ ಎಂದು ರಿಷಬ್ ಸ್ಪಷ್ಟಪಡಿಸಿದ್ದಾರೆ. 'ಸು ಫ್ರಮ್ ಸೋ' ಚಿತ್ರದ ಶನೀಲ್ ಅವರು ಚಿತ್ರದ ಬರವಣಿಗೆಯಲ್ಲಿ ಭಾಗವಹಿಸಿದ್ದಾರೆ ಎಂದೂ ತಿಳಿಸಿದ್ದಾರೆ.

'ಕಾಂತಾರ ಚಾಪ್ಟರ್ 1' ಸಿನಿಮಾ ಬಗ್ಗೆ ಪ್ರೇಕ್ಷಕರು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಈ ಸಿನಿಮಾ ರಿಲೀಸ್‌ಗೆ ಬಾಕಿ ಇರೋದು ಇನ್ನು ಕೆಲವೇ ದಿನಗಳು ಮಾತ್ರ. ಹೀಗಿರುವಾಗಲೇ ಚಿತ್ರದ ಟ್ರೇಲರ್ ರಿಲೀಸ್ ಆಗಿ ಎಲ್ಲಾ ಕಡೆಗಳಲ್ಲಿ ಸದ್ದು ಮಾಡಿದೆ. ಈ ಸಿನಿಮಾದ ಟ್ರೇಲರ್ ಸಾಕಷ್ಟು ಜನರಿಗೆ ತಲುಪಿದೆ. ಇದರಿಂದ ಚಿತ್ರದ ಬಗ್ಗೆ ನಿರೀಕ್ಷೆ ಕೂಡ ಹೆಚ್ಚಾಗಿದೆ. ಈಗ ರಿಷಬ್ ಅವರು ಸಿನಿಮಾ ಬಗ್ಗೆ ಒಂದಷ್ಟು ಮಾಹಿತಿ ರಿವೀಲ್ ಮಾಡಿದ್ದಾರೆ. 'ಕಾಂತಾರ' ಸಿನಿಮಾ ಮಾಡುವಾಗ ರಾಜ್ ಬಿ ಶೆಟ್ಟಿ ಅವರು ಸಿನಿಮಾದ ಕ್ಲೈಮ್ಯಾಕ್ಸ್ ಬರವಣಿಗೆಯಲ್ಲಿ ಸಹಾಯ ಮಾಡಿದ್ದರು ಎನ್ನಲಾಗಿದೆ. ಆದರೆ, ಅವರು 'ಕಾಂತಾರ: ಚಾಪ್ಟರ್ 1' ಜೊತೆ ಕೈ ಜೋಡಿಸಿಲ್ಲ. ಈ ಬಗ್ಗೆ ರಿಷಬ್‌ಗೆ ಪ್ರಶ್ನೆ ಮಾಡಲಾಯಿತು. ಅವರು ಇದಕ್ಕೆ ಸ್ಪಷ್ಟನೆ ನೀಡಿದ್ದಾರೆ. 'ಕಾಂತಾರ ಚಾಪ್ಟರ್ 1 ಚಿತ್ರಕ್ಕೆ ರಕ್ಷಿತ್ ಆಗಲಿ, ರಾಜ್ ಆಗಲಿ ಬರವಣಿಗೆಯಲ್ಲಿ ಪಾಲ್ಗೊಂಡಿಲ್ಲ. ಅವರು ಅವರದ್ದೇ ಆದ ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇದ್ದರು' ಎಂದು ರಿಷಬ್ ಅವರು ಹೇಳಿಕೆ ನೀಡಿದ್ದಾರೆ. ಈ ಚಿತ್ರದಲ್ಲಿ 'ಸು ಫ್ರಮ್ ಸೋ' ರವಿಯಣ್ಣ ಪಾತ್ರ ಮಾಡಿರೋ ಶನೀಲ್ ಅವರು ಬರವಣಿಗೆಯ ಭಾಗವಾಗಿದ್ದಾರೆ.



# ರಿಷಬ್ ಬಗ್ಗೆ ನನಗೆ ಹೆಮ್ಮೆ ಇದೆ



**ಪತ್ನಿ ಪ್ರಗತಿ ಶೆಟ್ಟಿ ಭಾವುಕ ನುಡಿ**

ಕಾಂತಾರ ಚಾಪ್ಟರ್-1 ಸಿನಿಮಾ ಶೂಟಿಂಗ್‌ಗೆ ರಿಷಬ್ ಹೋಗ್ತಿದ್ದಾರೆ ಅಂದ್ರೆ ಅವರ ಪತ್ನಿ ಪ್ರಗತಿ ಶೆಟ್ಟಿ ಅದೆಷ್ಟೋ ದೇವಾನು ದೇವತೆಗಳಿಗೆ ಹರಕೆ ಹೊತ್ತಿದ್ದಾರಂತೆ. ದೇವರ ಮುಂದೆ ಪ್ರಾರ್ಥನೆ ಮಾಡಿದ್ದಾರಂತೆ. ಈ ಸಿನಿಮಾ ಶೂಟಿಂಗ್ ಮುಗಿಯುವವರೆಗೂ ಮಕ್ಕಳು ಶಾಲೆಗೆ ಹೋಗುವುದನ್ನೂ ನೋಡೋಕೆ ಆಗಿರ್ಲಿಲ್ಲವಂತೆ ನಟ ರಿಷಬ್‌ಗೆ.

ಈ ವೇಳೆ ಕಾಂತಾರ ಸಿನಿಮಾದಲ್ಲಿ ನಟಿಸಿದ ಕಲಾವಿದರ ಸಾವಿನ ಬಗ್ಗೆಯೂ ರಿಷಬ್ ಶೆಟ್ಟಿ ಫಸ್ಟ್ ಟೈಂ ರಿಯಾಕ್ಷನ್ ಕೊಟ್ಟಿದ್ದಾರೆ. ಕಾಂತಾರ ಶೂಟಿಂಗ್ ಟೈಂನಲ್ಲಿ ನಡೆದ ಅವಘಡಗಳ ಬಗ್ಗೆ ರಿಷಬ್ ಶೆಟ್ಟಿ ಮನಬಿಚ್ಚಿ ಮಾತಾಡಿದ್ದಾರೆ. ಮೂರು ವರ್ಷದ ಈ ಜರ್ನಿಯಲ್ಲಿ ನಾಲ್ಕು ಬಾರಿ ಸತ್ತು ಬದುಕಿದೆ ಎಂಬ ಆಘಾತಕಾರಿ ವಿಚಾರವನ್ನ ಬಿಚ್ಚಿಟ್ಟಿದ್ದಾರೆ. ಇದೇ ವೇಳೆ ಪತ್ನಿ ಕೂಡಾ ರಿಷಬ್ ಶೆಟ್ಟಿ ಬಗ್ಗೆ ಹೆಮ್ಮೆಯ ಸಂಗತಿಗಳನ್ನ ಹಂಚಿಕೊಂಡಿದ್ದಾರೆ.

ಇನ್ನು ಇದೇ ವೇಳೆ ಮಾತನಾಡಿದ ರಿಷಬ್ ಪತ್ನಿ ಪ್ರಗತಿ, ದೈವಗಳ ಆಶೀರ್ವಾದಿಂದ ಟ್ರೈಲರ್ ರಿಲೀಸ್ ಆಗಿದೆ. ಶೂಟಿಂಗ್ ವೇಳೆ ಸಿಕ್ಕಾಪಟ್ಟೆ ಕಷ್ಟ ಪಟ್ಟಿದ್ದೇವೆ. ರಿಷಬ್ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ಎಷ್ಟೇ ಅಡೆತಡೆ ಬಂದರೂ ಎಲ್ಲವನ್ನೂ ಎದುರಿಸಿ ಶ್ರಮದಿಂದ ಕೆಲಸ ಮಾಡಿದ್ದಾರೆ. ಇದು ಸುಲಭದ ಕೆಲಸವಲ್ಲ, ರೈಟರ್, ಡೈರೆಕ್ಟರ್, ಆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ವೇದಿಕೆ ಮೇಲೆ ಪತಿ ಬಗ್ಗೆ ಪತ್ನಿ ಪ್ರಗತಿ ಮಾತಾಡುತ್ತಲೇ ಭಾವುಕರಾಗಿದ್ದಾರೆ. ದೇಶದ ಚಿತ್ತ ಈಗ ಒನ್ಲಿ ಕಾಂತಾರದತ್ತ ಆಗಿದೆ. ಈ ಸಂದರ್ಭದಲ್ಲಿ ನಟ ನಿರ್ದೇಶಕ ರಿಷಬ್ ಶೆಟ್ಟಿ ಹಲವಾರು ಸಂಗತಿಗಳನ್ನ ಬಿಚ್ಚಿಟ್ಟಿದ್ದಾರೆ.

# ಮಗುವಿನ ನಿರೀಕ್ಷೆಯಲ್ಲಿ ಕತ್ರೀನಾ

**ಕುಕ್ಕೆಯಲ್ಲಿನ ಪೂಜಾ ಫಲ**

ಬಾಲಿವುಡ್ ಸ್ಟಾರ್ ನಟಿ ಕತ್ರಿನಾ ಕೈಫ್ ಹಾಗೂ ನಟ ವಿಕ್ಕಿ ಕೌಶಲ್ ದಂಪತಿ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ನಟಿ ಕತ್ರಿನಾ ಕೈಫ್ ಗರ್ಭಿಣಿ ಎಂಬ ಸುದ್ದಿಗಳು ಕಳೆದ ಕೆಲ ವಾರಗಳಿಂದಲೂ ಹರಿದಾಡುತ್ತಿದ್ದವು. ಇದೀಗ ಸುದ್ದಿ ಖಾತ್ರಿ ಆಗಿದೆ. ಸ್ವತಃ ಕತ್ರಿನಾ ಕೈಫ್ ಅವರು ಈ ಸುದ್ದಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಹಾಗೂ ವಿಕ್ಕಿ ಕೌಶಲ್ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ತಾವು ತಾಯಿ ಆಗಲಿರುವ ಸುದ್ದಿಯನ್ನು ಅಭಿಮಾನಿಗಳಿಗೆ ತಿಳಿಸಿದ್ದಾರೆ. ನಟ ವಿಕ್ಕಿ ಕೌಶಲ್ ಮತ್ತು ಕತ್ರಿನಾ ಕೈಫ್ ಅವರು 2021 ರಲ್ಲಿ ವಿವಾಹವಾದರು. ಕತ್ರಿನಾ ಕೈಫ್, ವಿಕ್ಕಿ ಕೌಶಲ್‌ಗಿಂತಲೂ ಏಳು ವರ್ಷ ದೊಡ್ಡವರು. ವಯಸ್ಸಿನ ಅಂತರವನ್ನು ನಿರ್ಲಕ್ಷಿಸಿ ಕತ್ರಿನಾ ಕೈಫ್ ಮತ್ತು ವಿಕ್ಕಿ ಕೌಶಲ್ ಅವರುಗಳು ಮದುವೆಯಾದರು. ಮದುವೆಯಾಗಿ ನಾಲ್ಕು ವರ್ಷದ ಬಳಿಕ ಈಗ ಈ ದಂಪತಿ ಪೋಷಕರಾಗುತ್ತಿದ್ದಾರೆ. ನಟಿ ಕತ್ರಿನಾ ಕೈಫ್ ಕೆಲ ತಿಂಗಳ ಹಿಂದಷ್ಟೆ ಕರ್ನಾಟಕದ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಿದ್ದರು. ಸಂತಾನ ಭಾಗ್ಯಕ್ಕಾಗಿ ಅವರು ವಿಶೇಷ ಪೂಜೆ ಮಾಡಿಸಿದ್ದರು ಎನ್ನಲಾಗಿತ್ತು. ಅದರಂತೆ ಈಗ ಕತ್ರಿನಾ ಕೈಫ್ ಗರ್ಭಿಣಿ ಆಗಿದ್ದು, ಮಗುವಿನ ನಿರೀಕ್ಷೆಯಲ್ಲಿದ್ದಾರೆ.

ತಮ್ಮ ಹಾಗೂ ಪತಿ ವಿಕ್ಕಿ ಕೌಶಲ್ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಕತ್ರಿನಾ ಕೈಫ್, 'ನಮ್ಮ ಜೀವನದ ಅತ್ಯುತ್ತಮ ಅಧ್ಯಾಯಯದ ಆರಂಭದಲ್ಲಿ ನಾವಿದ್ದೇವೆ. ಈ ಸಮಯದಲ್ಲಿ ನಮ್ಮ ಹೃದಯ ಪ್ರೀತಿ ಮತ್ತು ಕೃತಜ್ಞತೆಯಿಂದ ತುಂಬಿದೆ' ಎಂದು ಕತ್ರಿನಾ ಬರೆದುಕೊಂಡಿದ್ದಾರೆ. ಕತ್ರಿನಾ ಅವರ ಇನ್‌ಸ್ಟಾಗ್ರಾಂ ಪೋಸ್ಟ್‌ಗೆ ನಟಿ ಮೃಣಾಲ್ ಠಾಕೂರ್, ನೇಹಾ ದೂಪಿಯಾ, ಹರ್ಷಿಕಾ ಪೂಣಚ್ಚ, ಸೋನಂ ಕಪೂರ್, ರಕುಲ್ ಪ್ರೀತ್ ಸಿಂಗ್, ಜಾನ್ವವಿ ಕಪೂರ್ ಇನ್ನೂ ಹಲವಾರು ಸೆಲೆಬ್ರಿಟಿಗಳು ಶುಭ ಹಾರೈಸಿದ್ದಾರೆ, ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಕತ್ರಿನಾ ಕೈಫ್ ಬಾಲಿವುಡ್‌ನ ಸ್ಟಾರ್ ನಟಿ ಆಗಿದ್ದವರು.

# ಬ್ರೇಕಪ್ ಬಳಿಕ ಮೊದಲ ಬಾರಿ ಮುಖಾಮುಖಿ



**ಮಲೈಕಾನ ತಬ್ಬಿ ಆಲಂಗಿಸಿದ ಅರ್ಜುನ್**

ಅರ್ಜುನ್ ಕಪೂರ್ ಮತ್ತು ನಟಿ ಮಲೈಕಾ ಅರೋರಾ ಹಲವು ವರ್ಷಗಳ ಕಾಲ ಲಿವಿನ್ ರಿಲೇಷನ್‌ನಲ್ಲಿದ್ದರು. ಇಬ್ಬರ ಡೇಟಿಂಗ್ ಲೈಫ್ ಬಹಳ ಚರ್ಚೆಯಲ್ಲಿತ್ತು. ಮಲೈಕಾ ಹಾಗೂ ಅರ್ಜುನ್ ನಡುವಿನ ವಯಸ್ಸಿನ ಅಂತರದ ಬಗ್ಗೆ ಚರ್ಚೆಗಳಾಗುತ್ತಿತ್ತು. ಕಳೆದ ವರ್ಷ ಈ ಜೋಡಿ ಬೇರಾದರು. ಬ್ರೇಕಪ್ ಬಳಿಕ ಮೊದಲ ಬಾರಿಗೆ ಇಬ್ಬರೂ ಒಟ್ಟಿಗೆ ಭೇಟಿ ಆಗಿದ್ದಾರೆ.

ಬಣ್ಣದ ಜಗತ್ತಿನ ಅನೇಕ ಜೋಡಿಗಳು ಬೇರೆ ಆದ ನಂತರ ಪರಸ್ಪರ ಸ್ನೇಹ ಸಂಬಂಧವನ್ನು ಕಾಪಾಡಿಕೊಳ್ಳುವುದನ್ನು ಕಾಣಬಹುದು. ಆದರೆ ನಟಿ ಮಲೈಕಾ ಅರೋರಾ ಮತ್ತು ಅರ್ಜುನ್ ಕಪೂರ್ ಅವರೊಂದಿಗೆ ಇಂತಹದ್ದೇನೂ ಸಂಭವಿಸರಲಿಲ್ಲ. ಆದರೆ, ಇತ್ತೀಚೆಗೆ ಮುಂಬೈನಲ್ಲಿ ನಡೆದ ಕಾರ್ಯಕ್ರಮ ಒಂದರಲ್ಲಿ ಇವರು ಮುಖಾಮುಖಿ ಆದರು. ಇಬ್ಬರೂ ಮುಖಾ ಮುಖಿ ಆದಾಗ ಇಬ್ಬರಿಗೂ ಮುಜುಗರ ಆಯಿತು. ಆದರೆ, ಸುತ್ತಲೂ ಅನೇಕ ಪಾಪರಾಜಿಗಳು ಮತ್ತು ಛಾಯಾಗ್ರಾಹಕರು ಇದ್ದ ಕಾರಣ, ಮಲೈಕಾ ಮತ್ತು ಅರ್ಜುನ್ ಪರಸ್ಪರ ತಬ್ಬಿಕೊಂಡು ಮಾತನಾಡಲು ಪ್ರಯತ್ನಿಸಿದರು. ಆದರೆ ಅದರ ನಂತರ, ಇಬ್ಬರ ನಡುವಿನ ಹಿಂಜರಿಕೆ ಮತ್ತೆ ಕಾಣಿಸಿಕೊಳ್ಳಲು ಪ್ರಾರಂಭಿಸಿತು. ಈ ವೀಡಿಯೊಗಳು ಪ್ರಸ್ತುತ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿವೆ. ನೆಟ್ಟಿಗರು ಇದಕ್ಕೆ ವಿವಿಧ ಪ್ರತಿಕ್ರಿಯೆಗಳನ್ನು ನೀಡುತ್ತಿದ್ದಾರೆ. ಅರ್ಜುನ್ ಕಪೂರ್ ಸಹೋದರಿ ಜಾನ್ವಿ ಕಪೂರ್ ಅವರ 'ಹೋಮ್‌ಬೌಂಡ್' ಚಿತ್ರದ ಪ್ರದರ್ಶನಕ್ಕೆ ಆಗಮಿಸಿದ್ದರು. ಅದೇ ಸಮಯದಲ್ಲಿ, ಮಲೈಕಾ ಕೂಡ ಅಲ್ಲಿ ಹಾಜರಿದ್ದರು. ಒಂದು ವೀಡಿಯೊದಲ್ಲಿ, ಮಲೈಕಾ ಮತ್ತು ಅರ್ಜುನ್ ಇದ್ದಕ್ಕಿದ್ದಂತೆ ಮುಖಾಮುಖಿ ಆದರು.


# ಭಾರತ-ಬಾಂಗ್ಲಾದೇಶ ನಡುವೆ ಏಷ್ಯಾ ಕಪ್ ಫೈನಲ್

**ಒಂದು ಪಂದ್ಯದಿಂದ ಎಲ್ಲ ನಿರ್ಧಾರ**

ಭಾರತದ ಮುಂದಿನ ಪಂದ್ಯ, ಬುಧವಾರ ಬಾಂಗ್ಲಾದೇಶ ವಿರುದ್ಧ ನಡೆಯಲಿದೆ. ಈವರೆಗೆ ಯಾವುದೇ ತಂಡವು ಅಧಿಕೃತವಾಗಿ ಫೈನಲ್‌ಗೆ ಅರ್ಹತೆ ಪಡೆದಿಲ್ಲ, ಆದರೆ ಫೈನಲ್ ಪಂದ್ಯ ಭಾರತ v/s ಬಾಂಗ್ಲಾದೇಶ ನಡುವೆ ನಡೆಯಲಿದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಕಾರಣ ಕೂಡ ಇದೆ. ಏಷ್ಯಾಕಪ್ ಪಂದ್ಯಾವಳಿಯ ಇತಿಹಾಸವು ಇದೇ ಸೂಚಿಸುತ್ತದೆ.

ಲಿಟನ್ ದಾಸ್ ನಾಯಕತ್ವದಲ್ಲಿ, ಬಾಂಗ್ಲಾದೇಶ ಕ್ರಿಕೆಟ್ ತಂಡವು ಸೂಪರ್ 4 ಸುತ್ತಿನಲ್ಲಿ ಶ್ರೀಲಂಕಾವನ್ನು ಸೋಲಿಸಿತು, ಸದ್ಯ ಬಾಂಗ್ಲಾವನ್ನು ಭಾರತದ ನಂತರ ಟೂರ್ನಮೆಂಟ್‌ನ ಬಲಿಷ್ಠ ತಂಡವೆಂದು ಪರಿಗಣಿಸಲಾಗಿದೆ. ಈ ಗೆಲುವು ಬಾಂಗ್ಲಾದೇಶಕ್ಕೆ ಫೈನಲ್‌ನಲ್ಲಿ ಸ್ಥಾನ ಖಚಿತಪಡಿಸುತ್ತದೆ ಎಂದು ನಂಬಲಾಗಿದೆ. ಏತನ್ಮಧ್ಯೆ, ಟೂರ್ನಮೆಂಟ್‌ನಲ್ಲಿ ಒಂದು ಪಂದ್ಯವನ್ನು ಸಹ ಸೋಲದ ಏಕೈಕ ತಂಡ ಭಾರತವಾಗಿದೆ. ಭಾರತದ ಫೈನಲ್ ಹಾದಿ ಕೂಡ ಬಹುತೇಕ ಖಚಿತವಾಗಿದೆ.

ಶ್ರೀಲಂಕಾವನ್ನು ಸೋಲಿಸಿದ ನಂತರ ಬಾಂಗ್ಲಾದೇಶ ಫೈನಲ್ ತಲುಪುವ ಸಾಧ್ಯತೆಗಳು ಹೆಚ್ಚಿವೆ ಮತ್ತು ಇತಿಹಾಸವೂ ಇದನ್ನೇ ಸೂಚಿಸುತ್ತದೆ. ಕಳೆದ 13 ವರ್ಷಗಳಲ್ಲಿ, ಬಾಂಗ್ಲಾದೇಶ ಏಷ್ಯಾ ಕಪ್‌ನಲ್ಲಿ ಶ್ರೀಲಂಕಾವನ್ನು ಸೋಲಿಸಿದಾಗಲೆಲ್ಲ, ಬಾಂಗ್ಲಾದೇಶ ಫೈನಲ್ ತಲುಪಿದೆ. ಬಾಂಗ್ಲಾದೇಶ 2012 ರ ಆವೃತ್ತಿಯಲ್ಲಿ ಶ್ರೀಲಂಕಾವನ್ನು ಮೊದಲು ಸೋಲಿಸಿತು, ಆ ಋತುವಿನಲ್ಲಿ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿತು. ಆದಾಗ್ಯೂ, ಅವರು ಪಾಕಿಸ್ತಾನದ ವಿರುದ್ಧ ಫೈನಲ್‌ನಲ್ಲಿ ಸೋತರು.





ನಂತರ 2016 ರಲ್ಲಿ ಬಾಂಗ್ಲಾದೇಶ ಶ್ರೀಲಂಕಾವನ್ನು ಮತ್ತೊಮ್ಮೆ ಸೋಲಿಸಿತು, ಆ ಆವೃತ್ತಿಯಲ್ಲೂ ಫೈನಲ್ ತಲುಪಿತು ಆದರೆ ಭಾರತ ವಿರುದ್ಧ ಸೋತಿತು. 2018 ರಲ್ಲಿಯೂ ಅದೇ ರೀತಿ ಸಂಭವಿಸಿತು, ಬಾಂಗ್ಲಾದೇಶದ ಮೂರನೇ ಬಾರಿ ಫೈನಲ್‌ಗೇರಿತು. ಈ ಬಾರಿಯೂ ಅವರು ಭಾರತ ವಿರುದ್ಧ ಸೋತರು. ಇದು ಒಟ್ಟು ಮೂರು ಬಾರಿ ಸಂಭವಿಸಿದೆ, ತಂಡವು ಶ್ರೀಲಂಕಾವನ್ನು ಸೋಲಿಸಿದ ಅದೇ ಆವೃತ್ತಿಯಲ್ಲಿ ಫೈನಲ್ ತಲುಪಿದೆ.

ಬಾಂಗ್ಲಾದೇಶ ಭಾರತ ವಿರುದ್ಧ ಎಲ್ಲಾದರು ಸೋತರೆ 2025 ರ ಏಷ್ಯಾ ಕಪ್ ಫೈನಲ್‌ಗೆ ಸ್ಪರ್ಧಿಸುವುದಿಲ್ಲ ಎಂದು ಅರ್ಥವಲ್ಲ, ಆಗ ಭಾರತ ಶ್ರೀಲಂಕಾವನ್ನು ಸೋಲಿಸಬೇಕಾಗುತ್ತದೆ ಮತ್ತು ಬಾಂಗ್ಲಾ ಪಾಕಿಸ್ತಾನವನ್ನು ಸೋಲಿಸಬೇಕಾಗುತ್ತದೆ. ಈ ಸನ್ನಿವೇಶದಲ್ಲಿ, ಶ್ರೀಲಂಕಾ ಮತ್ತು ಪಾಕಿಸ್ತಾನ ತಲಾ ಶೂನ್ಯ ಅಂಕಗಳು ಮತ್ತು ಎರಡು ಅಂಕಗಳನ್ನು ಹೊಂದಿದ್ದರೆ, ಬಾಂಗ್ಲಾದೇಶ ನಾಲ್ಕು ಅಂಕಗಳನ್ನು ಹೊಂದಿ, ಏಷ್ಯಾ ಕಪ್ ಫೈನಲ್ ಭಾರತ ಮತ್ತು ಬಾಂಗ್ಲಾದೇಶವಾಗಲಿದೆ.

**2025 ರ ಏಷ್ಯಾ ಕಪ್ ಫೈನಲ್ ಯಾವಾಗ ಮತ್ತು ಎಲ್ಲಿ ನಡೆಯಲಿದೆ:** ಸೂಪರ್ 4 ಸುತ್ತಿನ ನಂತರ, ಏಷ್ಯಾಕಪ್ 2025 ಸೆಪ್ಟೆಂಬರ್ 28 ರ ಭಾನುವಾರದಂದು ಫೈನಲ್‌ನಲ್ಲಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಎರಡು ತಂಡಗಳ ನಡುವೆ ನಡೆಯಲಿದೆ. ಪ್ರಶಸ್ತಿ ಹಣಾಹಣಿಯ ಪಂದ್ಯ, ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ರಾತ್ರಿ 8 ಗಂಟೆಗೆ ಶುರುವಾಗಲಿದೆ.

# ರಾಹುಲ್‌ಗೆ ಮಹತ್ವದ ಜವಾಬ್ದಾರಿ



ಏಷ್ಯಾಕಪ್ ಭರದಿಂದ ಸಾಗಿದೆ. ಚಾಂಪಿಯನ್ ಪಟ್ಟದತ್ತ ದಿಟ್ಟ ಹೆಜ್ಜೆ ಇಟ್ಟಿರುವ ಟೀಮ್ ಇಂಡಿಯಾ, ಇದೇ ವೇಳೆ ಮುಂಬರೋ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಗೆ ಸಿದ್ಧತೆ ಆರಂಭಿಸಿದೆ. ಇನ್ನೆರೆಡು ದಿನದಲ್ಲಿ 15 ಸದಸ್ಯರ ಟೀಮ್ ಇಂಡಿಯಾ ಅನೌನ್ಸ್ ಆಗಲಿದೆ. 15 ಮಂದಿಯ ತಂಡದಲ್ಲಿ ಯಾರೆಲ್ಲಾ ಸ್ಥಾನ ಪಡೆಯೋ ರೇಸ್‌ನಲ್ಲಿದ್ದಾರೆ. ಏಷ್ಯಾಕಪ್‌ನಲ್ಲಿ ಟೀಮ್ ಇಂಡಿಯಾ ನಾಗಲೋಟ ಮುಂದುವರಿದಿದೆ. ಸೂಪರ್-4ನಲ್ಲಿ ಸೂಪರ್ ಆಟವಾಡ್ತಿರುವ ಟೀಮ್ ಇಂಡಿಯಾ, ಏಷ್ಯನ್ ಕಿಂಗ್ಸ್ ಆಗಿ ಮೆರೆಯೋಕೆ ಎರಡಜ್ಜೆಯಷ್ಟೇ ಬಾಕಿಯಿದೆ. ಆದ್ರೆ, ಏಷ್ಯಾಕಪ್ ಉಪಾಂತ್ಯಕ್ಕೆ ತಲುಪುತ್ತಿರುವ ಹೊತ್ತಲ್ಲೇ ಟೀಮ್ ಮ್ಯಾನೇಜ್ ಮೆಂಟ್, ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯ ಪ್ರಿಪರೇಷನ್ ಆರಂಭಿಸಿದೆ. ಟೆಸ್ಟ್ ತಂಡ ಪ್ರಕಟಿಸೋಕೆ ತೆರೆ ಮರೆಯಲ್ಲೇ ಕಸರತ್ತು ನಡೆಸ್ತಿರುವ ಸೆಲೆಕ್ಷನ್ ಕಮಿಟಿ, ಕೆಲ ಅಚ್ಚರಿಯ ಆಯ್ಕೆಗೆ ಮುಂದಾಗಿದೆ. 2 ಪಂದ್ಯಗಳ ಟೆಸ್ಟ್ ಸರಣಿಗೆ ಶುಭ್‌ಮನ್ ಗಿಲ್ ನಾಯಕತ್ವದ 15 ಜನರ ತಂಡ ಪ್ರಕಟವಾಗಲಿದೆ. ಈ 15 ಸದಸ್ಯರ ತಂಡದಲ್ಲಿ ಓಪನರ್‌ಗಳಾಗಿ ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್ ಆಯ್ಕೆ ಕನ್ಫರ್ಮ್ ಆಗಿದೆ. ಇನ್ನುಳಿದಂತೆ 3ನೇ ಕ್ರಮಾಂಕಕ್ಕೆ ಸಾಯಿ ಸುದರ್ಶನ್, ಬ್ಯಾಕ್ ಅಫ್ ಓಪನರ್ ಆಗಿ ಅಭಿಮನ್ಯು ಈಶ್ವರನ್ ಸ್ಥಾನಗಿಟ್ಟಿಸಿಕೊಳ್ಳಲಿದ್ದಾರೆ. ಇಂಗ್ಲೆಂಡ್ ಸರಣಿಯಲ್ಲಿ ಇಂಜುರಿಗೆ ತುತ್ತಾಗಿದ್ದ ರಿಷಭ್ ಪಂತ್, ಸಂಪೂರ್ಣ ಚೇತರಿಸಿಕೊಂಡಿಲ್ಲ. ಹೀಗಾಗಿ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯಿಂದ ದೂರ ಉಳಿಯಲಿದ್ದು, ಧ್ರುವ್ ಜುರೇಲ್ ವಿಕೆಟ್ ಕೀಪರ್ ಆಗಿ ಆಯ್ಕೆಯಾಗಲಿದ್ದಾರೆ. ಬ್ಯಾಕ್ ಅಪ್ ವಿಕೆಟ್ ಕೀಪರ್ ಆಗಿ ಜಗದೀಶನ್ ಆಯ್ಕೆ ಫಿಕ್ಸ್. ಆದ್ರೆ, ಪಂತ್ ಅಲಭ್ಯತೆಯಲ್ಲಿ ಉಪ ನಾಯಕ ಯಾರು ಅನ್ನೋ ಪ್ರಶ್ನೆ ಕಾಡ್ತಿದೆ. ಕೆ.ಎಲ್.ರಾಹುಲ್‌ಗೆ ವೈಸ್ ಕ್ಯಾಪ್ಟನ್ ಪಟ್ಟ ನೀಡೋಕೆ ಸೆಲೆಕ್ಷನ್ ಕಮಿಟಿ ಚಿಂತನೆ ನಡೆಸ್ತಿದೆ. ಇಂಗ್ಲೆಂಡ್ ಸರಣಿಯಲ್ಲಿ ಸ್ಥಾನ ಪಡೆದಿದ್ದ ಕರುಣ್ ನಾಯರ್, 8 ವರ್ಷಗಳ ಬಳಿಕ ಟೀಮ್ ಇಂಡಿಯಾಗೆ ಕಮ್‌ಬ್ಯಾಕ್ ಮಾಡಿದ್ದರು. ಆದ್ರೆ, ಕಂಪ್ಲೀಟ್ ವೈಫಲ್ಯ ಅನುಭವಿಸಿದ ಕರುಣ್ ನಾಯರ್, ವೆಸ್ಟ್ ಇಂಡೀಸ್ ಸರಣಿಯಲ್ಲಿ ಕಾಣಿಸಿಕೊಳ್ಳುವುದು ಅನುಮಾನವಾಗಿದೆ. ಕರುಣ್ ನಾಯರ್ ಸ್ಥಾನದಲ್ಲಿ ಎಂಟ್ರಿ ನೀಡಲು ಇಬ್ಬರು ಕಾದು ಕುಳಿತಿದ್ದಾರೆ. ಶ್ರೇಯಸ್ ಅಯ್ಯರ್ ದೇವದತ್ ಪಡಿಕ್ಕಲ್ ಸ್ಥಾನದ ನಿರೀಕ್ಷೆಯಲ್ಲಿದ್ದಾರೆ. ಸದ್ಯ ಆಸ್ಟ್ರೇಲಿಯಾ ಎ ಎದುರಿನ ಅನಧಿಕೃತ ಟೆಸ್ಟ್‌ನಲ್ಲಿ ಪಡಿಕ್ಕಲ್ ಬೆಸ್ಟ್ ಪರ್ಫಾಮೆನ್ಸ್ ನೀಡಿದ್ದಾರೆ.

# ಬಿಗ್ ಸ್ಟಾರ್‌ಗಳಿಗೆ ಗೇಟ್‌ಪಾಸ್..



ಆರ್‌ಸಿಬಿ ಐಪಿಎಲ್ 19ನೇ ಆವೃತ್ತಿಗೆ ಹಾಲಿ ಚಾಂಪಿಯನ್ ಆಗಿ ಎಂಟ್ರಿ ನೀಡಲಿದೆ. ರಜತ್ ಪಾಟೀದಾರ್ ನಾಯಕತ್ವದಲ್ಲಿ, ಪಂಜಾಬ್ ಕಿಂಗ್ಸ್ ಸೋಲಿಸಿ ಚೊಚ್ಚಲ ಪ್ರಶಸ್ತಿಗೆ ಮುತ್ತಿಟ್ಟಿದೆ. ಇದೀಗ ಐಪಿಎಲ್-2026 ಸಿದ್ಧತೆ ನಡೆಯುತ್ತಿದ್ದು, ಫ್ರಾಂಚೈಸಿ ಕಣ್ಣು ಮಿನಿ ಹರಾಜಿನತ್ತ ನೆಟ್ಟಿದೆ.

**ಲಿಯಾಮ್ ಲಿವಿಂಗ್‌ಸ್ಟೋನ್:** ಇಂಗ್ಲೆಂಡ್ ಆಲ್‌ರೌಂಡರ್ ಆಗಿರುವ ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನು ಆರ್‌ಸಿಬಿ 8.75 ಕೋಟಿಗೆ ಖರೀದಿಸಿತ್ತು. ಆದರೆ ಅವರ ಪ್ರದರ್ಶನ ನಿರಾಶದಾಯಕವಾಗಿದೆ. 8 ಇನ್ನಿಂಗ್ಸ್‌ಗಳಲ್ಲಿ 112 ರನ್ ಗಳಿಸಿದ್ದಾರೆ. ಬೌಲಿಂಗ್ ನಲ್ಲೂ ಖದರ್ ತೋರಿಸಲಿಲ್ಲ. ಕೇವಲ 2 ವಿಕೆಟ್ ಪಡೆದು ಸುಮ್ಮನಾದರು. ಹೀಗಾಗಿ ಮಿನಿ ಹರಾಜಿಗೂ ಮುನ್ನ ಲಿವಿಂಗ್‌ಸ್ಟೋನ್‌ರನ್ನು ಬಿಡುಗಡೆ ಮಾಡಬಹುದು. 49 ಐಪಿಎಲ್ ಪಂದ್ಯಗಳಲ್ಲಿ 7 ಅರ್ಧಶತಕಗಳು ಸೇರಿ 1051 ರನ್ ಗಳಿಸಿದ್ದಾರೆ. ಅವರ ಸ್ಟ್ರೈಕ್ ರೇಟ್ 158.76. 13 ವಿಕೆಟ್‌ಗಳನ್ನು ಪಡೆದಿದ್ದಾರೆ.

**ಮಾಯಾಂಕ್ ಅಗರ್ವಾಲ್:** ಗಾಯಗೊಂಡ ದೇವದತ್ ಪಡಿಕ್ಕಲ್ ಬದಲಿಗೆ ಮಯಾಂಕ್ ಅಗರ್ವಾಲ್ ಜೊತೆ ಆರ್‌ಸಿಬಿ ಒಪ್ಪಂದ ಮಾಡಿಕೊಂಡಿತ್ತು. 2025 ರಲ್ಲಿ ಆರ್‌ಸಿಬಿ ಪರ ನಾಲ್ಕು ಪಂದ್ಯಗಳನ್ನು ಆಡಿರುವ ಮಯಾಂಕ್, 148.43 ಸ್ಟ್ರೈಕ್ ರೇಟ್‌ನಲ್ಲಿ 95 ರನ್ ಗಳಿಸಿದ್ದಾರೆ. ಮುಂದಿನ ಋತುವಿಗೆ ಪಡಿಕ್ಕಲ್ ಲಭ್ಯವಿರುತ್ತಾರೆ. ಆದ್ದರಿಂದ ಮಯಾಂಕ್ ಅವರನ್ನು ಬಿಡುಗಡೆಮಾಡಬಹುದು. ಐಪಿಎಲ್‌ನಲ್ಲಿ ಐದು ತಂಡಗಳ ಪರ ಆಡಿರುವ ಮಯಾಂಕ್‌ಗೆ ಅಪಾರ ಅನುಭವ ಇದೆ. 131 ಪಂದ್ಯಗಳನ್ನು 2,756 ರನ್ ಗಳಿಸಿದ್ದಾರೆ. ಒಂದು ಶತಕ ಮತ್ತು 13 ಅರ್ಧಶತಕ ಅವರ ಹೆಸರಲ್ಲಿ ಇದೆ.


**ಲುಂಗಿ ಎನ್‌ಗಿಡಿ:** ದಕ್ಷಿಣ ಆಫ್ರಿಕಾದ ಈ ವೇಗಿ ಉತ್ತಮ ಬೌಲರ್. ಆದರೆ ಅವರು ಐಪಿಎಲ್‌ನಲ್ಲಿ ಹೆಚ್ಚು ಪರಿಣಾಮ ಬೀರಲಿಲ್ಲ. ಮೊದಲು ಸಿಎಸ್‌ಕೆ ಮತ್ತು ಡೆಲ್ಲಿ ಕ್ಯಾಪಿಟಲ್ಸ್ 50 ಲಕ್ಷಕ್ಕೆ ಖರೀದಿಸಿತ್ತು. ಕಳೆದ ಆವೃತ್ತಿಯಲ್ಲಿ ಆರ್‌ಸಿಬಿ ಅವರನ್ನು 1 ಕೋಟಿಗೆ ಖರೀದಿಸಿತ್ತು. ಇದು ಅವರ ಮೂಲ ಬೆಲೆಯಾಗಿತ್ತು.

# ಪಾಕ್ ವಿರುದ್ಧದ ಪಂದ್ಯದಲ್ಲಿ ಐ ಸಿಂಬಲ್‌ನಲ್ಲಿ ಸಂಭ್ರಮ..

**ಏನಿದು ಹೊಸ ಸ್ಟೈಲ್..**

ಯುವ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಪಾಕಿಸ್ತಾನದ ವಿರುದ್ಧ ತಮ್ಮ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಹೃದಯ ಗೆದ್ದರು. ಕೇವಲ 39 ಎಸೆತಗಳಲ್ಲಿ 189.74 ಸ್ಟ್ರೈಕ್ ರೇಟ್‌ನಲ್ಲಿ 74 ರನ್ ಗಳಿಸಿ ಭಾರತವನ್ನು ಗೆಲುವಿನತ್ತ ಕೊಂಡೊಯ್ದರು. ಈ ವೀರೋಚಿತ ಪಂದ್ಯದ ನಂತರ 'ಎಲ್' ಆಕಾರದಲ್ಲಿ ಬೆರಳುಗಳನ್ನು ತೋರಿಸಿ ಸಂಭ್ರಮಿಸಿದರು. ಅಭಿಷೇಕ್ ಕೇವಲ 24 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇದು ಪಾಕಿಸ್ತಾನ ವಿರುದ್ಧ ಭಾರತೀಯ ಆಟಗಾರನೊಬ್ಬ ಗಳಿಸಿದ ವೇಗದ ಅರ್ಧಶತಕ. ಅಭಿಷೇಕ್ ಅವರ ಬ್ಯಾಟಿಂಗ್ ಕಣ್ತುಂಬಿಕೊಳ್ಳಲು ಕುಟುಂಬ ಕೂಡ ಪ್ರೇಕ್ಷಕರ ಗ್ಯಾಲರಿಯಲ್ಲಿತ್ತು. ಅಭಿಷೇಕ್ ಪ್ರೇಕ್ಷಕರ ಗ್ಯಾಲರಿಗೆ ಕಡೆಗೆ ಮುತ್ತುಗಳನ್ನು ಹಾರಿಬಿಟ್ಟರು. ನಂತರ 'ಐ' ಸನ್ನೆ ಮಾಡಿದರು. ಈ ಎಲ್ ಸನ್ನೆ ಏನನ್ನು ಸೂಚಿಸುತ್ತದೆ ಎಂಬ ಚರ್ಚೆ ಶುರುವಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಅಭಿಷೇಕ್, ಕುಟುಂಬದ ಸದಸ್ಯರು ಕ್ರೀಡಾಂಗಣಕ್ಕೆ ಬಂದಾಗ ವಿಶೇಷ ಎನರ್ಜಿ ಸಿಗುತ್ತದೆ, ಏಕಪಕ್ಷೀಯವಾಗಿ ಗೆಲ್ಲುತ್ತೇವೆ. ಇಂದು ನಾವು ಏಕಪಕ್ಷೀಯವಾಗಿ ಗೆದ್ದಿದ್ದೇವೆ. ಕುಟುಂಬ ಸದಸ್ಯರು ಬಂದಾಗ ಅದು ವಿಶೇಷ ಭಾವನೆ ಎಂದು ಅಭಿಷೇಕ್ ಕುಟುಂಬದ ಉಪಸ್ಥಿತಿಯ ಬಗ್ಗೆ ಹೇಳಿದರು.



# ಬಿದ್ದರೋ ಬಿದ್ದರೋ ಲವ್ವಲ್ಲಿ ಬಿದ್ದರೋ..



ಟೀಮ್ ಇಂಡಿಯಾ ಡೇರಿಂಗ್ ಬ್ಯಾಟರ್ ಅಭಿಷೇಕ್ ಶರ್ಮಾ ಕ್ರಿಕೆಟ್ ಲೋಕದ ಸೆನ್ಸಷನ್ ಆಗ್ಬಿಟ್ಟಿದ್ದಾರೆ. ಪಂಜಾಬ್ ಪುತ್ತರ್ ರಣಾರ್ಭಟ ಕಂಡು ಅಭಿಮಾನಿಗಳು ಫುಲ್ ಫಿದಾ ಆಗಿದ್ದಾರೆ. ಸೆನ್ಸೇಷನ್ ಆಟದ ಬಳಿಕ ಸೋಷಿಯಲ್ ಮೀಡಿಯಾದಲ್ಲಂತೂ ಅಭಿಷೇಕ್ ಹೆಸ್ರು ಸಖತ್ ಟ್ರೆಂಡಿಂಗ್‌ನಲ್ಲಿದೆ. ಇದ್ರ ನಡುವೆ ಓರ್ವ ಸುಂದರಿಯೊಂದಿಗೆ ಅಭಿಷೇಕ್ ಹೆಸರು ತಳುಕು ಹಾಕಿಕೊಂಡಿದೆ. ಆಕೆಯ ಹೆಸರು ಲೈಲಾ ಫೈಸಲ್..!

ಆನ್‌ಫೀಲ್ಡ್‌ನಲ್ಲಿ ಅಭಿಷೇಕ್ ಶರ್ಮಾ ಆರ್ಭಟ ನೋಡಿದವರೆಲ್ಲಾ ಗೂಗಲ್‌ನಲ್ಲಿ ಸರ್ಚಿಂಗ್ ಜೋರಾಗಿ ನಡೆದಿದೆ. ಅಭಿಷೇಕ್ ಹಿನ್ನಲೆ, ಕುಟುಂಬ ಬಗ್ಗೆ ಎಲ್ಲಾ ಸರ್ಚ್ ಮಾಡಿದ್ದಾರೆ. ಇದೇ ವೇಳೆ ಅಭಿಷೇಕ್ ಹುಡುಗಿಯ ಯಾರು ಅನ್ನೋ ಪ್ರಶ್ನೆಗೂ ಉತ್ತರ ಹುಡುಕಾಟ ನಡೆಸಿದ್ದಾರೆ. ಹಾಗೇ ಹುಡುಕಾಟ ನಡೆಸಿದವರಿಗೆ ಸಿಕ್ಕ ಉತ್ತರ ಲೈಲಾ ಫೈಸಲ್ ಈ ಲೈಲಾ ಫೈಸಲ್‌ಗೂ ಅಭಿಷೇಕ್ ಶರ್ಮಾ ಎಲ್ಲಿಂದ ಸಂಬಂಧ ಅನ್ನೋ ಪ್ರಶ್ನೆ ನಿಮ್ಮನ್ನ ಕಾಡಿರಬಹುದು. ಈ ಪ್ರಶ್ನೆಗೆ ಪಕ್ಕಾ ಉತ್ತರ ಸದ್ಯಕ್ಕಂತೂ ಸಿಕ್ಕಿಲ್ಲ. ಆದ್ರೆ, ಇವರಿಬ್ಬರು ತುಂಬಾ ಕ್ಲೋಸ್ ಆಗಿ ಕಾಣಿಸಿಕೊಂಡಿರೋ ಒಂದು ಫೋಟೋ ವೈರಲ್ ಆಗ್ತಿದೆ. ಈ ಫೋಟೋ ಕಾರಣದಿಂದಲೇ ಇವರಿಬ್ಬರು ರಿಲೇಶನ್‌ಶಿಪ್‌ನಲ್ಲಿದ್ದಾರೆ ಎಂಬ ರೂಮರ್ಸ್ ಹುಟ್ಟಿದೆ. ಇನ್‌ಸ್ಟಾಗ್ರಾಂನಲ್ಲಿ ಲೈಲಾ ಫೈಸಲ್ ಹಾಗೂ ಅಭಿಷೇಕ್ ಶರ್ಮಾ ಪರಸ್ಪರ ಫಾಲೋ ಮಾಡ್ತಿದ್ದಾರೆ. ಅಭಿಷೇಕ್ ಶರ್ಮಾ ಜೊತೆಗೆ ಅವರು ತಾಯಿ ಹಾಗೂ ತಂಗಿ ಕೋಮಲ್ ಶರ್ಮಾ ಕೂಡ ಫಾಲೋ ಮಾಡ್ತಿದ್ದಾರೆ. ಜೊತೆಗೆ ಅಭಿಷೇಕ್ ಶರ್ಮಾ ಆನ್‌ಫೀಲ್ಡ್‌ನಲ್ಲಿ ಸಾಲಿಡ್ ಪರ್ಫಾಮೆನ್ಸ್ ನೀಡಿದಾಗೆಲ್ಲಾ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿ ಲೈಲಾ ಫೈಸಲ್ ಶುಭಾಶಯ ಕೋರ್ತಾರೆ.

ಫೋಟೋ ಹಾಗೂ ಪೋಸ್ಟ್‌ಗಳೇ ಸದ್ಯ ಡೇಟಿಂಗ್ ಗಾಸಿಪ್‌ಗೆ ಆಹಾರವಾಗಿವೆ.

ಅಭಿಷೇಕ್ ಶರ್ಮಾ ಜೊತೆಗೆ ಲೈಲಾ ಫೈಸಲ್ ಸದ್ಯ ಸಖತ್ ಸದ್ದು ಮಾಡ್ತಿದೆ.

**ಪಕ್ಕಾ ಉತ್ತರ ಸದ್ಯಕ್ಕಂತೂ ಸಿಕ್ಕಿಲ್ಲ**

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966